
ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ಜಿ.ಎಸ್.ಅಮೂರ

ಬಹುಶ್ರುತ ವಿದ್ವಾಂಸರು

ಸಂಪುಟ 14 | ಸಂಚಿಕೆ 40 | ಅಕ್ಟೋಬರ್ 5–11, 2020 | ಪುಟ 16 | ರೂ. 10

Web : www.janashakthi.co.in e-mail : js_weekly@yahoo.com




ಕಾರ್ಮಿಕರನ್ನು ಗುಲಾಮರಾಗಿಸುವ ಮೂರು ಶಾಸನಗಳು



'ಯೋಗಿ'ಯ ರಾಜ್ಯದಲ್ಲಿ 'ಭೋಗಿ'ಗಳದ್ದೇ ಕಾರುಬಾರು



ಭಗತ್ ಸಿಂಗ್ ನೆನಪು



ಬಾಬ್ರಿ ತೀರ್ಪು: ನ್ಯಾಯದ ಅಣಕು









ರಾಷ್ಟ್ರವ್ಯಾಪಿ ರೈತರ ಪ್ರತಿಭಟನಾ ಉಪವಾಸ ಸತ್ಯಾಗ್ರಹ

ಕಾನೂನುಹೀನ ಉತ್ತರಪ್ರದೇಶದಲ್ಲಿ ಮತ್ತೊಂದು ಹೀನಕೃತ್ಯ–ಸಿಪಿಐ(ಎಂ) ಪೊಲಿಟ್ ಬ್ಯುರೊ ಖಂಡನೆ

ಉತ್ತರ ಪ್ರದೇಶದ ದಲಿತ ಅತ್ಯಾಚಾರ ಸಂತ್ರಸ್ಥೆ ಮತ್ತು ಆಕೆಯ ಕುಟುಂಬಕ್ಕೆ ನ್ಯಾಯವನ್ನು ನಿರಾಕರಿಸಿರುವ ಆದಿತ್ಯನಾಥ ಸರಕಾರದ ಕ್ರಮಗಳು ಅತ್ಯಂತ ನಾಚಿಕೆಗೇಡು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಬಲವಾಗಿ ಖಂಡಿಸಿದೆ. ಆಕೆಯ ಸಾವು ಸರಕಾರದ ನಿರ್ಲಕ್ಷ್ಯದ ನಿಲುವಿನ ಫಲಿತಾಂಶ. ಆಕೆ ಸಪ್ಟಂಬರ್ 14ರಂದು ನಾಲ್ಕು ಮೇಲ್ಜಾತಿ ಗಂಡಸರು ಎಸಗಿದ ಅತ್ಯಾಚಾರ ಅಪರಾಧದಲ್ಲಿ ಗಂಭೀರವಾಗಿ ಗಾಯಗೊಂಡಿದ್ದಳು. ಆಕೆಯ ನಾಲಗೆಯನ್ನು ಕತ್ತರಿಸಲಾಗಿತ್ತು, ವಿಪರೀತ ರಕ್ತಸ್ರಾವವಾಗುತ್ತಿತ್ತು. ಆದರೆ ಪೋಲೀಸರು ಐದು ದಿನ ಎಫ್‌ಐಆರ್ ಹಾಕಲು ನಿರಾಕರಿಸಿದರು, ಆಕೆಗೆ ತಕ್ಷಣ ವೈದ್ಯಕೀಯ ನೆರವನ್ನೂ ನಿರಾಕರಿಸಿದರು. ಅಂತಹ ನೆರವು ಸಿಕ್ಕಿದ್ದರೆ ಆಕೆಯ ಜೀವ ಉಳಿಯುತ್ತಿತ್ತೇನೋ. ಈ ಜಾತಿ ಕ್ರೌರ್ಯದ ಅಂತಿಮ ಕೃತ್ಯದಲ್ಲಿ ಪೋಲೀಸರು ಆಕೆಯ ಮೃತದೇಹವನ್ನೂ ಕುಟುಂಬಕ್ಕೆ ಕೊಡದೆ ತಾವೇ ದಹನ ಮಾಡಿದರು, ಆಮೂಲಕ ತಮ್ಮ ಮಗಳಿಗೆ ಒಂದು ಗೌರವಯುತ ಅಂತಿಮ ಸಂಸ್ಕಾರ ನಡೆಸುವ ಆಕೆಯ ಕುಟುಂಬದ ಹಕ್ಕನ್ನೂ ನಿರಾಕರಿಸಿದರು.

ಈ ಬರ್ಬರ ಜಾತಿ ಆಧಾರಿತ ಅತ್ಯಾಚಾರದ ಅಪರಾಧ ಉತ್ತರಪ್ರದೇಶದಲ್ಲಿ ಬಿಜೆಪಿ ಸರಕಾರದ ಅಡಿಯಲ್ಲಿ ಇರುವ ಸಂಪೂರ್ಣ ಕಾನೂನುಹೀನತೆ ಮತ್ತು ಜಾತಿವಾದಿ ಹಾಗೂ ಪ್ರತಿಗಾಮಿ ಶಕ್ತಿಗಳಿಗೆ ಸಿಗುತ್ತಿರುವ ಪೋಷಣೆಯನ್ನು ಬಿಂಬಿಸುತ್ತದೆ. ಇದರಿಂದಾಗಿ ದಲಿತರು ಮತ್ತು ಮಹಿಳೆಯರ ವಿರುದ್ಧ ಅಪರಾಧಗಳ ಸಂಖ್ಯೆಯಲ್ಲಿ ವಿಪರೀತ ಹೆಚ್ಚಳ ಉಂಟಾಗಿದೆ. ಇತ್ತೀಚಿನ ಎನ್.ಸಿ.ಆರ್.ಬಿ. ವರದಿ ಇದನ್ನು ದೃಢಪಡಿಸಿದೆ.

ಎಫ್.ಐ.ಆರ್. ಹಾಕಲು ನಿರಾಕರಿಸಿದ ಪೋಲಿಸ್ ಸಿಬ್ಬಂದಿಯ ವಿರುದ್ಧ ಮತ್ತು ಬಲವಂತವಾಗಿ ದಹನ ಕ್ರಿಯೆ ನಡೆಸಿದ ಕ್ರೂರ ಕೃತ್ಯಕ್ಕೆ ಹೊಣೆಗಾರರಾದವರ ವಿರುದ್ಧವೂ ಕ್ರಮ ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಜನವಾದಿ ಮಹಿಳಾ ಸಂಘಟನೆ ಖಂಡನೆ



ಇದೊಂದು ಅತ್ಯಂತ ಭಯಾನಕ ಘಟನೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ತೀವ್ರವಾಗಿ ಖಂಡಿಸಿದೆ. ಸಪ್ಟಂಬರ್ 30ರಂದು ದೆಹಲಿಯಲ್ಲಿ ಉತ್ತರಪ್ರದೇಶ ಭವನದ ಎದುರು ಜನವಾದಿ ಮಹಿಳಾ ಸಂಘಟನೆ, ಎನ್‌ಎಫ್‌ಐಡಬ್ಲ್ಯು, ಐಐಎಂಎಸ್‌ಎಸ್, ಎಐಎಸ್‌ಎಫ್, ಎಸ್‌ಎಫ್‌ಐ, ಎಐಡಿಎಸ್‌ಒ, ಡಿವೈ ಎಫ್.ಐ, ಎಐವೈಎಫ್, ಎ.ಐ.ಡಿ.ವೈ.ಒ, ಮತ್ತು ಅನ್‌ಹದ್ ಸಂಘಟನೆಗಳು ಪ್ರತಿಭಟನೆ ನಡೆಸಿವೆ.

ಪ್ರತಿಭಟನಾಕಾರರನ್ನು ದೆಹಲಿಯ ಪೋಲೀಸರು ಬಲವಂತವಾಗಿ ಬಂಧಿಸಿದ್ದು ಚಿಕ್ಕದೊಂದು ಪೋಲೀಸ್ ವಾಹನದಲ್ಲಿ ಅದರ ಸಾಮರ್ಥ್ಯಕ್ಕೆ ಮೀರಿ ಜನರನ್ನು ತುಂಬುತ್ತಿರುವ ವಿಡಿಯೋಗಳು ಪೋಲಿಸರ ವರ್ತನೆಗೆ ಸಾಕ್ಷಿಯಾಗಿದೆ. ದೈಹಿಕ ಅಂತರವನ್ನು ಕಾಪಾಡಬೇಕೆಂದು ಪುನಃ ಪುನಹ ಹೇಳುವ ಕೇಂದ್ರ ಸರಕಾರದ ಈ ನಡೆಯನ್ನು ಪ್ರತಿಭಟನಾಕಾರರು ತೀವ್ರವಾಗಿ ಖಂಡಿಸಿ ಬಂಧಿಸಿರುವವರನ್ನು ಕರೆದೊಯ್ಯಲು ಸೂಕ್ತ ವಾಹನ ತರಲು ಒತ್ತಾಯಿಸಿದ್ದಾರೆ.

ಅಪರಾಧ ಗಳನ್ನು ಪೋಷಿಸುವ, ಅಪರಾಧಿಗಳನ್ನು ರಕ್ಷಿಸುವ ಯು.ಪಿ. ಸರಕಾರ ಮತ್ತು ಅದಕ್ಕೆ ಪೂರಕವಾಗಿ ವರ್ತಿಸುವ ಕೇಂದ್ರದ ಗೃಹ ಇಲಾಖೆಯ ವರ್ತನೆಗಳನ್ನು ಖಂಡಿಸುತ್ತ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಕರ್ನಾಟಕ ರಾಜ್ಯ ಸಮಿತಿಯು ಬಂಧಿತರನ್ನು ಬೇಷರತ್ತಾಗಿ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದೆ.

ಡಿಎಸ್‌ಎಂಎಂ ಖಂಡನೆ–“ಪೋಲಿಸ್ ಹೇಳಿಕೆ ಅತ್ಯಂತ ಆಕ್ಷೇಪಾರ್ಹ”

ದಲಿತ ಶೋಷಣ ಮುಕ್ತಿ ಮಂಚ್ ಇದು ಉತ್ತರಪ್ರದೇಶದಲ್ಲಿನ ಇನ್ನೊಂದು ಜಘನ್ಯ ಘಟನೆ ಎಂದು ಖಂಡಿಸುತ್ತ, ಈ ಕುರಿತಂತೆ ಜಿಲ್ಲಾ ಪೋಲಿಸ್ ಸೂಪರಿಂಟೆಂಡೆಂಟರ ಹೇಳಿಕೆ ಅತ್ಯಂತ ಆಕ್ಷೇಪಣಾರ್ಹ ಎಮದಿದೆ. ಈ ಯುವತಿಯ ಮೇಲೆ ಅತ್ಯಾಚಾರ ನಡೆದಿದೆ ಎಂಬುದನ್ನು ಆತ ನಿರಾಕರಿಸಿದ್ದಾರೆ, ನಾಲಗೆಯನ್ನು ಕತ್ತರಿಸಲಿಲ್ಲ, ಆಕೆಯೇ ಕಚ್ಚಿಕೊಂಡಳು ಎಂದಿದ್ದಾರೆ! ಯುಪಿ ಪೊಲಿಸ್‌ನ ಸಿಬ್ಬಂದಿಯನ್ನು ಈ ಸುಳ್ಳು ಮಾಹಿತಿ ಮತ್ತು ಕರ್ತವ್ಯಚ್ಯುತಿಗಾಗಿ ದಂಡಿಸಬೇಕು. ಯುಪಿ ಪೋಲೀಸ್ ದಿಲ್ಲಿ ಪೋಲೀಸ್ ಜತೆಗೂಡಿ ಯುವತಿಯ ಕುಟುಂಬವನ್ನು ದೂರವಿಟ್ಟು ದಹನಕ್ರಿಯೆ ನಡೆಸಿರುವುದು ಇನ್ನೊಂದು ಭೀಕರ ಅನ್ಯಾಯ ಮತ್ತು ಅಮಾನವೀಯತೆಯ ಉದಾಹರಣೆ. ಯುಪಿಯಲ್ಲಿ ಇಂದು ದಲಿತರ ಮೇಲೆ ಅತ್ಯಾಚಾರ ನಡೆಸುವ ಮೇಲ್ಜಾತಿ ಗೂಂಡಾಗಳು, ಪೋಲೀಸರ ಕರ್ತವ್ಯಚ್ಯುತಿಗೆ ರಕ್ಷಣೆ ದೊರೆಯುತ್ತಿದೆ, ಇದರ ವಿರುದ್ಧ ದೇಶಾದ್ಯಂತ ಪ್ರತಿಭಟನೆ ನಡೆಸಬೇಕು ಎಂದು ಕರೆ ನೀಡಿದೆ.

ಬಾಬ್ರಿ ಮಸೀದಿ ಧ್ವಂಸ ತೀರ್ಪು–ನ್ಯಾಯದ ಅಪಹಾಸ್ಯ: ಸಿಪಿಐ(ಎಂ) ಪೊಲಿಟ್ ಬ್ಯುರೊ

ಬಾಬ್ರಿ ಮಸೀದಿ ಧ್ವಂಸ ಪ್ರಕರಣದ ಎಲ್ಲ 32 ಆಪಾದಿತರ ಖುಲಾಸೆ ಮಾಡಿರುವ ಲಕ್ನೌನ ವಿಶೇಷ ಸಿಬಿಐ ನ್ಯಾಯಾಲಯದ ತೀರ್ಪು ನ್ಯಾಯದ ಅಪಹಾಸ್ಯವೇ ಆಗುತ್ತದೆ. ಈ ತೀರ್ಪು ನೀಡಲು 28 ದೀರ್ಘ ವರ್ಷಗಳೇ ಹಿಡಿದವು, ಆದರೆ ನ್ಯಾಯ ನೀಡಿಲ್ಲ. ಈ ಕ್ರಿಮಿನಲ್ ಕೃತ್ಯದ ಜಾಗದಲ್ಲಿ ಅದಕ್ಕೆ ಮಾರ್ಗದರ್ಶನ ನೀಡಲು ಹಾಜರಿದ್ದ ಎಲ್ಲ ಉನ್ನತ ಆರೆಸ್ಸೆಸ್–ಬಿಜೆಪಿ–ವಿಹೆಚ್‌ಪಿ ಮುಖಂಡರು ಮಸೀದಿ ಧ್ವಂಸದ ಪಿತೂರಿಯ ಆಪಾದನೆಯಲ್ಲಿ ಅಮಾಯಕರು ಎಂದು ಕಂಡು ಬಂದಿದೆಯಂತೆ.

ಕಳೆದ ವರ್ಷ ನವಂಬರ್ 8ರಂದು ಅಯೋಧ್ಯಾ ತೀರ್ಪಿನಲ್ಲಿ ಸುಪ್ರಿಂ ಕೋರ್ಟ್ ಈ ಧ್ವಂಸಕಾರ್ಯ ಕಾನೂನಿನ ಘೋರ ಉಲ್ಲಂಘನೆ ಎಂದಿತ್ತು. ಈಗ ಲಕ್ನೌ ನ್ಯಾಯಾಲಯ ಈ ಅಪರಾಧವನ್ನು ಎಸಗಿದ ಪ್ರಮುಖರು ನಿರಪರಾಧಿಗಳು ಎಂದಿದೆ.

ಈ ತೀರ್ಪು ಸಂವಿಧಾನದ ಆಳ್ವಿಕೆಗೆ ಒಳಗಾಗಿರುವ ಒಂದು ಜಾತ್ಯತೀತ ಪ್ರಜಾಸತ್ತಾತ್ಮಕ ದೇಶ ಎಂಬ ಭಾರತದ ಪ್ರತಿಷ್ಠೆಗೆ ಕಳಂಕ ತರುತ್ತದೆ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಸಿಬಿಐ ಕೂಡಲೇ ಈ ತೀರ್ಪಿನ ವಿರುದ್ಧ ಅಪೀಲು ಹೋಗಬೇಕು ಎಂದು ಆಗ್ರಹಿಸಿದೆ.

ತೀವ್ರಗೊಳ್ಳುತ್ತಿದೆ ರೈತರ ಪ್ರತಿರೊಧ: ‘ದಿಲ್ಲಿ ಚಲೋ’– ರಾಷ್ಟ್ರೀಯ ಪ್ರತಿಭಟನೆ

ಅಕ್ಟೋಬರ್ 2ರಿಂದ ಬಿಜೆಪಿ ರಾಜಕೀಯ ಮುಖಂಡರ ಸಾಮಾಜಿಕ ಬಹಿಷ್ಕಾರ

ಹಲವು ರಾಜ್ಯಗಳಲ್ಲಿ ಸರದಿ ಉಪವಾಸ ಮುಷ್ಕರಗಳು

ಅಕ್ಟೋಬರ್ 14“ಎಂಎಸ್‌ಪಿ ಅಧಿಕಾರ ದಿನಾಚರಣೆ”–ಎಐಕೆಎಸ್‌ಸಿಸಿ ಕರೆ

ಕೃಷಿ ಸುಧಾರಣೆಗಳ ಹೆಸರಿನಲ್ಲಿ ತಂದಿರುವ ತಿದ್ದುಪಡಿಗಳ ವಿರುದ್ಧ ಪ್ರತಿರೋಧವನ್ನು ತೀವ್ರಗೊಳಿಸಲು ರೈತರ 250ಕ್ಕೂ ಹೆಚ್ಚು ಸಂಘಟನೆಗಳು ನಿರ್ಧರಿಸಿವೆ. ಮೋದಿ ಸರಕಾರ ಈ ರೈತ–ವಿರೋಧಿ ಆಕ್ರಮಣಗಳನ್ನು ಹಿಂತೆಗೆದುಕೊಳ್ಳುವ ವರೆಗೆ ಈ ಪ್ರತಿರೋಧ ನಿಲ್ಲುವುದಿಲ್ಲ ಎಂದು ಅವರು ನಿರ್ಧರಿಸಿದ್ದಾರೆ.

ಸಪ್ಟಂಬರ್ 29 ರಂದು ಒಂದು ಪ್ರತಿಕಾಗೋಷ್ಠಿಯಲ್ಲಿ ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ(ಎಐಕೆಎಸ್‌ಸಿಸಿ) ಈ ಕುರಿತ ಒಂದು ಪ್ರತಿರೋಧ ಕಾರ್ಯಾಚರಣೆ ಯೋಜನೆಯನ್ನು ಪ್ರಕಟಿಸಿದೆ. ಈ ಕಾರ್ಯಾಚರಣೆಯ ಕೊನೆಯಲ್ಲಿ ನವಂಬರ್26 ಮತ್ತು 27ರಂದು ‘ದಿಲ್ಲಿ ಚಲೋ’ ನಡೆಸಲಾಗುವುದು ಎಂದು ಅದು ಹೇಳಿದೆ.

ಅಕ್ಟೋಬರ್ 2ರಂದು, ಗಾಂಧಿ ಜಯಂತಿಯ ದಿನದಂದು ಬಿಜೆಪಿಯ ರಾಜಕೀಯ ಮುಖಂಡರ ಮತ್ತು ಜತೆಗೆ ಇದುವರೆಗೆ ಈ ಬಗ್ಗೆ ಸ್ಪಷ್ಟ ನಿಲುವು ಪ್ರಕಟಿಸಿರದ ರಾಜಕೀಯ ಪಕ್ಷಗಳ ಮುಖಂಡರ ಸಾಮಾಜಿಕ ಬಹಿಷ್ಕಾರದ ಪ್ರತಿಜ್ಞೆಯನ್ನು ದೇಶಾದ್ಯಂತ ರೈತರು ಕೈಗೊಳ್ಳಲಿದ್ದಾರೆ. ಅಂದು ಕರ್ನಾಟಕ, ತಮಿಳುನಾಡು, ತೆಲಂಗಾಣ ಮತ್ತು ಉತ್ತರಪ್ರದೇಶದ ಪಶ್ಚಿಮ ಭಾಗದಲ್ಲಿ ಸರದಿ ಉಪವಾಸ ಸತ್ಯಾಗ್ರಹವೂ ನಡೆಯಲಿದೆ.

ಪಂಜಾಬಿನಲ್ಲಿ ಕಿಸಾನ್ ಮಜ್ದೂರ್ ಸಂಘರ್ಷ ಸಮಿತಿ ರೈಲ್ ರೋಕೋವನ್ನು ಮುಂದುವರೆಸಿದೆ. ಅಕ್ಟೋಬರ್ 1 ರಿಂದ ಇತರ ಸಂಘಟನೆಗಳೂ ಇದರಲ್ಲಿ ಸೇರಿಕೊಳ್ಳುತ್ತವೆ ಎನ್ನಲಾಗಿದೆ.

ಹರ್ಯಾಣದಲ್ಲಿ ಬಿಜೆಪಿಯೊಂದಿಗೆ ಸರಕಾರದಲ್ಲಿರುವ ಜೆಜೆಪಿಯ ಮೇಲೆ ರೈತರ ಒತ್ತಡ ಅಕಾಲಿದಳದ ಮಂತ್ರಿಗಳ ರಾಜೀನಾಮೆಯ ನಂತರ ಇನ್ನಷ್ಟು ಬಲ ಪಡೆದುಕೊಂಡಿದೆ. ಅಕ್ಟೋಬರ್ 6ರಂದು ಜೆಜೆಪಿಯ ಮುಖಂಡ ಮತ್ತು ರಾಜ್ಯದ ಉಪಮುಖ್ಯಮಂತ್ರಿ ದುಷ್ಯಂತ ಚೌತಾಲ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿ ಅವರ ನಿವಾಸದ ಘೇರಾವೊಗೆ ಕರೆ ನೀಡಲಾಗಿದೆ.

ಅಕ್ಟೋಬರ್ 14ರಂದು ‘ಎಂಎಸ್ಪಿ ಅಧಿಕಾರ್ ದಿವಸ್’ ಆಚರಿಸಿ ಮೋದಿ ಸರಕಾರ ಈ ಕುರಿತು ಹರಡುತ್ತಿರುವ ಸುಳ್ಳುಗಳನ್ನು ಬಯಲು ಮಾಡಲು ನಿರ್ಧರಿಸಲಾಗಿದೆ.

ಮೋದಿ ಸರಕಾರ ರೈತರ ಪ್ರತಿಭಟನೆಗಳಿಗೆ ಕಿವಿಗೊಡದಿರುವುದನ್ನು ಮುಂದುವರೆಸಿದರೆ ನವಂಬರ್ 26–27ರಂದು ದೇಶದ ಎಲ್ಲೆಡೆಗಳಿಂದ ರೈತರು ‘ದಿಲ್ಲಿ ಚಲೋ’ ನಡೆಸಿ ದೇಶದ ರಾಜಧಾನಿಯಲ್ಲಿ ರಾಷ್ಟ್ರೀಯ ಪ್ರತಿಭಟನೆ ನಡೆಸುತ್ತಾರೆ ಎಂದು ಎಐಕೆಎಸ್‌ಸಿಸಿ ಎಚ್ಚರಿಸಿದೆ.

ದಿಲ್ಲಿ ಪೋಲೀಸರ ಚಾರ್ಜ್‌ಶೀಟಿನಲ್ಲಿ ಈಗ ಬೃಂದಾ ಕಾರಟ್ ಹೆಸರು–ಎಐಡಿಡಬ್ಲ್ಯುಎ ಖಂಡನೆ



ಈಗ ದಿಲ್ಲಿ ಪೋಲೀಸರ ಈಶಾನ್ಯದಿಲ್ಲಿ ಗಲಭೆ ಪ್ರಕರಣದ ಚಾರ್ಜ್‌ಶೀಟಿನಲ್ಲಿ ಸಿಪಿಐ(ಎಂ)ನ ಇನ್ನೊಬ್ಬ ಹಿರಿಯ ಮುಖಂಡರಾದ ಬೃಂದಾ ಕಾರಟ್ ಅವರ ಹೆಸರು ಕೂಡ ಇದೆ ಎಂಬ ಸುದ್ದಿ ಬಂದಿದೆ. ಬಿಜೆಪಿಯ ಮುಖಂಡರುಗಳ ಬಹಿರಂಗ ಚಿತಾವಣೆಯಿಂದಲೇ ಕೋಮುಗಲಭೆಗಳು ನಡೆದಿದ್ದರೂ ಇದನ್ನು ಸಿಎಎ–ವಿರೋಧಿ ಪ್ರತಿಭಟನೆಯೊಂದಿಗೆ ಜೋಡಿಸುವ ದಿಲ್ಲಿ ಪೋಲೀಸಿನ ಪಿತೂರಿಯ ಭಾಗವಾಗಿ ಅವರು ಹೆದರಿಸಿ –ಬೆದರಿಸಿ ತೆಗೆದುಕೊಳ್ಳುತ್ತಿರುವ ಹೇಳಿಕೆಗಳಲ್ಲಿ ಈಗ ಬೃಂದಾ ಅವರು ಹೆಸರೂ ಬಂದಿದೆ ಎಂದು ಹೇಳಲಾಗಿದೆ. ಇದನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ)ಬಲವಾಗಿ ಖಂಡಿಸಿದೆ.

ಪುಟ 10 ನೋಡಿ

ಸಂಪಾದಕೀಯ

ನ್ಯಾಯದ ಅಣಕು

1992 ಡಿಸೆಂಬರ್ 6. ಅಂದು ಅಯೋಧ್ಯೆಯಲ್ಲಿ ನೂರಾರು ವರ್ಷಗಳಷ್ಟು ಪ್ರಾಚೀನವಾಗಿದ್ದ ಮುಸ್ಲಿಂ ಪ್ರಾರ್ಥನಾಲಯವನ್ನು ಹಾಡೇ ಹಗಲಲ್ಲೇ, ಬಿಜೆಪಿ ಮತ್ತು ಸಂಘಪರಿವಾರದ 32 ನಾಯಕರ ಸಮಕ್ಷಮದಲ್ಲಿ ಕರಸೇವಕರು ಎಂಬ ಸಮಾಜಘಾತುಕರು ಧ್ವಂಸಮಾಡಿ ಕೇಕೆ ಹಾಕಿದರು? ಇಡಿ ದೇಶವೇ ಈ ಆತಂಕದ ಘಟನೆಯನ್ನು ವೀಕ್ಷಿಸಿತ್ತು. ಅಂದು ನಮ್ಮ ಸಂವಿಧಾನದ ಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರತೆಯ ಕಿರೀಟಗಳನ್ನು ನೆಲಕ್ಕುರುಳಿಸಿ ಮಣ್ಣು ಪಾಲು ಮಾಡಲಾಯಿತು.

ದಾಖಲಾದ ವಿವಿಧ ಎಫ್‌ಐಆರ್‌ಗಳಲ್ಲಿ 49 ವ್ಯಕ್ತಿಗಳನ್ನು ಹೆಸರಿಸಲಾಗಿತ್ತು. ಅವರಲ್ಲಿ 32 ಮಂದಿ ಮಾತ್ರ ಜೀವಂತವಾಗಿದ್ದಾರೆ. ಅಂದಿನ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ಸಂವಿಧಾನ ಪೀಠವು ಮಸೀದಿ ಧ್ವಂಸಗೊಳಿಸಿದ ಕೃತ್ಯವನ್ನು ಕಾನೂನಿನ ಹೀನಾಯ ಉಲ್ಲಂಘನೆ ಎಂದು ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿತ್ತು. ಆದರೆ ಇಂದು 28 ವರ್ಷಗಳ ಕಾಲ ಸುಧೀರ್ಘ ವಿಚಾರಣೆ ನಡೆಸಿದ ಸಿಬಿಐ ಲಕ್ನೊ ವಿಶೇಷ ನ್ಯಾಯಾಲಯವು ಅಷ್ಟೂ ಜನ ಆರೋಪಿಗಳನ್ನು ನಿರ್ದೋಷಿಗಳೆಂದು ಪ್ರಕಟಿಸಿದೆ. ಮಸೀದಿ ಧ್ವಂಸಗೊಳಿಸಿದ್ದು ಪೂರ್ವಯೋಜತ ಕೃತ್ಯವಲ್ಲ ಎಂದು ವಿಶೇಷ ನ್ಯಾಯಾಲಯವು ತನ್ನ ಆದೇಶದಲ್ಲಿ ಹೇಳಿದೆ ಎಂಬುದಾಗಿ ವರದಿಯಾಗಿದೆ. ಸುಪ್ರೀಂ ಕಾನೂನಿಗೆ ಅನುಗುಣವಾಗಿ ಆಡಳಿತ ನಡೆಸುವುದಕ್ಕೆ ಬದ್ಧತೆ ತೋರಿರುವ ಧರ್ಮನಿರಪೇಕ್ಷ ರಾಷ್ಟ್ರವೊಂದರಲ್ಲಿ ಈ ರೀತಿ ಆಗಬಾರದಾಗಿತ್ತು ಎಂದು ಹೇಳಿತ್ತು. ಸುಪ್ರೀಂ ಕೋರ್ಟ್ ಹೇಳಿದ್ದಕ್ಕೂ ಸಿಬಿಐ ವಿಶೇಷ ಕೋರ್ಟ್ ಹೇಳಿರುವುದಕ್ಕೂ ಎಷ್ಟೊಂದು ವಿರೋಧಾಭಾಸಗಳು!

ಯಾವುದೇ ನ್ಯಾಯಾಲಯವು ನೀಡುವ ತೀರ್ಪನ್ನು ನಾವು ಗೌರವಿಸಬೇಕಾಗುತ್ತದೆ. ಆದರೆ ಆ ಕುರಿತು ಆರೋಗ್ಯಕರವಾದ ಚರ್ಚೆ ನಡೆಸಲು ನಾವು ಹಿಂಜರಿಯಬಾರದು. ಸದರಿ ಪ್ರಕರಣದ ತನಿಖೆ ನಡೆಸಿದ ಸಿಬಿಐ ಪ್ರಾಸಿಕ್ಯೂಷನ್ ಹೊಣೆ ಹೊತ್ತವರ ಬಹುದೊಡ್ಡ ವೈಫಲ್ಯ ಎದ್ದು ಕಾಣುತ್ತದೆ. ದೇಶದ ಉದ್ದಗಲಕ್ಕೂ ರಥಯಾತ್ರೆ ನಡೆಸಲಾಗಿತ್ತು. ಎಲ್.ಕೆ. ಆದ್ವಾನಿ ಅದರ ನೇತೃತ್ವ ವಹಿಸಿದ್ದರು. ದಾರಿಯುದ್ದಕ್ಕೂ 'ದೇವಸ್ಥಾನವನ್ನು ಅಲ್ಲೇ ಕಟ್ಟುತ್ತೇವೆ' ಎಂಬ ಪ್ರಚೋದನಾಕಾರಿ ಘೋಷಣೆಯನ್ನು ಕೂಗಲಾಗುತಿತ್ತು. ಕೆಲವು ದಿನಗಳ ಮೊದಲೇ, ಕರಸೇವಕರು ಎಂಬ ಪುಂಡರನ್ನು ಅಯೋಧ್ಯೆ ತಲಪುವಂತೆ ವ್ಯವಸ್ಥೆ ಮಾಡಲಾಗಿತ್ತು. ಡಿಸೆಂಬರ್ 3 ಕ್ಕೆ ಅಯೋಧ್ಯೆ ತಲುಪಿದ್ದ ಸಿ.ಟಿ. ರವಿ ಮತ್ತು ತಂಡದವರಿಗೆ ಸರಯೂ ನದಿಯಿಂದ ಮೂರು ದಿನ ಮರಳು ತರುವ ಕೆಲಸವನ್ನು ನೀಡಿದ್ದರು ಎಂದು ಅವರು ಹೇಳಿಕೊಂಡಿದ್ದಾರೆ. ನಾನು ಸಹ ಅಂದು ಆ ಸ್ಥಳದಲ್ಲಿ ಇದ್ದೇ ಎಂದು ಯಡಿಯೂರಪ್ಪನವರು ಹೇಳಿದ್ದಾರೆ. ಲಕ್ಷಾಂತರ ಕರಸೇವಕರನ್ನು ಅಂದು ಅಯೋಧ್ಯೆಗೆ ಬರಮಾಡಿಕೊಂಡಿರುವವರು ಯಾರು? ಯಾರೋ ಪುಂಡರು ಬಂದು ಮಸೀದಿಯನ್ನು ಧ್ವಂಸ ಮಾಡುತ್ತಾರೆ, ಆಗ ನಾವು ಕರಸೇವಕರು ರಾಮನ ಪ್ರತಿಮೆಯನ್ನು ರಕ್ಷಣೆ ಮಾಡುವ ಜವಾಬ್ದಾರಿ ಹೊತ್ತುಕೊಂಡಿದ್ದೆವು ಎಂದು ಹೇಳಲಾಗುತ್ತದೆ. ಇದು ನಂಬಲರ್ಹವಾದ ವಾದವೆ?

ರಥಯಾತ್ರೆಯಿಂದ ಆರಂಭಿಸಿ ಮಸೀದಿ ಮೇಲಿನ ದಾಳಿವರೆಗೂ ಎಲ್ಲವೂ ಪೂರ್ವಯೋಜಿತವೇ. ನ್ಯಾಯಾಲಯಕ್ಕೆ ಸರಿಯಾದ ಸಾಕ್ಷಾಧಾರಗಳನ್ನು ಒದಗಿಸುವಲ್ಲಿ ಸಿಬಿಐ ಸೋತಿದೆ. ಇದು ಉದ್ದೇಶಪೂರ್ವಕವಾಗಿ ನಡೆದದ್ದೇ ಎಂಬ ಅನುಮಾನವು ಹುಟ್ಟುತ್ತದೆ. ಗುಂಪು ಗಲಭೆಗಳು ನಡೆದಾಗ ನಿಜವಾದ ಅಪರಾಧಿಗಳನ್ನು ಪತ್ತೆ ಹಚ್ಚುವುದು ಕಷ್ಟ ಸಾಧ್ಯವಾಗಿರುತ್ತದೆ. ಆದರೆ ಸಮರ್ಥ ತನಿಖಾಧಿಕಾರಿ ಜನಜಂಗುಳಿಯಲ್ಲಿ ಸೇರಿಕೊಂಡಿರುವ ಆರೋಪಿಗಳನ್ನು ಪತ್ತೆಹಚ್ಚಲು, ಅವರ ವಿರುದ್ಧ ಬಲವಾದ ಸಾಕ್ಷಾದಾರಗಳನ್ನು ಸಂಗ್ರಹಿಸಿ ನ್ಯಾಯಾಲಯದ ಮುಂದಿಡಲು ಪ್ರಯತ್ನ ಪಡುತ್ತಾರೆ. ಗಲಭೆಗೆ ನೇತೃತ್ವ ಕೊಟ್ಟಂತಹವರ ವಿರುದ್ಧ, ಅಕ್ರಮ ಸಭೆ ಸೇರಿಸಿದವರ ವಿರುದ್ಧ ತಪ್ಪದೆ ಪ್ರಕರಣವನ್ನು ದಾಖಲು ಮಾಡುತ್ತಾರೆ. ಆದರೆ ಮಸೀದಿ ಧ್ವಂಸದ ವಿಷಯದಲ್ಲಿ ತನಿಖೆ ನಡೆಸುತ್ತಿದ್ದ ಸಿಬಿಐ ಇಂತಹ ಯಾವುದೇ ಪೂರ್ವ ಸಿದ್ಧತೆಗೆ ಗಮನ ನೀಡದಂತೆ ಕಾಣುವುದಿಲ್ಲ. ಹೀಗಾಗಿ ವಿಶೇಷ ನ್ಯಾಯಾಲಯ ಎಲ್ಲಾ ಆರೋಪಿಗಳನ್ನು ಸಾಕ್ಷಗಳ ಕೊರತೆಯನ್ನು ಮುಂದಿಟ್ಟು ಖುಲಾಸೆ ಮಾಡಿದೆ.

ಸಿಬಿಐ ದೋಷಾರೋಪ ಹೊರಿಸಿದ ಯಾವುದೇ ವ್ಯಕ್ತಿ ಅಥವ ಗುಂಪು ಆ ಕೃತ್ಯಕ್ಕೆ ಹೊಣೆಗಾರ ಅಲ್ಲ ಎಂದಾದರೆ ಅದನ್ನು ಮಾಡಿದ್ದು ಯಾರು? ಅವರಿಗೆ ಹಾಗೆ ಮಾಡಲು ಪ್ರೇರಣೆ ಏನಿತ್ತು ಎಂಬುದನ್ನು ಪತ್ತೆ ಮಾಡಬೇಕಾದ ಜವಾಬ್ದಾರಿ ಸಿಬಿಐ ಮೇಲೆಯೇ ಇರುತ್ತದೆ. ಸಾಮಾಜಿಕ, ರಾಜಕೀಯ ಆಯಾಮಗಳನ್ನು ಹೊಂದಿರುವ ಇಂತಹ ಪ್ರಕರಣಗಳಲ್ಲಿ ತಪ್ಪಿತಸ್ಥರು ಯಾರು ಎಂಬುದನ್ನು ಪತ್ತೆ ಮಾಡಿ ಅವರನ್ನು ಶಿಕ್ಷೆಗೆ ಗುರಿಪಡಿಸಲು ಆಗದಿರುವುದು ಸಿಬಿಐನ ಬಾರೀ ದೊಡ್ಡ ಸೋಲು.

ರೈತ ಹಾಗೂ ದೇಶ ವಿರೋಧಿ ಎಲ್ಲಾ ಕೃಷಿ ಮಸೂದೆಗಳನ್ನು ತಿರಸ್ಕರಿಸಲು ಕೋರಿ ಮನವಿ

ಇವರಿಗೆ,
ಮಾನ್ಯ ರಾಷ್ಟ್ರಪತಿಗಳು,
ಭಾರತ ಸರಕಾರ,

ಮತ್ತು

ಮಾನ್ಯ ರಾಜ್ಯಪಾಲರು,
ಕರ್ನಾಟಕ ಸರಕಾರ,

ಗೌರವಾನ್ವಿತರೇ,

ಕಳೆದ ಪಾರ್ಲಿಮೆಂಟ್ ಅಧಿವೇಶನದಲ್ಲಿ ಕೇಂದ್ರ ಸರಕಾರ ದೌರ್ಜನ್ಯದಿಂದ ಮತ್ತು ಪಾರ್ಲಿಮೆಂಟ್ ನಡಾವಳಿಯ ನೀತಿನಿಯಮಗಳನ್ನು ಗಾಳಿಗೆ ತೂರಿ, ಮಾತ್ರವಲ್ಲಾ, ಬಾಧಿತ ಯಾವುದೇ ಜನ ಸಮುದಾಯದ ಜೊತೆ ಚರ್ಚಿಸದೇ, ದೇಶದ ರೈತರ ಹಾಗೂ ಶೇ.90 ರಷ್ಟು ಜನರನ್ನು ತೀವ್ರವಾಗಿ ಬಾಧಿಸುವ, ಸರ್ವನಾಶಕ್ಕೆ ಕಾರಣವಾಗುವ ಕೃಷಿ ಹಾಗೂ ಕಾರ್ಮಿಕ ವಿರೋಧಿ ಮಸೂದೆಗಳನ್ನು ಅಂಗೀಕರಿಸಿದೆ.

ಅದೇ ರೀತಿ, ಕರ್ನಾಟಕ ಸರಕಾರವು ಹಾಲಿ ವಿಧಾನ ಸಭಾ ಅಧಿವೇಶನದಲ್ಲಿ ಸಮಗ್ರ ಚರ್ಚೆ ನಡೆಸದೇ, ಬಾಧಿತ ಜನರ ನಡುವೆಯು ಚರ್ಚಿಸದೇ, ಕೇಂದ್ರ ಸರಕಾರದ ಮಸೂದೆಗಳಿಗೆ ಪೂರಕವಾಗಿ, ಕಾರ್ಪೋರೇಟ್ ಕಂಪನಿಗಳ ಲೂಟಿಗೆ ನೆರವಾಗುವ ಭೂಸುಧಾರಣೆ ತಿದ್ದುಪಡಿ ಮಸೂದೆ–2020, ಎಪಿಎಂಸಿ ತಿದ್ದುಪಡಿ ಮಸೂದೆ–2020, ಅಗತ್ಯ ವಸ್ತುಗಳ ತಿದ್ದುಪಡಿ ಮಸೂದೆ–2020 ಮತ್ತು ವಿದ್ಯುತ್ ಚ್ಛಕ್ತಿ ತಿದ್ದುಪಡಿ ಮಸೂದೆ ಮುಂತಾಗಿ ತರಾತುರಿಯಲ್ಲಿ ಜನತೆ ಮತ್ತು ವಿರೋದ ಪಕ್ಷಗಳ ತೀವ್ರವಾದ ವಿರೋಧದ ನಡುವೆ ಅಂಗೀಕರಿಸಿದೆ. ಈ ಎರಡೂ ದೌರ್ಜನ್ಯದ ಕ್ರಮಗಳು ಜಾಗತಿಕ ಕಾರ್ಪೋರೇಟ್ ಕಂಪನಿಗಳ ಲೂಟಿಗೆ ಮಾತ್ರವೇ ಸಹಾಯಕವಾಗಲಿವೆ.

ಈ ದುರ್ನಡೆ, ನಮ್ಮ ದೇಶದ ಸ್ವಾತಂತ್ರ್ಯ, ಸಾರ್ವಭೌಮತೆಗೆ, ಸ್ವಾವಲಂಬನೆಗೆ, ಆಹಾರ ಭದ್ರತೆಗಳಿಗೆ, ದೇಶೀಯ ಕೈಗಾರಿಕಾಭಿವೃದ್ಧಿಗೆ ಗಂಭೀರ ಅಪಾಯವನ್ನುಂಟು ಮಾಡಲಿವೆ.

ಸಾವಿರಾರು ವರ್ಷಗಳಿಂದ ದೇಶಕ್ಕೆ ಅನ್ನ ಒದಗಿಸುತ್ತಿದ್ದ ಅನ್ನದಾತರಾದ ರೈತ ಹಾಗೂ ಕೃಷಿ ಸಂಬಂಧಿ ಉಪಕಸುಬುಗಳಲ್ಲಿ ತೊಡಗಿದ ಕುರಿ, ಕೋಳಿ, ಹಂದಿ, ಮೀನು ಸಾಕಾಣೆದಾರರು, ಮತ್ತಿತರೇ ಸಮುದಾಯಗಳ ಮತ್ತು ದಲಿತ ಸಂಕುಲಗಳು, ನಾಶವಾಗಲಿವೆ. ದೊಡ್ಡ ಸಂಖ್ಯೆಯ ಸಣ್ಣ ವ್ಯಾಪಾರಿಗಳು, ವರ್ತಕರು, ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳ ಕೋಟ್ಯಾಂತರ ಕಾರ್ಮಿಕರು ಬೀದಿಪಾಲಾಗಲಿದ್ದಾರೆ. ಸಹಕಾರಿ ಚಳುವಳಿಯು ನಾಶವಾಗಲಿದೆ. ದೇಶದ ಗ್ರಾಹಕ ಸಮುದಾಯ ವ್ಯಾಪಕವಾದ ಲೂಟಿಗೊಳಗಾಗಲಿದೆ.

ಇಂತಹದೊಂದು ಚಾರಿತ್ರಿಕ ದೌರ್ಜನ್ಯಕ್ಕೆ, ಪ್ರಮಾದಕ್ಕೆ ಈ ಪಾರ್ಲಿಮೆಂಟ್ ಹಾಗೂ ಕರ್ನಾಟಕ ವಿಧಾನ ಸಭೆಗಳು ಸಾಕ್ಷಿಯಾಗುತ್ತಿವೆ.

ಆದ್ದರಿಂದ,

ಸಾಮೂಹಿಕ ವಿನಾಶಕ್ಕೆ ಕಾರಣವಾಗುತ್ತಿರುವ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳ ಹಾಗೂ ಕಾರ್ಪೋರೇಟ್ ಕಂಪನಿಗಳಿಗೆ ದೇಶವನ್ನು ಮತ್ತು ಜನತೆಯನ್ನು ಒತ್ತೆಯಿಟ್ಟು ಸಂಕಷ್ಟಕ್ಕೀಡು ಮಾಡಲಿರುವ ಈ ಮಸೂದೆಗಳನ್ನು ದೇಶದ ಸ್ವಾತಂತ್ರ್ಯ, ಸ್ವಾವಲಂಬನೆ, ಸಾರ್ವಭೌಮತೆ, ಪ್ರಜಾಪ್ರಭುತ್ವ ಹಾಗೂ ಆಹಾರ ಭದ್ರತೆಗಳನ್ನು ಮತ್ತು ರೈತ ಸಂಕುಲ ಸೇರಿದಂತೆ ಎಲ್ಲ ಬಾಧೆಗೊಳಗಾಗುವ ಜನ ಸಮುದಾಯಗಳನ್ನು ಸಂರಕ್ಷಿಸಲು ಸದರಿ ಮಸೂದೆಗಳನ್ನು ತಿರಸ್ಕರಿಸುವ ತಮ್ಮ ಚಾರಿತ್ರಿಕ ಕರ್ತವ್ಯ ಮೆರೆಯಲು ಮನವಿ ಮಾಡುತ್ತೇವೆ.

ಯು. ಬಸವರಾಜ
ಕಾರ್ಯದರ್ಶಿ (27–09–2020)

ಯುಪಿಯಲ್ಲಿ ರಾಮರಾಜ್ಯ ಅಲ್ಲ ಅದು ಗೂಂಡಾ ರಾಜ್ಯ– ಸಂತೋಷ್ ಬಜಾಲ್



ಉತ್ತರ ಪ್ರದೇಶ ಅತ್ರಾಸ್ ನಲ್ಲಿ ದಲಿತ ಹೆಣ್ಣು ಮಗಳನ್ನು ಅತ್ಯಾಚಾರ ಮಾಡಿ ಕೊಲೆ ಮಾಡಿದ ಕಾಮುಕರನ್ನು ಅಲ್ಲಿನ ಬಿಜೆಪಿ ಮುಖ್ಯಮಂತ್ರಿ ಯೋಗಿ ಆದಿತ್ಯಾನಾಥನ ಸರಕಾರ ರಕ್ಷಣೆ ಮಾಡುತ್ತಿದ್ದು ಮಾತ್ರವಲ್ಲ ದಲಿತ ಹೆಣ್ಣು ಮಗುವಿನ ಶವವನ್ನು ಕೂಡ ಕುಟುಂಬಸ್ಥರಿಗೆ ಬಿಟ್ಟುಕೊಡದೆ ಪೋಲೀಸರನ್ನು ಛೂ ಬಿಟ್ಟು ಗೂಂಡಗಿರಿ ನಡೆಸುತ್ತಿರುವುದನ್ನು ನೋಡಿದರೆ ಉತ್ತರ ಪ್ರದೇಶದಲ್ಲಿರುವುದು ರಾಮರಾಜ್ಯ ಅಲ್ಲ ಅದು ಗೂಂಡಾರಾಜ್ಯ ಎಂದು ಡಿವೈಎಫ್ಐ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ಇಂದು ಯುಪಿಯ ದಲಿತ ಹೆಣ್ಣು ಮಗಳ ಅತ್ಯಾಚಾರ ಕೊಲೆಯನ್ನು ಖಂಡಿಸಿ ಡಿವೈಎಫ್ಐ ಉರ್ವಸ್ಟೋರ್ ಘಟಕ ಹಾಗೂ ದಲಿತ ಹಕ್ಕುಗಳ ಸಮಿತಿ ನೇತೃತ್ವದಲ್ಲಿ ಉರ್ವಸ್ಟೋರ್ ಜಂಕ್ಷನ್ ನಲ್ಲಿ ನಡೆದ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದರು.


ಈ ಪ್ರತಿಭಟನಾ ಸಭೆಯಲ್ಲಿ ಡಿವೈಎಫ್ಐ ಉರ್ವ ಸ್ಟೋರ್ ಘಟಕದ ಅಧ್ಯಕ್ಷರಾದ ಪ್ರಶಾಂತ್ ಎಂಬಿ, ಮನೋಜ್, ಸುಖೇಶ್, ಸುಧಾಕರ್, ಹರೀಶ್ ಹರಿಣಾಕ್ಷಿ, ಕಾರ್ಮಿಕ ಮುಖಂಡರಾದ ಅಶೋಕ್ ಶ್ರೀಯಾನ್ ಸ್ಯಾಮುವೆಲ್ ಟೈಟಸ್, ದಿನೇಶ್, ವಾಮನ್, ಕಿಶೋರ್ ಎಮ್, ದಲಿತ ಹಕ್ಕುಗಳ ಹೋರಾಟ ಸಮಿತಿಯ ಮುಖಂಡರುಗಳಾದ ರಘುವೀರ್, ಕೃಷ್ಣ ತಣ್ಣೀರುಬಾವಿ, ಎಸ್ಎಫ್ಐ ಮುಖಂಡರಾದ ಸಾಗರ್, ರಕ್ಷಿತ್ ಮುಂತಾದವರು ಇದ್ದರು.

ಜಿ.ಎಸ್. ಆಮೂರ ಬಹುಶ್ರುತ ವಿದ್ವಾಂಸರು, ನಿಷ್ಠುರ ವಿಮರ್ಶಕರು

ವಾಸುದೇವ ಉಚ್ಚಿಲ

ಕಥೆ, ಕಾದಂಬರಿ, ಕವಿತೆ, ನಾಟಕಗಳ ಬರವಣಿಗೆಯಲ್ಲಿ ಸಿದ್ಧಿಯನ್ನು ಸಾಧಿಸಿದವರು ಜನಪ್ರಿಯರಾಗುವಂತೆ, ಸಾಹಿತ್ಯ ವಿಮರ್ಶೆಯಲ್ಲಿ ಸಾಧನೆ ಮಾಡಿದವರು ಜನಪ್ರಿಯರಾಗುವುದಿಲ್ಲ. ಸಪ್ಟೆಂಬರ್ 28, 2020 ರಂದು ತಮ್ಮ 95ನೇ ವಯಸ್ಸಿನಲ್ಲಿ ಕೀರ್ತಿಶೇಷರಾದ ಜಿ.ಎಸ್.ಆಮೂರ ಅವರು ಸಾಹಿತ್ಯ ವಿಮರ್ಶೆಯಲ್ಲಿ ಮೇರು ಸಾಧನೆ ಮಾಡಿದವರಾಗಿದ್ದು, ಈ ಕಾಲದ ಬೆರಳೆಣಿಕೆಯ ಗಣ್ಯ ಸೃಜನಶೀಲ ಕನ್ನಡ ಸಾಹಿತಿಗಳಿಗೆ ಸರಿಸಮವಾಗಿ ನಿಲ್ಲಬಲ್ಲವರು.

20ನೇ ಶತಮಾನದ ಹಲವರು ಮುಖ್ಯ ಕನ್ನಡ ಸಾಹಿತಿಗಳಂತೆ ಜಿ.ಎಸ್.ಆಮೂರ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದವರು. 1925ರಲ್ಲಿ ಹಾನಗಲ್ ತಾಲೂಕಿನ ಹಳ್ಳಿಯೊಂದರಲ್ಲಿ ಜನಿಸಿದ ಗುರುರಾಜ ಶಾಮಾಚಾರ್ ಆಮೂರ ಕೆಲವರ್ಷ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿ, ಮುಂದೆ ಔರಂಗಾಬಾದಿನ ಮರಾಠವಾಡ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕವಾಗಿ ವಿಭಾಗ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿ, ನಿವೃತ್ತಿಯ ಬಳಿಕ ಧಾರವಾಡದಲ್ಲಿ ಬಂದು ವಾಸವಾದರು.



ಇಂಗ್ಲಿಷ್ ಸಾಹಿತ್ಯವಲ್ಲದೆ ಕನ್ನಡದ ಪ್ರಾಚೀನ ಅರ್ವಾಚೀನ ಸಾಹಿತ್ಯ, ಸಂಸ್ಕೃತ, ಮರಾಠಿ ಭಾಷೆ ಸಾಹಿತ್ಯಗಳ ವಿಸ್ತೃತ ಅಧ್ಯಯನದಿಂದ ಅವರು ವಿದ್ವತ್ತಿನ ಗಣಿಯಾಗಿದ್ದರು. ಸಂಸ್ಕೃತ, ಮರಾಠಿ ಕೃತಿಗಳನ್ನು ಇಂಗ್ಲಿಷಿಗೆ ಅನುವಾದಿಸಿದರು. ಮಳಗಾಂವ್‌ಕರ್, ರಾಜಾರಾವ್, ಮುಲ್ಕ್‌ರಾಜ್ ಆನಂದ್, ವಿ.ಎಸ್.ನಾಯ್ಪಾಲ್, ಸಲ್ಮಾನ್ ರುಶ್ದಿಯವರ ಕೃತಿಗಳನ್ನು ಕುರಿತು ಇಂಗ್ಲಿಷ್‌ನಲ್ಲಿ ಮೌಲಿಕ ವಿಮರ್ಶೆಗಳನ್ನು ಬರೆದರು. ಆದರೆ ಕನ್ನಡ ಕೃತಿಗಳ ಬಗ್ಗೆ ಬರೆಯಬೇಕೆಂಬ ಒತ್ತಾಸೆ ಅವರದಾಗಿತ್ತು. ಅವರು ಹೇಳುತ್ತಿದ್ದರು – ಇಂಗ್ಲಿಷಾದರೋ ಅಂತಾರಾಷ್ಟ್ರೀಯವಾಗಿ ವಿಕಸನ ಹೊಂದುವ ಭಾಷೆಯಾಗಿರುವುದಾದರೂ, ಜನತೆಯ ಮಾತೃಭಾಷೆಯಾಗಲೀ ಮತ್ತು ಪ್ರಾದೇಶಿಕ ಭಾಷೆಯಾಗಲೀ ಇಂಗ್ಲಿಷ್ ಕಾರಣವಾಗಿ ದಿನನಿತ್ಯದ ಬಳಕೆಯಿಂದ ಮರೆಯಾಗಕೂಡದು. ಕನ್ನಡ ಕೃತಿಗಳು ಪ್ರಾಚೀನ–ಅರ್ವಾಚೀನ ಎನ್ನದೆ, ಪ್ರೌಢ–ಜನಪ್ರಿಯ ಎನ್ನದೆ, ಪುರುಷರಚನೆ–ಮಹಿಳಾರಚನೆ ಎನ್ನದೆ, ನವೋದಯ–ನವ್ಯ–ಸಮಾಜಮುಖಿ ಎನ್ನದೆ ಎಲ್ಲ ಕೃತಿಗಳ ಬಗೆಗೂ ಕನ್ನಡದ ವಿಮರ್ಶೆಯನ್ನು ಕಟ್ಟಿದರು. ಹಾಗಾಗಿ ಶ್ರೀರಂಗರ 12 ಕೃತಿಸಂಪುಟಗಳನ್ನು ಸಂಪಾದಿಸಿದರು. ಅ.ನ.ಕೃ. ಕಾದಂಬರಿಗಳ ಬಗ್ಗೆ ಪ್ರೌಢ ವಿಮರ್ಶೆ ಬಂದುದು ಆಮೂರರಿಂದಲೇ. ದ.ರಾ.ಬೇಂದ್ರೆ ಸಾಹಿತ್ಯದ ಸಮಗ್ರ ಅಧ್ಯಯನದಿಂದ ರೂಪಿಸಿದ 'ಭುವನದ ಭಾಗ್ಯ' ಅವರ ಮಹಾನ್‌ಕೃತಿ; ಅದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೂ (1996) ಪಾತ್ರವಾಯಿತು. ಕುವೆಂಪು ಬಗ್ಗೆ ಬರೆಯುವುದು ಅನುಮಾನ ಎಂದುಕೊಳ್ಳುವಷ್ಟರಲ್ಲಿ 'ಕುವೆಂಪು ಸಮಗ್ರ ಸಾಹಿತ್ಯ' ಕೃತಿ ರಚಿಸಿದರು. ಕುವೆಂಪು ಅವರ ರಾಮಾಯಣ ದರ್ಶನಂ ಕುರಿತು ಅವರ ಬರಹವೂ ಬಹಳ ಮೌಲಿಕವಾದುದು.

ಜಿ.ಎಸ್.ಆಮೂರ ಅವರು ಬಹುಶ್ರುತ ವಿದ್ವಾಂಸರಷ್ಟೇ ಅಲ್ಲ ನಿಷ್ಠುರ ವಿಮರ್ಶಕರಾಗಿದ್ದರು. ಔರಂಗಾಬಾದಿನಲ್ಲಿದ್ದರೂ ಅವರು ಕನ್ನಡ ಕೃತಿಗಳ ಬಗ್ಗೆಯೇ ಹೆಚ್ಚಿಗೆ ಬರೆದರು. ಕರ್ನಾಟಕದ ಪ್ರತಿಷ್ಠಿತ 'ಪಂಪ ಪ್ರಶಸ್ತಿ'ಗೆ ಅವರು ಭಾಜನರಾದರು. ಸಾಹಿತ್ಯ ವಿಮರ್ಶೆಯಲ್ಲಿ ಕನ್ನಡದಲ್ಲಿ ಅತ್ಯುನ್ನತ ಗೌರವಕ್ಕೆ ಅರ್ಹರಾಗಿದ್ದ ದಿ.ಕೀರ್ತಿನಾಥ ಕುರ್ತಕೋಟಿಯವರನ್ನು ಬಿಟ್ಟರೆ, ಬಹುಶ: ಜಿ.ಎಸ್. ಆಮೂರರು ಮಾತ್ರವೇ ವಿಮರ್ಶೆಯನ್ನು ಶ್ರೇಷ್ಠತೆಯ ಮಟ್ಟಕ್ಕೆ ತಲುಪಿಸಿದವರು. ಅವರ ನಿಧನದಿಂದ ವಿಮರ್ಶೆಯ ಕ್ಷೇತ್ರದಲ್ಲಿ ಒಂದು ನಿರ್ವಾತ ಉಂಟಾಗಿದೆ. ●

ರೈತ ರಕ್ಷಣೆಗಾಗಿ ಕರಾವಳಿ ಜಿಲ್ಲೆಗಳಲ್ಲಿ ಸಪ್ಟೆಂಬರ 28 ರ ಪ್ರತಿಭಟನೆ

ಕೃಷಿ ಸಂಬಂಧಿಯಾದ 3 ಸುಗ್ರೀವಾಜ್ಞೆಗಳನ್ನು ಕೇಂದ್ರ ಸರಕಾರವು ಪಾರ್ಲಿಮೆಂಟಿನಲ್ಲಿ ಶಾಸನವಾಗಿಸಿದ್ದರ ವಿರುದ್ಧ ಹಾಗೂ ಕರ್ನಾಟಕ ರಾಜ್ಯ ಸರಕಾರವು ಅಸೆಂಬ್ಲಿಯಲ್ಲಿ ಭೂಸುಧಾರಣಾ ತಿದ್ದುಪಡಿಯೇ ಮೊದಲಾದ ರೈತ ವಿರೋಧಿ ಶಾಸನ ಅಂಗೀಕರಿಸುವ ಸನ್ನಾಹದ ವಿರುದ್ಧ ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ ಹಾಗೂ ರಾಜ್ಯ ರೈತ ಕಾರ್ಮಿಕ ದಲಿತ ಐಕ್ಯ ವೇದಿಕೆಯ ಕರೆಯ ಮೇರೆಗೆ ಸಪ್ಟೆಂಬರ 25 ರಂದು ರಾಜ್ಯಾದ್ಯಂತ ರಸ್ತೆ ತಡೆ ನಡೆದವು.

ಸಪ್ಟೆಂಬರ 28 ರಂದು ಕರ್ನಾಟಕ ಬಂದ್ ನಡೆಸಲು ಹೋರಾಟ ಸಮಿತಿಗಳು ಕರೆ ನೀಡಿದ ಮೇರೆಗೆ ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿಯೂ ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನಾ ಪ್ರದರ್ಶನಗಳು ನಡೆದವು.

ಮಂಗಳೂರು:

ಮಂಗಳೂರಿನ ಮಿನಿವಿಧಾನಸೌಧದ ಎದುರು ನಡೆದ ಪ್ರತಿಭಟನೆಯನ್ನು ಪ್ರಾಂತ ರೈತ ಸಂಘ, ರಾಜ್ಯ ರೈತ ಸಂಘ, ಸಿಐಟಿಯು ಸಂಘಟಿಸಿದ್ದರೆ, ಬೆಂಬಲವಾಗಿ ಸಿಪಿಐ(ಎಂ), ಸಿಪಿಐ, ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷದವರೂ ಭಾಗವಹಿಸಿದರು. ಪ್ರತಿಭಟನೆಯನ್ನುದ್ದೇಶಿಸಿ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಕೃಷ್ಣಪ್ಪ ಸಾಲ್ಯಾನ್, ವಾಸುದೇವ ಉಚ್ಚಿಲ, ರಾಜ್ಯ ರೈತ ಸಂಘ ಹಸಿರುಸೇನೆಯ ಸನ್ನಿ ಡಿಸೋಜ, ದಸಂಸ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ಮುಖಂಡ ಎಂ.ದೇವದಾಸ್, ಸಿಐಟಿಯುವಿನ ದ.ಕ. ಜಿಲ್ಲಾ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಡಿವೈಎಫ್‌ಐನ ಅಶ್ರಫ್ ಕೆ.ಸಿ.ರೋಡ್, ಕಾಂಗ್ರೆಸ್ಸಿನ ಮಾಜಿ ಶಾಸಕ ಐವನ್ ಡಿಸೋಜ, ಶಾಲೆಟ್ ಪಿಂಟೋ, ಸಿಪಿಐ ಪಕ್ಷದ ಎಚ್.ವಿ.ರಾವ್, ಜೆಎಂಎಸ್‌ನ ಜಿಲ್ಲಾಧ್ಯಕ್ಷೆ ಜಯಂತಿ ಬಿ.ಶೆಟ್ಟಿ ಮಾತನಾಡಿದರು. ಸಿಪಿಐ(ಎಂ) ಮುಖಂಡರಾದ ಯು.ಬಿ.ಲೋಕಯ್ಯ, ದಯಾನಂದ ಶೆಟ್ಟಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಉಡುಪಿ:

ಉಡುಪಿ ನಗರದಲ್ಲಿ ಬಸ್ ಸಂಚಾರ ಸ್ಥಗಿತಗೊಳಿಸುವಂತೆ ಒತ್ತಾಯಿಸಿ ಪ್ರತಿಭಟನಾಕಾರರು ಬಸ್ಸು ನಿರ್ವಾಹಕರು, ಮಾಲಕರನ್ನು ಬೆಳಗ್ಗಿನಿಂದಲೂ ವಿನಂತಿಸುತ್ತಿದ್ದರು. ಉಡುಪಿ ಸಿಟಿ ಬಸ್ ನಿಲ್ದಾಣದಲ್ಲಿ ಧರಣಿ ಕುಳಿತು ರಸ್ತೆ ತಡೆ ನಡೆಸಿದಾಗ, ಪೊಲೀಸರು ಅವರಲ್ಲಿ 21 ಮಂದಿಯನ್ನು ಬಂಧಿಸಿ ಕರೆದೊಯ್ದು ಸಾಯಂಕಾಲ ಬಿಡುಗಡೆಗೊಳಿಸಿದರು. ಬಂಧಿತರಲ್ಲಿ



ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ದಸಂಸ ಮುಖಂಡ ಸುಂದರ ಮಾಸ್ಟರ್, ಕಾಂಗ್ರೆಸ್ ಮತ್ತು ವೆಲ್ಫೇರ್ ಪಾರ್ಟಿಯ ಮುಖಂಡರು, ವಿವಿಧ ಸಂಘಟನೆಗಳ ಮುಖಂಡರೂ ಒಳಗೊಂಡಿದ್ದರು.

ಮೂಡಬಿದರೆ: ಮೂಡಬಿದ್ರೆ ಬಸ್ ನಿಲ್ದಾಣದಲ್ಲಿ ಪ್ರತಿಭಟನಾ ಸಭೆ ನಡೆಸಲಾಯಿತು. ಪ್ರತಿಭಟನೆಯನ್ನುದ್ದೇಶಿಸಿ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ರಾಜ್ಯ ರೈತ ಸಂಘದ ಆಲ್ವಿನ್ ಮೆನೆಜಸ್ ಮಾತನಾಡಿದರು. ಪ್ರತಿಭಟನೆಯಲ್ಲಿ ಸಿಪಿಐ(ಎಂ) ಪಕ್ಷದ ರಮಣಿ ಮೂಡಬಿದ್ರಿ, ರಾಧಾ, ಕಾಂಗ್ರೆಸ್ ಪಕ್ಷದ ಮುಖಂಡರು, ದಸಂಸ (ಭೀಮ ಘರ್ಜನೆ) ಕಾರ್ಯಕರ್ತರು ಭಾಗವಹಿಸಿದ್ದರು.

ಬಂಟ್ವಾಳ:

ಬಿ.ಸಿ.ರೋಡಿನಲ್ಲಿ ಓವರ್‌ಬ್ರಿಡ್ಜ್ ಸಮೀಪ ನಡೆದ ಪ್ರತಿಭಟನೆಯನ್ನು ರಾಜ್ಯ ರೈತ ಸಂಘ, ಪ್ರಾಂತ ರೈತ ಸಂಘ, ಸಿಐಟಿಯು, ಡಿವೈಎಫ್‌ಐ ಸಂಯೋಜಿಸಿತ್ತು. ಪ್ರತಿಭಟನೆ ಬೆಂಬಲವಾಗಿ ಎಐವೈಎಫ್, ಎಐಟಿಯುಸಿ, ಮಾನವ ಬಂಧುತ್ವ ವೇದಿಕೆ, ದಲಿತ ಸೇವಾ ಸಮಿತಿ, ಸಿಪಿಐ(ಎಂ), ಜೆಡಿಎಸ್ ಹಾಗೂ ಸಿಪಿಐ ಪಕ್ಷಗಳ ಕಾರ್ಯಕರ್ತರು ಭಾಗವಹಿಸಿದ್ದರು. ಪ್ರತಿಭಟನೆಯನ್ನುದ್ದೇಶಿಸಿ ರಾಜ್ಯ ರೈತ ಸಂಘದ ದ.ಕ. ಜಿಲ್ಲಾಧ್ಯಕ್ಷ ಓಸ್ವಾಲ್ಡ್ ಪ್ರಕಾಶ್ ಫೆರ್ನಾಂಡೀಸ್, ಪ್ರಾಂತ ರೈತ ಸಂಘದ ರಾಮಣ್ಣ ವಿಟ್ಲ ಮಾತನಾಡಿದರು. ಪ್ರತಿಭಟನೆಯ ಕೊನೆಯಲ್ಲಿ ರಸ್ತೆ ತಡೆ ನಡೆಸಲು ಮುಂದಾದ ಪ್ರತಿಭಟನಾಕಾರರನ್ನು ಪೊಲೀಸರು ತಡೆದರು.

ಸುಳ್ಯ:

ಸುಳ್ಯ ಜ್ಯೋತಿ ವೃತ್ತದಿಂದ ಗಾಂಧೀನಗರದ ವರೆಗೆ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು ಸಭೆಯಾಗಿ ಪರಿವರ್ತನೆಗೊಂಡರು. ಸಿಐಟಿಯು, ರಾಜ್ಯ ರೈತ ಸಂಘ ಹಸಿರು ಸೇನೆ ನೇತೃತ್ವದಲ್ಲಿ ನಡೆದ ಪ್ರತಿಭಟನೆಗೆ ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷಗಳು ಬೆಂಬಲ ನೀಡಿ ಭಾಗವಹಿಸಿದ್ದವು. ಪ್ರತಿಭಟನೆಯನ್ನುದ್ದೇಶಿಸಿ ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ಜೆಡಿಎಸ್ ಜಿಲ್ಲಾ ಮುಖಂಡ ಎಂ.ಬಿ.ಸದಾಶಿವ, ಸಿಐಟಿಯುನ ಕೆ.ಪಿ.ಜಾನಿ, ರಾಜ್ಯ ರೈತ ಸಂಘದ ಲೋಲಜಾಕ್ಷ ಭೂತಕಲ್ಲು ಮಾತನಾಡಿದರು.

ಬೆಳ್ತಂಗಡಿ:

ಮಿನಿವಿಧಾನಸೌಧದ ಎದುರು ನಡೆದ ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯು ಮುಖಂಡ ಶಿವಕುಮಾರ್ ಎಸ್.ಎಂ.ಮಾತನಾಡಿದರು. ಸಿಐಟಿಯು ಮುಖಂಡರಾದ ವಸಂತ ನಡ, ಡಿಎಚ್‌ಎಸ್ ಮುಖಂಡ ಶೇಖರ ಲಾಯಿಲ ಮತ್ತು ರಾಜ್ಯ ರೈತ ಸಂಘದ ಮುಖಂಡರು ಉಪಸ್ಥಿತರಿದ್ದರು.

ಕುಂದಾಪುರ:

ಪ್ರಾಂತ ಕೃಷಿ ಕೂಲಿಕಾರರ ಸಂಘ, ರಾಜ್ಯ ರೈತ ಸಂಘ, ಸಿಐಟಿಯು, ಸಿಪಿಐ(ಎಂ), ದಲಿತ ಸಂಘರ್ಷ ಸಮಿತಿ, ಡಿವೈಎಫ್‌ಐ, ಕಾಂಗ್ರೆಸ್, ಜೆಡಿಎಸ್‌ಗಳ ನೇತೃತ್ವದಲ್ಲಿ ಕುಂದಾಪುರ ಶಾಸ್ತ್ರಿ ವೃತ್ತದಲ್ಲಿ ಪ್ರತಿಭಟನಾ ಸಭೆ ನಡೆಯಿತು. ಪ್ರತಿಭಟನೆಯನ್ನುದ್ದೇಶಿಸಿ ರಾಜ್ಯ ರೈತ ಸಂಘದ ಉಡುಪಿ ಜಿಲ್ಲಾಧ್ಯಕ್ಷ ವಿಕಾಸ್ ಹೆಗ್ಡೆ, ಸಿಪಿಐ(ಎಂ) ಮುಖಂಡ ಕೆ.ಶಂಕರ್, ಸಿಐಟಿಯುವಿನ ಎಚ್. ನರಸಿಂಹ, ಡಿವೈಎಫ್‌ಐನ ರಾಜೇಶ್ ವಡೇರಹೋಬಳಿ ಮಾತನಾಡಿದರು. ಪ್ರತಿಭಟನೆಯಲ್ಲಿ ಕಾಂಗ್ರೆಸ್ಸಿನ ಹರಿಪ್ರಸಾದ್ ಶೆಟ್ಟಿ, ಶ್ಯಾಮಲಾ ಭಂಡಾರಿ, ಸಿಐಟಿಯುವಿನ ಮಹಾಬಲ ವಡೇರಹೋಬಳಿ, ಬಲ್ಕೀಸು ಬಾನು ಭಾಗವಹಿಸಿದ್ದರು.

ಬೈಂದೂರು:

ಬೈಂದೂರು ಜಂಕ್ಷನ್ ರಾಷ್ಟ್ರೀಯ ಹೆದ್ದಾರಿ ಅಂಡರ್‌ಪಾಸ್ ಬಳಿ ಸಿಪಿಐ(ಎಂ), ಕಾಂಗ್ರೆಸ್, ಜೆಡಿಎಸ್, ಸಿಐಟಿಯು ನೇತೃತ್ವದಲ್ಲಿ ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಯಿತು. ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯು ಉಡುಪಿ ಜಿಲ್ಲಾ ಕಾರ್ಯದರ್ಶಿ ಸುರೇಶ್ ಕಲ್ಲಾಗರ, ಕಾಂಗ್ರೆಸ್ಸಿನ ಮಾಜಿ ಶಾಸಕ ಗೋಪಾಲ ಪೂಜಾರಿ, ಮಾತನಾಡಿದರು. ಉಡುಪಿ ಜಿಲ್ಲಾ ಸಿಪಿಐ(ಎಂ) ಮುಖಂಡರಾದ ವೆಂಕಟೇಶ್ ಕೋಣಿ, ಕಾಂಗ್ರೆಸ್ಸಿನ ರಾಜು ಪೂಜಾರಿ, ಮದನ್ ಕುಮಾರ್, ಮುಸ್ಲಿಂ ಒಕ್ಕೂಟದ ಹಸನ್ ಮಾವುಡ, ಜೆಡಿಎಸ್‌ನ ಸಂದೇಶ ಭಟ್, ದಸಂಸದ ನರಸಿಂಹ ಹಳಗೇರಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಸಭೆಯ ಬಳಿಕ ರಸ್ತೆ ತಡೆ ನಡೆಸಿದ ಪ್ರತಿಭಟನಾಕಾರರನ್ನು ಪೊಲೀಸರು ಬಂಧಿಸಿ ಬಳಿಕ ಬಿಡುಗಡೆ ಮಾಡಿದರು. ●

ಹೊಸಹಳ್ಳಿ ಗ್ರಾಮದಲ್ಲಿ ದಲಿತ ಹಕ್ಕುಗಳ ಸಮಿತಿ ಘಟಕ ಉದ್ಘಾಟನೆ

ಮಾಗಡಿ ತಾಲ್ಲೂಕಿನ ಕಸಬಾ ಹೋಬಳಿಯ ಹೊಸಹಳ್ಳಿ ಗ್ರಾಮದಲ್ಲಿ ದಲಿತ ಹಕ್ಕುಗಳ ಸಮಿತಿ ಗ್ರಾಮ ಘಟಕ ಉದ್ಘಾಟನಾ ಸಮಾರಂಭವನ್ನು ಆಯೋಜಿಸಲಾಗಿತ್ತು. ಈ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಿ. ಶಿವಶಂಕರ್ ಮಾತನಾಡಿ ಮನುಷ್ಯ–ಮನುಷ್ಯನ ನಡುವೆ ಪ್ರೀತಿಯನ್ನು ಬಿತ್ತುವ ಕೆಲಸವಾಗಬೇಕು, ಸಮಾಜದಲ್ಲಿ ಒಳ್ಳೆಯ ವಿಚಾರದ ಗಿಡಗಳನ್ನು ಬಿತ್ತಬೇಕು ಹಾಗೂ ಎಲ್ಲಾ ವರ್ಗದ ಜನರಲ್ಲಿ ನಗು ಮೂಡಿಸುವ ಕೆಲಸವಾಗಬೇಕು, ಸಂಘಟನೆಗಳು ಮನುಷ್ಯ–ಮನುಷ್ಯರ ನಡುವೆ ಇರುವ ಅಡ್ಡಗೋಡೆಯನ್ನು ತೆರವುಗೊಳಿಸುವ ಕೆಲಸ ಮಾಡಬೇಕು ಹೆಣ್ಣು ಮಕ್ಕಳಿಗೆ ಹಕ್ಕುಗಳು ನೀಡಲಿಲ್ಲ ಎಂದು ಕೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ಡಾ.ಬಿ.ಆರ್ ಅಂಬೇಡ್ಕರ್ ರವರನ್ನು ಇಡೀ ವಿಶ್ವವೇ ನೆನೆಪಿಸಿಕೊಳ್ಳುತ್ತಿದೆ ಎಂದು ತಿಳಿಸಿದರು.

ರಾಜ್ಯ ಸಮಿತಿಯ ಸಂಚಾಲಕರಾದ ➚

ತಿರಸ್ಕೃತ ಮಸೂದೆಗಳ ಪುನರ್ ಸುಗ್ರೀವಾಜ್ಞೆ ಸಂವಿಧಾನಕ್ಕೆ ಮಾಡುವ ವಂಚನೆ-ಸಿಪಿಐ(ಎಂ) ಖಂಡನೆ

ರಾಜ್ಯದ ರೈತರು, ಕಾರ್ಮಿಕರ ತೀವ್ರ ವಿರೋಧ, ಪ್ರತಿಭಟನೆ ಹಾಗೂ ಬಂದ್ ಹಿನ್ನೆಲೆಯಲ್ಲಿ ರಾಜ್ಯ ಬಿಜೆಪಿ ಸರ್ಕಾರವು ಹೊರಡಿಸಿದ್ದ ಕೃಷಿ ಹಾಗೂ ಕಾರ್ಮಿಕ ಕಾನೂನುಗಳ ತಿದ್ದುಪಡಿ ಸುಗ್ರೀವಾಜ್ಞೆಗಳಿಗೆ ಸೆಪ್ಟೆಂಬರ್ 26 ರಂದು ಮುಕ್ತಾಯವಾದ ರಾಜ್ಯ ಶಾಸನಸಭೆಯ ಅಂಗೀಕಾರ ದೊರೆತಿಲ್ಲ. ಅಂತಹ ತಿರಸ್ಕೃತಗೊಂಡ ಮಸೂದೆಗಳನ್ನು ಮತ್ತೆ ಸುಗ್ರೀವಾಜ್ಞೆಯಾಗಿ ಹೊರಡಿಸಲು ಇಂದು ನಡೆದ ರಾಜ್ಯ ಸಚಿವ ಸಂಪುಟ ತೀರ್ಮಾನಿಸಿರುವುದನ್ನು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸವಾದಿ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ತೀವ್ರವಾಗಿ ಖಂಡಿಸಿವೆ.

ಶಾಸನ ಸಭೆಯ ಅನುಮೋದನೆ ಪಡೆಯುವಲ್ಲಿ ಸೋತಿರುವ ಮಸೂದೆಗಳನ್ನು ಸುಗ್ರೀವಾಜ್ಞೆಯಾಗಿ ಹೊರಡಿಸುವುದು ಸಂವಿಧಾನಕ್ಕೆ ಎಸಗುವ ವಂಚನೆಯಾಗಿದೆ ಎಂದು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಸಂವಿಧಾನ ಪೀಠವು 2107 ರಲ್ಲಿ ಕೃಷ್ಣಕುಮಾರ್ ಸಿಂಗ್ ಮತ್ತು ಬಿಹಾರ ರಾಜ್ಯ ಪ್ರಕರಣದಲ್ಲಿ ಸ್ಪಷ್ಟ ಪಡಿಸಿದೆ. ಹಾಗಿದ್ದರೂ ಸಹಾ ರಾಜ್ಯ ಸರ್ಕಾರವು ಮತ್ತೆ ಸುಗ್ರೀವಾಜ್ಞೆ ಹೊರಡಿಸಲು ಮುಂದಾಗಿರುವುದು ಬಿಜೆಪಿ ಸರ್ಕಾರದ ಸಂವಿಧಾನ ಬಾಹಿರ ಕ್ರಮವಾಗಿದೆ ಎಂದು ಸಿಪಿಐ(ಎಂ) ಖಂಡಿಸಿದೆ. ಕೂಡಲೇ ತೀರ್ಮಾನವನ್ನು ಹಿಂಪಡೆಯಬೇಕೆಂದು ಹಾಗೂ ಸಂವಿಧಾನಕ್ಕೆ ಬದ್ಧವಾಗಿ ನಡೆದುಕೊಳ್ಳಬೇಕೆಂದು ರಾಜ್ಯ ಬಿಜೆಪಿ ಸರ್ಕಾರವನ್ನು ಸಿಪಿಐ(ಎಂ) ಆಗ್ರಹಿಸಿದೆ.

ಕೇಂದ್ರ ಸರ್ಕಾರದ ಒತ್ತಾಯಕ್ಕೆ ಮಣಿದು ಕಾರ್ಪೊರೇಟ್ ಧಣಿಗಳ ಸೇವೆಗೆ ಕಟಿಬದ್ಧವಾಗಿ ಶಾಸನ ಸಭೆಯಲ್ಲಿ ಸೋತ ಕರ್ನಾಟಕ ರಾಜ್ಯ ಭೂ ಸುಧಾರಣಾ ಕಾಯ್ದೆ ತಿದ್ದುಪಡಿ ವಿಧೇಯಕ, ಎಪಿಎಂಸಿ ಕಾಯ್ದೆ ತಿದ್ದುಪಡಿ ವಿಧೇಯಕ ಮತ್ತು ಕೈಗಾರಿಕಾ ವಿವಾದಗಳು ಮತ್ತು ಇತರೆ ಕಾರ್ಮಿಕ ಕಾನೂನುಗಳ ತಿದ್ದುಪಡಿ ವಿಧೇಯಕಗಳನ್ನು ಮತ್ತೆ ಸುಗ್ರೀವಾಜ್ಞೆಗಳಾಗಿ ಹೊರಡಿಸಲು ಮುಂದಾಗಿರುವುದು ಬಿಜೆಪಿ ಯು ಕಾರ್ಪೊರೇಟ್ ಬಂಡವಾಳಗಾರರ ಹಿತಕಾಯುವ ಪಕ್ಷವಾಗಿರುವುದು ಮತ್ತೆ ಮತ್ತೆ ಸಾಬೀತಾಗುತ್ತಿದೆ.

ಈ ತಿದ್ದುಪಡಿ ವಿಧೇಯಕಗಳಿಂದಾಗಿ "ಉಳುವವರಿಗೆ ಭೂಮಿಯ ಬದಲು ಉಳ್ಳವರಿಗೆ ಭೂಮಿ" ಎಂಬ ಹೊಸ ಪರಿಸ್ಥಿತಿ ನಿರ್ಮಾಣವಾಗಲಿದೆ. ಅಂತೆಯೇ ರೈತರ ಉತ್ಪನ್ನಗಳು ಕಾರ್ಪೊರೇಟ್ ಧಣಿಗಳ ಮುಲಾಜಿಗೆ ಬಲಿಯಾಗಲಿದೆ. ಕಾರ್ಮಿಕರ ಹಕ್ಕುಗಳು ದಮನವಾಗಿ ಬೇಕೆಂದಾಗ ಬಳಸಿ ಬೀಸಾಕುವ ಪರಿಸ್ಥಿತಿ ನಿರ್ಮಾಣವಾಗಿ ರಾಜ್ಯದಲ್ಲಿನ ನಿರುದ್ಯೋಗವು ತೀವ್ರವಾಗಿ ಹೆಚ್ಚಳವಾಗಿ ರಾಜ್ಯದ ಆರ್ಥಿಕತೆಯು ಮತ್ತಷ್ಟು ಹಿನ್ನಡೆಯನ್ನು ಅನುಭವಿಸಲಿದೆ. ಆದ ಕಾರಣ ಸದರಿ ತಿದ್ದುಪಡಿ ಸುಗ್ರೀವಾಜ್ಞೆಗಳಿಗೆ ರಾಜ್ಯದ ಜನತೆಯ ವ್ಯಾಪಕ ಪ್ರತಿರೋಧವು ವ್ಯಕ್ತವಾಗಿದೆ. ಇದನ್ನು ಮನಗಂಡು ರಾಜ್ಯ ಬಿಜೆಪಿ ಸರ್ಕಾರವು ತನ್ನ ಸಂಪುಟ ಸಭೆಯ ಇಂದಿನ ತೀರ್ಮಾನವನ್ನು ಹಿಂಪಡೆಯಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ. ರಾಜ್ಯಪಾಲರು ಸಹಾ ಸಂಪುಟ ಸಭೆಯ ತೀರ್ಮಾನವನ್ನು ತಿರಸ್ಕರಿಸಬೇಕೆಂದು ಕೋರಿದೆ.

ಕೆ.ಎನ್. ಉಮೇಶ್ ಕಾರ್ಯದರ್ಶಿ, ಸಿಪಿಐ(ಎಂ)
ಬೆಂ. ದ. ಜಿಲ್ಲಾ ಸಮಿತಿ
ಎನ್. ಪ್ರತಾಪ್ ಸಿಂಹ ಕಾರ್ಯದರ್ಶಿ, ಸಿಪಿಐ(ಎಂ)
ಬೆಂ. ಉ. ಜಿಲ್ಲಾ ಸಮಿತಿ
(01.10.2020)



ಬೆಂಗಳೂರು

ಉತ್ತರ ಪ್ರದೇಶದಲ್ಲಿ ಸರಣಿಯ ರೀತಿ ನಡೆಯುತ್ತಿರುವ ಅತ್ಯಾಚಾರಗಳ ವಿರುದ್ಧ ದೇಶವ್ಯಾಪೀ ಪ್ರತಿಭಟನೆ



ಯೋಗಿ ಆದಿತ್ಯನಾಥರ ಅಧಿಪತ್ಯದಲ್ಲಿ ಉತ್ತರ ಪ್ರದೇಶ ಗೂಂಡಾ ರಾಜ್ಯವಾಗಿ ಪರಿವರ್ತನೆಯಾಗಿದೆ. ನೆಲದ ಕಾನೂನುಗಳಿಗೆ ಬೆಲೆಯೇ ಇಲ್ಲದೇ ಅತ್ಯಾಚಾರಿಗಳು, ವಿವಿಧ ರೀತಿಯ ದೌರ್ಜನ್ಯ ಎಸಗುವವರು ರಾಜಾರೋಷವಾಗಿ ತಿರುಗಾಡುತ್ತಾರೆ.

ಜನಪ್ರತಿನಿಧಿಗಳೇ ಬಹಳ ಪ್ರಕರಣಗಳಲ್ಲಿ ಆಪಾದಿತರು ದೋಷಿಗಳು ಇರುವುದು ವಿಪರ್ಯಾಸ. ದೊಡ್ಡವರೇ ಇಂಥಹ ಹೇಯ ಕೃತ್ಯದಲ್ಲಿ ತೊಡಗಿದ್ದರೆ ಇನ್ನು ತಳ ಹಂತದಲ್ಲಿ ಅದೇ ಪ್ರಚೋದಕ ಸಂಗತಿಯಾಗಬಹುದು ಎನ್ನುವುದಕ್ಕೂ ಉತ್ತರ ಪ್ರದೇಶ ಉದಾಹರಣೆಯಾಗಿದೆ. ಉತ್ತರ ಪ್ರದೇಶದ ಹತ್ರಾಸ್ ನಲ್ಲಿ 19 ವರ್ಷದ ದಲಿತ ಯುವತಿ ಮೇಲೆ ಬಾರ್ಬರಿಕವಾಗಿ ಅತ್ಯಾಚಾರ ಎಸಗಿ, ನಾಲಗೆ ಹರಿದು ಬೆನ್ನು ಮೂಳೆ ಮುರಿದು ಹಾಕಿದ ಘಟನೆಗೆ ಅಲ್ಲಿಯ ಸರಕಾರ ದ ವಿವಿಧ ಆಡಳಿತ ವಿಭಾಗಗಳು ನಡೆದುಕೊಂಡ ರೀತಿಗೆ ಮತ್ತು ಅವಳ ಸಾವಿನ ನಂತರ ಜಿಲ್ಲಾಧಿಕಾರಿ/ಜಿಲ್ಲಾ ದಂಡಾಧಿಕಾರಿಗಳು, ಪೋಲೀಸರು ಶವ ಸಂಸ್ಕಾರಕ್ಕೆ ಕುಟುಂಬದವರಿಗೆ ಅವಕಾಶ ಕೊಡದೇ ಬಂಧನದಲ್ಲಿಟ್ಟು ನಡೆಸಿದ ರೀತಿಗೆ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಭಾರತ ವಿದ್ಯಾರ್ಥಿ ಫೆಡರೇಷನ್, ಭಾರತ ಯುವಜನ ಫೆಡರೇಷನ್ ಮತ್ತಿತರ ಸಂಘಟನೆಗಳು ದೇಶದಾದ್ಯಂತ ನಿನ್ನೆ ಪ್ರತಿಭಟನೆ ನಡೆಸಿದ್ದರು.

ದೆಹಲಿ ಲಕ್ನೋ ಮುಂತಾದ ಕಡೆ ಪ್ರತಿಭಟನಾಕಾರರ ಮೇಲೆ ಖಾಕಿ ಪಡೆ ದೌರ್ಜನ್ಯ ನಡೆಸಿ ಬಂಧಿಸಲಾಯಿತು. ಇಂದು ಕರ್ನಾಟಕದಲ್ಲಿ ಜನವಾದಿ ಮಹಿಳಾ ಸಂಘಟನೆ, ಎಸ್.ಎಫ್.ಐ, ದಲಿತ ಹಕ್ಕುಗಳ ಸಮಿತಿ, ಎ.ಐ.ಎಲ್.ಯು. ಜಂಟಿಯಾಗಿ ಪ್ರತಿಭಟನೆಗೆ ಕರೆ ನೀಡಿದ್ದವು.

ರಾಜ್ಯದ ಬೆಂಗಳೂರುನಲ್ಲಿ ಡಿಎಚ್ಎಸ್, ಜೆಎಂಎಸ್, ಎಸ್ಎಫ್ಐ ಸಂಘಟನೆಗಳು ಪ್ರತಿಭಟನೆ ನಡೆಸಿದವು. ಜೆಎಂಎಸ್ ಗೌರಮ್ಮ, ಸಿಐಟಿಯು ರಾಜ್ಯ ಅಧ್ಯಕ್ಷೆ ವರಲಕ್ಷ್ಮಿ, ಡಿಎಸ್ಎಸ್ ಭೀಮವಾಡ,
ಪುಟ 15 ಕ್ಕೆ



➘ ಗೋಪಾಲಕೃಷ್ಣ ಮಾತನಾಡಿ ಕೆಲವು ಗ್ರಾಮಗಳಲ್ಲಿ ದಲಿತರಿಗೆ ರುದ್ರಭೂಮಿ ಇಲ್ಲವಾಗಿದೆ, ದೌರ್ಜನ್ಯಕ್ಕೆ ಒಳಗಾಗುವ ದಲಿತರಿಗೆ ರಕ್ಷಣೆ ಸಿಗುತ್ತಿಲ್ಲವಾಗಿದೆ, ಇಂದಿನ ದಿನದಲ್ಲಿ ದಲಿತರನ್ನು ಹತ್ತಿಕ್ಕುವ ಕೆಲಸವಾಗುತ್ತಿದೆ, ಜಾತಿಯ ತಾರತಮ್ಯ ಹೋಗಲಾಡಿಸಲು ನಾವುಗಳು ಹೋರಾಟಗಳನ್ನು ಮಾಡಬೇಕು, ದಲಿತರ ಉದ್ಧಾರಕ್ಕಾಗಿ ಅನೇಕ ಮೇಲ್ವರ್ಗದ ಜನರು ಸಹ ಹೋರಾಟ ಮಾಡಿದ್ದಾರೆ, ಎಡಗೈ ಬಲಗೈ ಎಂದು ನಮ್ಮಗಳ ಕಿತ್ತಾಟದಿಂದ ಮೇಲ್ವರ್ಗದವರು ಅನುಕೂಲ ಪಡೆಯುತ್ತಿದ್ದಾರೆ ಎಂದು ತಿಳಿಸಿದರು.

ಮುಖಂಡ ತೋಟದಮನೆ ಗಿರೀಶ್ ಮಾತನಾಡಿ ಸಂಘಟನೆಗಳು ದಲಿತರ ಉದ್ದಾರಕ್ಕಾಗಿ ಶ್ರಮಿಸಬೇಕು, ದಲಿತರು ತಮ್ಮ ಹಕ್ಕುಗಳನ್ನು ಪಡೆಯಲು ಹೋರಾಟಗಳನ್ನು ಮಾಡಬೇಕು, ವಿದ್ಯೆ ಮನುಷ್ಯನ ಬಾಳಿಗೆ ದಾರಿದೀಪವಾಗಿದೆ ಆದ್ದರಿಂದ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವ ಕೆಲಸವನ್ನು ಪೋಷಕರು ಮಾಡಬೇಕು, ದಲಿತರ ಮಕ್ಕಳು ವಿದ್ಯಾವಂತರಾದರೆ ದಲಿತ ಜನಾಂಗ ಉದ್ದಾರವಾಗುತ್ತದೆ, ಸರ್ಕಾರದ ಸವಲತ್ತುಗಳನ್ನು ಬಳಸಿಕೊಂಡು ಆರ್ಥಿಕವಾಗಿ ಸದೃಡ ರಾಗಬೇಕು, ಎಂದು ತಿಳಿಸಿದರು. ಮುಖಂಡ ಹೊಸಹಳ್ಳಿ ಪುಟ್ಟಸ್ವಾಮಿ ಮಾತನಾಡಿ ನಮ್ಮ ಹಕ್ಕುಗಳನ್ನು ಪಡೆಯಬೇಕಾದರೆ ಸಂಘಟಿತರಾಗಬೇಕು, ಸಮಾಜದಲ್ಲಿ ಅಸ್ಪೃಶ್ಯತೆ ತೊಲಗಿ ಎಲ್ಲರೂ ಸಮಾನತೆ ಯಿಂದ ಬಾಳುವಂತಾಗಬೇಕು, ದಲಿತರು ವಿದ್ಯಾವಂತರಾದರೆ ದಲಿತ ಸಮುದಾಯ ಅಭಿವೃದ್ಧಿ ಹೊಂದುತ್ತದೆ. ಪ್ರತಿ ಗ್ರಾಮದಲ್ಲೂ ಅಂಬೇಡ್ಕರ್ ಭವನ ನಿರ್ಮಾಣವಾಗಬೇಕು ಎಂದು ತಿಳಿಸಿದರು.

ಗ್ರಾಮದಲ್ಲಿ ಸಮಿತಿಯ ನಾಮಪಲಕ ಉದ್ಘಾಟನೆ ಮತ್ತು ಸಮಾರಂಭದಲ್ಲಿ ದಲಿತ ಸಮುದಾಯದ ಮುಖಂಡರು ಮತ್ತು ಮಾಜಿ ತಾ.ಪಂ, ಹಾಲಿ ಗ್ರಾಪಂ ಸದಸ್ಯ ಮಹಿಳೆಯರನ್ನು ಸನ್ಮಾನಿಸಲಾಯಿತು.

ರಾಜ್ಯ ಸಮಿತಿಯ ರಾಜಶೇಖರ್ ಮೂರ್ತಿ, ಎಸ್. ಮಹದೇವ್, ಎನ್. ರಾಜಣ್ಣ, ಮುಖಂಡರಾದ ಕಲ್ಕೆರೆ ಶಿವಣ್ಣ, ಹನುಮಂತಯ್ಯ, ರಂಗಸ್ವಾಮಿ, ಶಿವರಾಜು, ಹನುಮಂತು(ಬುಡ್ಡ), ಗುರು, ಚಿಕ್ಕರಾಜು, ಸಿದ್ದರಾಜು, ಚಿಕ್ಕರಂಗನಾಥ್ ಭಾಗವಹಿಸಿದ್ದರು. ■







ನವಿಲಿಗೆ ಕಾಳುಕೊಡುವ, ಬೇಟಿಯರ ಜೊತೆ ಸೆಲ್ಫಿ ತೆಗೆಸಿಕೊಳ್ಳಲು ಕರೆ ಕೊಡುವ, ಬೇಟೀ ಬಚಾವ್ ಎನ್ನುವ ಘೋಷಣೆಯ ವೀರರೇ! ಬೇಟಿಯರ ನಾಲಿಗೆ ಕತ್ತರಿಸಲಾಗಿದೆ. ಬೆನ್ನು ಮೂಳೆ ಮುರಿಯಲಾಗಿದೆ. ಎಲ್ಲಿದ್ದೀರಿ? ಯಾವ ಬೇಟಿಯರು ಮಾತ್ರ ನಿಮ್ಮ ಪ್ರಕಾರ ಬಚಾವ್ ಆಗಲು ಅರ್ಹರು. ಉನ್ನಾವ್ ಕತುವಾ ಹತ್ರಾಸ್ ಗಳ ದಲಿತ ಬೇಟಿಯರು ಬೇಟಿಯರಂತೆ ಕಾಣುತ್ತಿಲ್ಲವೇ? ಅವರ ಆಕ್ರಂದನ ಕಿವಿಗೆ ಕೇಳುತ್ತಿಲ್ಲವೇ? ನ್ಯಾಯದ ತಕ್ಕಡಿಯನ್ನು ಬೇಕಾದ ಹಾಗೆಲ್ಲ ತೂಗಿಸುವ ಅಖಂಡ ಭುಜಬಲರೇ! .ಸಾಕು ನಿಮ್ಮ ಘೋಷಣೆಗಳು. ನೆಲದ ಕಾನೂನು ನೆಲದ ಜನರ ಪರವಾಗಿ ನಿಲ್ಲಬೇಕು. ಬಲಾಢ್ಯರ, ಮೇಲ್ಜಾತಿಯ ವರ್ಗಗಳ ಆಟದ ಬೊಂಬೆಯಾಗಿಸಬೇಡಿ.

ಯೋಗಿಯ ರಾಜ್ಯದಲ್ಲಿ ಭೋಗಿಗಳದೇ ಕಾರುಬಾರು..

ಧಿಕ್ಕಾರವಿರಲಿ ದೌರ್ಜನ್ಯಗಳಿಗೆ. ತಿರಸ್ಕಾರವಿರಲಿ ಅದನ್ನು ಮುಚ್ಚಿ ಹಾಕಲು ಪ್ರಯತ್ನಿಸುವವರಿಗೆ..





ಕೆ.ಎಸ್. ವಿಮಲ

ಮಾನವೀಯತೆಯೆಂಬ ಹೆಸರನ್ನೇ ಅಳಿಸಿ ಹಾಕುತ್ತಿರುವ ಘಟನೆಗಳಿಗೆ ನಾವೆಲ್ಲರೂ ಸಾಕ್ಷಿಗಳಾಗಿ ನಿಲ್ಲುತ್ತಿದ್ದೇವೆ. ಕ್ರೌರ್ಯದ ಪರಮಾವಧಿಯ ಘಟ್ಟ ತಲುಪಿದೆ.

ಆಕೆ ಹತ್ತೊಂಬತ್ತರ ಯುವತಿ. ಮಹಾನ್ ಹಿಂದೂ! 'ದೇಶದ ಹಿಂದೂ ನಾವೆಲ್ಲ ಒಂದು' ಎನ್ನುವ ಮಂತ್ರ ಜಪಿಸುವ ಮನುವಾದಿಗಳ ನೆಲದಲ್ಲಿ 'ಹಿಂದು'ವಾಗಿಯೇ ಜನಿಸಿದವಳು ಆದರೆ. . . ಸಾರಿ ದಲಿತಳು. ಹಾಗಾಗಿ ಕನಿಷ್ಠ ಮಾನವ ಘನತೆಗೂ ಆಕೆ ಅರ್ಹಳಲ್ಲ, ಎಂದರೆ ಸತ್ತ ಮೇಲೂ ಸರಿಯಾದ ಸಂಸ್ಕಾರ ಮನೆಯವರ ಕಣ್ಣೀರಿನ ತರ್ಪಣಕ್ಕೆ ಅವಕಾಶವಿಲ್ಲ. ಮಹಿಳೆಯೊಬ್ಬಳು ಪೋಲೀಸರ ಕಾಲಿಗೆ ಬಿದ್ದು ಬೇಡುವ ದೃಶ್ಯ ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿದೆ. ಅದರ ಜೊತೆ ಬರುವ ಸುದ್ದಿ ಹೇಳುತ್ತಿದೆ. ಆಕೆ ಸೆರಗೊಡ್ಡಿ ಕೇಳುತ್ತಿದ್ದಾಳೆ. ನನ್ನ ಮಗಳಿಗೆ ಅಂತ್ಯ ಸಂಸ್ಕಾರ ಮಾಡಲು ಅವಕಾಶ ಮಾಡಿಕೊಡಿ ಎಂದು. ಇನ್ನೂ ಸುದ್ದಿಗಳು ಬರುತ್ತಿವೆ, ಕುಟುಂಬದ, ಊರಿನ ಜನರನ್ನು ರೂಮೊಂದರಲ್ಲಿ ಕೂಡಿ ಹಾಕಿ ಪೋಲೀಸರು ಶವಕ್ಕೆ ಬೆಂಕಿ ಹಾಕಿದರೆಂದು. ಓಹ್ ಮಹಾನ್ ಹಿಂದೂ ಸಂಸ್ಕಾರವಂತರೇ. . . .ನಿಮ್ಮ ಧರ್ಮದಲ್ಲಿ ಹೀಗೂ ನಡೆಯುತ್ತದೆಯಾ?

ಖಾಕಿಗಳು ಸಮವಸ್ತ್ರಧಾರಿಗಳು ಯಾವುದರ ರಕ್ಷಣೆಗೆ ನಿಂತಿದ್ದಾರೆ. ದಲಿತರು, ಮಹಿಳೆಯರು ಮನುಷ್ಯರಲ್ಲ ಎನ್ನುವ ಮನುಧರ್ಮ ಶಾಸ್ತ್ರದ ಎಲ್ಲ ಶ್ರೇಣಿಕೃತ ಕೋಡ್ ಗಳಿಗೆ ಯೋಗಿಗಳ ರಾಜ್ಯದಲ್ಲಿ ಸಂಪೂರ್ಣ ಫ್ರೀ ಹ್ಯಾಂಡ್. ನೆನಪಿಸಿಕೊಳ್ಳೋಣ. ಉನ್ನಾವ್ ನಲ್ಲಿ ಸೇಂಗರ್ ಎಂಬ ಶಾಸಕ ಹದಿನೇಳರ ಯುವತಿಯ ಮೇಲೆ ಬಲಾತ್ಕಾರ ಮಾಡಿದ. ಆದರೆ ತನ್ನ ಸ್ಥಾನ, ಅಧಿಕಾರ ಬಲದಿಂದ ಆಕೆಯ ತಂದೆಯನ್ನೇ ಅಪರಾಧಿಯಾಗಿಸಿದ, ಆಕೆಯ ವಾಹನದ ಮೇಲೆ ಅಪಘಾತವೆಸಗಲಾಯಿತು, ಬೆದರಿಕೆ ಭೀತಿ ಎಲ್ಲವೂ ನಡೆದವು. ಇಂಥಹ ಹತ್ತು ಹಲವು ಘಟನೆಗಳು ಮರೆಯಲು ಸಾಧ್ಯವಿಲ್ಲ. ಆ ರಾಜ್ಯದಲ್ಲಿ ಹೀಗೆ ಒಂದರ ಹಿಂದೆ ಒಂದರಂತೆ ನಡೆಯುವ ಅತ್ಯಾಚಾರ, ದೌರ್ಜನ್ಯಗಳು ಅಲ್ಲಿನ ಅಧಿಕಾರಿಗಳನ್ನಾಗಲಿ, ಆಡಳಿತ ನ್ಯಾಯವ್ಯವಸ್ಥೆಯನ್ನಾಗಲಿ ಒಂದಿನಿತೂ ಕಂಗೆಡಿಸುತ್ತಿಲ್ಲ. ಬದಲಿಗೆ ಅಧಿಕಾರ ಜಾತಿಮದಗಳು ಠೇಂಕರಿಸುತ್ತಿವೆ. ಇದು ಅಪಾಯಕಾರಿ ಸಂಗತಿ. ದೇಶದ ಬಹುತ್ವ, ಸಮರಸ ತತ್ವದ ಬುನಾದಿಗೇ ಕೊಡಲಿ ಏಟು ಬೀಳುತ್ತಿದೆ. ಜಾತಿ ಆಧಾರಿತ ತಾರತಮ್ಯದ ಧರ್ಮಾಧಾರಿತ ವಿಭಜನೆಯ ಕೂರಂಬು ಇರಿಯುತ್ತಿದೆ. ಇದನ್ನು ಕೇವಲ ಮೇಲ್ನೋಟಕ್ಕೆ ಕಾಣುವ ದೌರ್ಜನ್ಯದ ಕುರಿತು ನಿಟ್ಟುಸಿರು ಆಕ್ರೋಶಕ್ಕೆ ಸೀಮಿತಗೊಳಿಸದೇ ಇದರ ದೀರ್ಘಕಾಲೀನ ಪರಿಣಾಮಗಳ ಬೇರುಗಳನ್ನಿಲ್ಲಿ ಹುಡುಕಲಾಗಬೇಕು.

ಇದು ನಿಧಾನವಾಗಿ ಭಾರತದ ಎಲ್ಲ ರಾಜ್ಯಗಳಲ್ಲಿಯೂ ಗೋಚರಿಸುತ್ತಿದೆ. ಧರ್ಮ ಜಾತಿ ಶ್ರೇಷ್ಠತೆಯ ಅಮಲನ್ನು ಜನರ ತಲೆಯೊಳಗೆ ತುಂಬಿ ಮನುಷ್ಯತ್ವದ ಕನಿಷ್ಠ ಹಂಬಲವನ್ನೂ ಕಿತ್ತು ಹಾಕಿ ಅಲ್ಲಿ ದ್ವೇಷ ಕ್ರೌರ್ಯಗಳನ್ನು ನಾಜೂಕಾಗಿ ತುಂಬಲಾಗುತ್ತಿದೆ.

ಉತ್ತರ ಪ್ರದೇಶದ ಈ ಘಟನೆ ಹತ್ರಾಸ್ ಎಂಬ ಪ್ರದೇಶದ ಹತ್ತೊಂಬತ್ತು ವರ್ಷದ ದಲಿತ ಯುವತಿಯ ಮೇಲೆ ಅತ್ಯಾಚಾರ ನಡೆಸಲಾಗಿದೆ. ಆಕೆಯ ನಾಲಿಗೆಯನ್ನೇ ಹರಿಯಲಾಗಿದೆ. ಬೆನ್ನು ಮೂಳೆಯನ್ನು ಮುರಿಯಲಾಗಿದೆ. ಇಷ್ಟೆಲ್ಲದರ ನಂತರ ಬದುಕು ಸಾವಿನ ಮಧ್ಯೆ ಹೋರಾಡಿ ಜೀವ ಉಳಿಸಿಕೊಳ್ಳಲಾರದೆ ಅಸು ನೀಗಿದವಳನ್ನು ಅವಳ ಅಂತಿಮ ಸಂಸ್ಕಾರವನ್ನು ಆಕೆಯ ಕುಟುಂಬಕ್ಕೆ ಮಾಡಲು ಅವಕಾಶ ಕೊಡದೇ ಬೆಳಗಿನ ಜಾವ 2.45 ರ ಹೊತ್ತಿನಲ್ಲಿ ಪೋಲೀಸರು ನಡೆಸಿದ್ದಾರೆ. ಅಲ್ಲಿನ ಬಿ.ಜೆ.ಪಿ.ಯ ವಕ್ತಾರರು ಟೀವಿ ಮಾಧ್ಯಮಕ್ಕೆ ಕೊಟ್ಟ ಹೇಳಿಕೆಯಂತೆ ಆ ಹಳ್ಳಿಯಲ್ಲಿ ಕಾನೂನು ಸುವ್ಯವಸ್ಥೆಯ ಕಾರಣದಿಂದ ಪೋಲೀಸರೇ ಯುವತಿಯ ದೇಹವನ್ನು ಸುಟ್ಟುಹಾಕಿದರೆಂದು. ವಾವ್! ಯಾವ ರಾಜ್ಯದಲ್ಲಿ ನಿರಂತರವಾಗಿ ಮಹಿಳೆಯರು, ಬಾಲಕಿಯರು, ದಲಿತ ಸಮುದಾಯದ ಮೇಲೆ ನಡೆಯುವ ದೌರ್ಜನ್ಯ ಕಾನೂನು ಸುವ್ಯವಸ್ಥೆ ಕಾಪಾಡಲು ಬೆದರಿಕೆ ಎನಿಸದೇ, ಮಗಳನ್ನು ಕಳೆದುಕೊಂಡ ಕುಟುಂಬ ಮತ್ತು ಗ್ರಾಮದವರು ದೇಹವನ್ನು ಘನತೆಯ ಅಂತ್ಯ ಸಂಸ್ಕಾರಕ್ಕಾಗಿ ತಮಗೆ ಕೊಡಿರೆಂದು ಗೋಳಿಡುತ್ತಿರುವುದು ಕಾನೂನು ಸುವ್ಯವಸ್ಥೆಗೆ ಬೆದರಿಕೆ ಎನ್ನಲಾಗುತ್ತಿದೆ. ಪೋಲಿಸರು ಸುಟ್ಟು ಹಾಕಿದ್ದರ ಸಮರ್ಥನೆಯ ಅರ್ಥ ಇದೇ ಅಲ್ಲವೇ?!

ಸೆಪ್ಟೆಂಬರ್ 14 ರಂದು ತಾಯಿಯ ಜೊತೆ ಸೌದೆಯೋ ಹುಲ್ಲೋ ತರಲು ಹೋದ ಯುವತಿ ತಾಯಿಯಿಂದ ಬೇರ್ಪಡುತ್ತಾಳೆ. ಜೊತೆಗಿದ್ದ ಮಗಳು ಕಾಣದಾದಾಗ ಹುಡುಕುತ್ತ ಹೋದ ತಾಯಿಗೆ ಸಿಕ್ಕಿದ್ದು ರಕ್ತ ಸಿಕ್ತ, ನಾಲಿಗೆ ಹರಿದ ಸ್ಥಿತಿಯಲ್ಲಿದ್ದ, ಗುಪ್ತಾಂಗಗಳಿಂದ ರಕ್ತ ಸೋರುತ್ತಿದ್ದ ಮಗಳ ಅರೆಜೀವದ ದೇಹ. ಹೇಗೋ ಮಗಳನ್ನು ಹತ್ತಿರದ ಪೋಲೀಸ್ ಠಾಣೆಗೆ ಕರೆತರುವ ತಾಯಿಗೆ ಅಲ್ಲಿ ಸಿಕ್ಕಿದ್ದು ಅಪಹಾಸ್ಯ, ಅಸಹಜ ವಿಳಂಬ. ತಕ್ಷಣವೇ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸುವ ಬದಲು ಪೋಲೀಸರು ನಡೆದುಕೊಂಡ ರೀತಿಯನ್ನು ನೆನೆಸಿಕೊಳ್ಳಲೂ ಸಾಧ್ಯವಿಲ್ಲ. ನಾಲ್ಕೈದು ದಿನಗಳ ಕಾಲ ಪ್ರಕರಣ ದಾಖಲಿಸಿಕೊಳ್ಳದೇ ಸತಾಯಿಸಿದ ಪೋಲಿಸ್ ವ್ಯವಸ್ಥೆಯ ಬಗ್ಗೆ ಯಾರಿಗೆ ತಾನೇ ನಂಬಿಕೆ ಉಳಿಯಲು ಸಾಧ್ಯ. ಯಾವುದಾದರೂ ನೆಲದ ಕಾನೂನು ಇದಕ್ಕೆ ಅವಕಾಶ ನೀಡುತ್ತದೆಯೇ? ಮಾನವೀಯ ದೃಷ್ಟಿ ಇರುವವರು ಒಪ್ಪಲು ಸಾಧ್ಯವೇ. ಅತ್ಯಂತ ಕ್ರೂರಿ ರಕ್ತ ಪಿಪಾಸುಗಳಿಗೆ ಮಾತ್ರ ಇಂಥಹ ನಡವಳಿಕೆ ಸಾಧ್ಯ.

ಉತ್ತರಪ್ರದೇಶದ ಮುಖ್ಯಮಂತ್ರಿಗಳು ಆರೋಪಿಗಳ ಫೋಟೋವನ್ನು ಸಾರ್ವಜನಿಕಗೊಳಿಸುತ್ತಾರಂತೆ. ನಾವು ಕೇಳುತ್ತೇವೆ ನ್ಯಾಯದ ದಾರಿಯಲ್ಲಿ ಅಡ್ಡ ಬರುತ್ತಿರುವ ಬಾಧೆಗಳನ್ನು ನಿವಾರಿಸದೇ ಇಂಥಹ ಕ್ರಮಗಳಿಂದ ಯಾವ ಉಪಯೋಗವೂ ಆಗಲಾರದು. ಉತ್ತರ ಪ್ರದೇಶದಲ್ಲಿ ದಲಿತರು, ಯುವತಿಯರು, ಮಹಿಳೆಯರ ಮೇಲೆ ನಡೆಯುತ್ತಿರುವ ಹೀನಾಯವಾದ ದೌರ್ಜನ್ಯಗಳ ನಿಯಂತ್ರಣಕ್ಕೆ ಯಾವ ಕ್ರಮವನ್ನೂ ಕೈಗೊಳ್ಳಲಾಗುತ್ತಿಲ್ಲ ಅಷ್ಟೇ ಅಲ್ಲ ಆರೋಪಿಗಳಿಗೆ ಎಲ್ಲ ರೀತಿಯ ರಕ್ಷಣೆ ನೀಡಲಾಗುತ್ತದೆ.

ಹತ್ರಾಸ್ ನಲ್ಲಿ ದಲಿತ ಯುವತಿಯ ಮೇಲೆ ಬರ್ಬರ ಕೃತ್ಯ ಎಸಗಿದವರನ್ನು ಶಿಕ್ಷೆಗೆ ಒಳಪಡಿಸಿ ಎಂದು ದೇಶದಾದ್ಯಂತ ಕೂಗು ಕೇಳುತ್ತಿದ್ದರೆ ಅಲ್ಲಿಯ ಮೇಲ್ಜಾತಿಯ ಒಂದಿಷ್ಟು ಜನ ಸವರ್ಣೀಯರ ಮೇಲೆ ವಿನಾಕಾರಣ ದೋಷ ಹೊರಿಸಲಾಗುತ್ತಿದೆ ಎಂದು ಪ್ರತಿಭಟನೆ ನಡೆಸಿದ್ದಾರಂತೆ. ಇದು ಈ ದೇಶದ ಜಾತಿ ವ್ಯವಸ್ಥೆಯಲ್ಲಿ ಮೇಲ್ಜಾತಿಯವರ ಪಾರಮ್ಯಕ್ಕೆ ಸಿಗುವ ಸ್ಪಷ್ಟ ಉದಾಹರಣೆಯಾಗಿದೆ. ಉತ್ತರ ಪ್ರದೇಶದಲ್ಲಿ ಪ್ರತಿ ದಿನದ ಸಂಗತಿಯೆಂಬಂತೆ ದಲಿತರ ಮೇಲೆ, ದಲಿತ ಮಹಿಳೆಯರ ಮೇಲೆ ಜಾತಿ ಮತ್ತು ಲಿಂಗಾಧಾರಿತ ದೌರ್ಜನ್ಯಗಳು ನಡೆಯುತ್ತಲೇ ಇವೆ. ಆದರೆ ದೌರ್ಜನ್ಯವನ್ನು ಲೈಂಗಿಕ ದೌರ್ಜನ್ಯವಾಗಿ ಮಾತ್ರ ನೋಡಬೇಕು. ಅದಕ್ಕೆ ಜಾತಿ ಹಣೆಪಟ್ಟಿ ಯಾಕೆ ಹಚ್ಚಬೇಕೆಂಬ ಅಪಸ್ವರ ಅಲ್ಲಲ್ಲಿ ಕೇಳುತ್ತಿದೆ. ಹೌದು. ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳು ಲಿಂಗಾಧಾರಿತವಾಗಿಯೇ ನೋಡಬೇಕೆನ್ನುವುದು ಒಂದು ಹಂತಕ್ಕೆ ಸರಿಯೇ, ಆದರೆ ತಳ ಸಮುದಾಯದ, ಆಸ್ತಿ, ಸಂಪತ್ತು ವಿದ್ಯೆ ಸಾಮಾಜಿಕ ಸ್ಥಾನ ಮಾನಗಳಿಲ್ಲದ ದಲಿತ ಸಮೂಹ ಈ ಎಲ್ಲ ದೌರ್ಜನ್ಯಗಳಿಗೆ ಅತಿ ಹೆಚ್ಚು ಬಲಿಯಾಗುತ್ತಿರುವಾಗ ಜೇಡವನ್ನು ಜೇಡವೆನ್ನದೆ ಒಂದು ಹುಳು ಎನ್ನಲಾದೀತೆ? ಮೇಲ್ಜಾತಿಯ ಶ್ರೇಷ್ಠತೆಯ ವ್ಯಸನಕ್ಕೆ ಬಿದ್ದವರ ಜಾತಿ ಅಹಂಕಾರದ ಬಲಿಪಶುಗಳು ದಲಿತ ದಮನಿತರು. ಮತ್ತು ಆ ಸಮೂಹದ ಹೆಣ್ಣುಮಕ್ಕಳು. ಅದನ್ನು ಮರೆಯಬಾರದು.

ಘಟನೆಯ ವಿರುದ್ಧ ದೊಡ್ಡ ಕೂಗೆದ್ದಿದೆ. ಪ್ರಧಾನಿಗಳಿಗೆ ಎಚ್ಚರವಾಗಿದೆ. ಉತ್ತರ ಪ್ರದೇಶದ ಮುಖ್ಯ ಮಂತ್ರಿಗಳಿಗೆ ಎಲ್ಲ ಸೂಕ್ತ ಕ್ರಮಕೈಗೊಳ್ಳಲು ಹೇಳಿಕೆ ನೀಡಿದ್ದಾರೆಂದು ವರದಿಯಾಗುತ್ತಿದೆ. ಆ ಅಸಹಾಯಕ ದಲಿತ ಯುವತಿ ನಮ್ಮ ದೇಶದ ರಾಜಧಾನಿಯ ಆಸ್ಪತ್ರೆಯಲ್ಲಿ ಕಳೆದ ಕೆಲವು ದಿನಗಳಿಂದ ಸಾವು ಬದುಕಿನ ಮಧ್ಯೆ ಹೋರಾಡುತ್ತಿದ್ದಳು. ಆಕೆ ತನ್ನ ಹರಿದ ನಾಲಿಗೆಯ ಮೂಲಕವೇ ತನ್ನ ಮೇಲೆ ಅತ್ಯಾಚಾರ ಮಾಡಿದವರ ಹೆಸರು ಹೇಳಿದ್ದಾಳೆ. ಮಾನ್ಯ ಪ್ರಧಾನಿಗಳ ಅಥವಾ ಸರಕಾರದ ಯಾವ ಪ್ರತಿನಿಧಿಗಳಿಗೂ ಸಮಯ ಮಾಹಿತಿ ಯಾವುದೂ ಸಿಗಲಿಲ್ಲವೇನೋ? ಮಹಿಳಾ ಮತ್ತು ಮಕ್ಕಳ ಸಚಿವರಾಗಲೀ ಮಹಿಳಾ ಆಯೋಗವಾಗಲೀ ಕನಿಷ್ಟ ಖಂಡನೆಯ ಹೇಳಿಕೆ ನೀಡಲಿಲ್ಲ. ಉತ್ತರ ಪ್ರದೇಶದ ಮುಖ್ಯಮಂತ್ರಿಗೆ ಛೀಮಾರಿ ಹಾಕಲಿಲ್ಲ. ತನಿಖೆಗೆ ಪ್ರತಿನಿಧಿಗಳನ್ನು ಕಳಿಸಲಿಲ್ಲ. ಎಂದರೆ ಮೌನ ಸಮ್ಮತಿ. ಹಿಂದೂ ರಾಷ್ಟ್ರದಲ್ಲಿ ಎಲ್ಲರೂ ಹಿಂದುಗಳು, ಆದರೆ ಮೇಲ್ಜಾತಿಯವರು ತುಸು ಹೆಚ್ಚು ಶ್ರೇಷ್ಠರು. ಅಲ್ಲಿಯ ಪೋಲೀಸ್ ಅಧಿಕಾರಿ ತನ್ನ ಮನಸ್ಸಿಗೆ ಬಂದ ಹಾಗೆಲ್ಲ ಹೇಳಿದ್ದಾರೆ. ಘಟನೆಯನ್ನು ಮುಚ್ಚಿ ಹಾಕಲು ಬೇಕಾದ ಹಾಗೆಲ್ಲ ಟ್ವಿಸ್ಟ್ ಮಾಡಲು ಪ್ರಯತ್ನಿಸಿದ್ದಾರೆ. ಅವರೆಲ್ಲರಿಗೆ ಕಠಿಣ ಶಿಕ್ಷೆ ಕೊಡಿಸುವಿರೇ?? ಅಪರಾಧಿಗಳ ಅಪರಾಧವನ್ನು ಮುಚ್ಚಿ ಹಾಕಲೆಂದೇ ಅಧಿಕಾರಿ ವಲಯವನ್ನು ಸಾಕಿಟ್ಟುಕೊಂಡಿರುವ ವ್ಯವಸ್ಥೆಯಲ್ಲಿ ಕಾನೂನಿಗೆ ತಿದ್ದುಪಡಿ ತಂದು ಅತ್ಯಾಚಾರ ಮಾಡಿದವರಿಗೆ ನೇಣುಗಂಬದ ಶಿಕ್ಷೆ!!. ಅಪರಾಧಿಗಳು ನ್ಯಾಯದ ಕಟಕಟೆಗೇ ಬಾರದಂತೆ ನೋಡಿಕೊಳ್ಳುವ ಈ ವ್ಯವಸ್ಥೆಯಲ್ಲಿ ತಿದ್ದುಪಡಿ ಮಾಡಬೇಕಿರುವುದು ಯಾವುದನ್ನು?? ಯೋಚಿಸಬೇಕಲ್ಲವೇ? ಶಿಕ್ಷೆಯ ಪ್ರಮಾಣವಲ್ಲ ಹೆಚ್ಚಬೇಕಿರುವುದು. ಪ್ರಕರಣಗಳು ನಡೆದರೆ ಅಪರಾಧಿ ತಪ್ಪಿಸಿಕೊಳ್ಳಲಾಗದಂಥಹ ಬಿಗಿ ಕ್ರಮ ಎಂಬುದು ಇಂಥಹ ಘಟನೆಗಳಿಂದ ಮತ್ತೆ ಮತ್ತೆ ಸಾಬೀತಾಗುತ್ತಿದೆ.

ದೇಶದ ಜನರ ಮನಸ್ಸಿನಿಂದ ನಿರ್ಭಯಾ ಪ್ರಕರಣ ಮಾಸಿಲ್ಲ, ಮಾಸುವುದೂ ಇಲ್ಲ. ಅಂಥಹ ಬರ್ಭರ ಘಟನೆಯನ್ನು ದೇಶವೆದ್ದು ಖಂಡಿಸಿತು. ಖಂಡಿಸಲೇ ಬೇಕು. ನವಿಲಿಗೆ ಕಾಳುಕೊಡುವ, ಬೇಟಿಯರ ಜೊತೆ ಸೆಲ್ಫಿ ತೆಗೆಸಿಕೊಳ್ಳಲು ಕರೆ ಕೊಡುವ, ಬೇಟೀ ಬಚಾವ್ ಎನ್ನುವ ಘೋಷಣೆಯ ವೀರರೇ! ಬೇಟಿಯರ ನಾಲಿಗೆ ಕತ್ತರಿಸಲಾಗಿದೆ. ಬೆನ್ನು ಮೂಳೆ ಮುರಿಯಲಾಗಿದೆ. ಎಲ್ಲಿದ್ದೀರಿ? ಯಾವ ಬೇಟಿಯರು ಮಾತ್ರ ನಿಮ್ಮ ಪ್ರಕಾರ ಬಚಾವ್ ಆಗಲು ಅರ್ಹರು. ಉನ್ನಾವ್ ಕತುವಾ ಹತ್ರಾಸ್ ಗಳ ದಲಿತ ಬೇಟಿಯರು ಬೇಟಿಯರಂತೆ ಕಾಣುತ್ತಿಲ್ಲವೇ? ಅವರ ಆಕ್ರಂದನ ಕಿವಿಗೆ ಕೇಳುತ್ತಿಲ್ಲವೇ? ನ್ಯಾಯದ ತಕ್ಕಡಿಯನ್ನು ಬೇಕಾದ ಹಾಗೆಲ್ಲ ತೂಗಿಸುವ ಅಖಂಡ ಭುಜಬಲರೇ! .ಸಾಕು ನಿಮ್ಮ ಘೋಷಣೆಗಳು. ನೆಲದ ಕಾನೂನು ನೆಲದ ಜನರ ಪರವಾಗಿ ನಿಲ್ಲಬೇಕು. ಬಲಾಢ್ಯರ, ಮೇಲ್ಜಾತಿಯ ವರ್ಗಗಳ ಆಟದ ಬೊಂಬೆಯಾಗಿಸಬೇಡಿ.

ದೇಶದ ಜನರೆದ್ದು ಕೂಗಬೇಕು. ಈ ದೇಶ ಮೇಲ್ಜಾತಿಯ 'ಹಿಂದೂತ್ವ' ವಾದಿಗಳ ಆಡಂಬೋಲವಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ಬದುಕುವ ಹಕ್ಕಿದೆ. ಘನತೆಯ ಬದುಕು, ಮತ್ತು ಸಾವಿನ ನಂತರವೂ ಘನತೆಯ ಅಂತ್ಯಸಂಸ್ಕಾರದ ಹಕ್ಕಿದೆ. ಸ್ವರವೆತ್ತಿ ಹೇಳೋಣ ಈ ದೇಶ ನಮ್ಮದು. ನಮ್ಮದಾಗಿಯೇ ಉಳಿಸಿಕೊಳ್ಳುತ್ತೇವೆ. ■





ಕಾರ್ಮಿಕರನ್ನು ಗುಲಾಮರಾಗಿಸುವ ಮೂರು ಶಾಸನಗಳು

ಪ್ರಕಾಶ ಕಾರಟ್

ಮೂರು ಕೃಷಿ ಸಂಬಂಧಿ ಕಾನೂನುಗಳನ್ನು ಯೇನಕೇನ ಪ್ರಕಾರೇಣ ಪಾಸು ಮಡಿಸಿಕೊಂಡ ನಂತರ ಪ್ರತಿಪಕ್ಷಗಳಿಲ್ಲದ ಸದನಗಳಲ್ಲಿ ಚರ್ಚೆಯೆಂಬ ತಮಾಷೆಯ ನಂತರ ಮೂರು ಮಹತ್ವದ ಕಾರ್ಮಿಕ ಕಾನೂನುಗಳನ್ನು ಮೋದಿ ಸರಕಾರ ಪಾಸು ಮಾಡಿಸಿಕೊಂಡಿದೆ. ಈ ಶಾಸನಗಳು ಒಂದು ವರ್ಗ ದಾಳಿಯಾಗಿವೆ. 'ನ್ಯೂ ಇಂಡಿಯ' ಎಂಬ ಆಳ್ವಿಕೆ ದೊಡ್ಡ ಬಂಡವಾಳಶಾಹಿಗಳು ಮತ್ತು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಕೈಂಕರ್ಯ ನಡೆಸಲು ಸಂಪೂರ್ಣವಾಗಿ ಕಟಿಬದ್ಧವಾಗಿರುವಂತದ್ದು ಎಂಬ ವಾಸ್ತವತೆಯನ್ನು ಇದು ಬಯಲಿಗೆ ತಂದಿದೆ. ಸನ್ನಿವೇಶ ಒಂದು ಬಲಿಷ್ಟ ಕಾರ್ಮಿಕ –ರೈತ ಐಕ್ಯತೆಯನ್ನು ಕಟ್ಟಬೇಕಾದ ಅಗತ್ಯವನ್ನು ತೋರಿಸುತ್ತದೆ. ಕಾರ್ಮಿಕರು ಮತ್ತು ರೈತರ ಹೋರಾಟಗಳನ್ನು ತೀವ್ರಗೊಳಿಸುವ ಮತ್ತು ವಿಸ್ತರಿಸುವ ಮೂಲಕ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಸಾಧ್ಯವಾದಷ್ಟು ವ್ಯಾಪಕವಾದ ಐಕ್ಯತೆಯನ್ನು ಬೆಸೆಯಲು ಸಾಧ್ಯವಿದೆ.

ಸಂಸತ್ತಿನ ಮೊಟಕುಗೊಂಡ ಮಳೆಗಾಲದ ಅಧಿವೇಶನದ ಕೊನೆಯಲ್ಲಿ ಪಾಸು ಮಾಡಿದ ಮೂವರು ಕಾರ್ಮಿಕ ಕಾನೂನುಗಳು ದೇಶದ ಕಾರ್ಮಿಕ ವರ್ಗದ ಮೇಲೆ ಒಂದು ಗಂಭೀರ ಆಕ್ರಮಣವಾಗಿದೆ. ಕೈಗಾರಿಕಾ ಸಂಬಂಧಗಳ ಸಂಹಿತೆ, ವೃತ್ತಿ ಸುರಕ್ಷಿತತೆ, ಆರೋಗ್ಯ ಮತ್ತು ದುಡಿಮೆಯ ಪರಿಸ್ಥಿತಿಗಳ ಸಂಹಿತೆ ಮತ್ತು ಸಾಮಾಜಿಕ ಭದ್ರತಾ ಸಂಹಿತೆ, ಈ ಮೂರರ ಜೊತೆಗೆ ಕಳೆದ ವರ್ಷ ಪಾಸಾದ ವೇತನಗಳ ಕುರಿತ ಸಂಹಿತೆ ಕಾರ್ಮಿಕರಿಗೆ ಸಂಬಂಧಪಟ್ಟ ನೂರಾರು ಕಾನೂನುಗಳನ್ನು ಸರಳೀಕರಿಸಲು ಮತ್ತು ಆಧುನೀಕರಿಸಲು ಎನ್ನಲಾಗುತ್ತಿದೆ. ಆದರೆ ಈ ಸಮಸ್ತ ಕಸರತ್ತು ನವ–ಉದಾರವಾದಿ ಸುಧಾರಣೆಗಳ ಒಂದು ಬಹಳ ಮಹತ್ವದ ಅಂಶವನ್ನು ಈಡೇರಿಸುವುದಕ್ಕಾಗಿ, ಅಂದರೆ ಮನಬಂದಂತೆ ಕಾರ್ಮಿಕರನ್ನು ದುಡಿಸಿಕೊಳ್ಳುವ ಅಥವ ಕಿತ್ತುಹಾಕುವ ಹೈರ್ ಅಂಡ್ ಫೈರ್ ವ್ಯವಸ್ಥೆಯನ್ನು, ಶ್ರಮವನ್ನು ಮಾಲಕರಿಗೆ ಬೇಕಾದಂತೆ ಲಭ್ಯಗೊಳಿಸುವುದು ಮತ್ತು ಬಂಡವಾಳಶಾಹಿಗಳ ಗರಿಷ್ಟ ಲಾಭದ ಧಾವಂತದಲ್ಲಿ ಅಡ್ಡಿಯುಂಟು ಮಾಡುವ ಕಾರ್ಮಿಕರ ಎಲ್ಲ ರಕ್ಷಣೆಗಳನ್ನು ತೆಗೆದು ಹಾಕುವುದು.

ಹೊಸ ಕಾರ್ಮಿಕ ಕಾನೂನುಗಳು ಪ್ರಸಕ್ತ ಕಾರ್ಮಿಕ ಕಾನೂನುಗಳು ಕಾರ್ಮಿಕರಿಗೆ ಒದಗಿಸಿದ್ದ ಸೀಮಿತ ಹಕ್ಕುಗಳು ಮತ್ತು ರಕ್ಷಣೆಗಳನ್ನೂ ಶಿಥಿಲಗೊಳಿಸುತ್ತವೆ.

ಬಹುಪಾಲು ಕೈಗಾರಿಕಾ ಉದ್ದಿಮೆಗಳು ಈ ಕಾನೂನುಗಳ ವ್ಯಾಪ್ತಿಯಿಂದಲೇ ಹೊರಗೆ ಹೋಗುವ ರೀತಿಯಲ್ಲಿ ಇದಕ್ಕೆ ಅನ್ವಯವಾಗುವ ಕಾರ್ಖಾನೆಗಳ ಬಲವನ್ನು ಪರಿಷ್ಕರಿಸಲಾಗಿದೆ. ಈ ಮೊದಲು ವಿದ್ಯುಚ್ಛಕ್ತಿ ಬಳಸುವ ಮತ್ತು 10ಕ್ಕಿಂತ ಹೆಚ್ಚು ಕಾರ್ಮಿಕರಿದ್ದ, ಹಾಗೂ ವಿದ್ಯುಚ್ಛಕ್ತಿ ಬಳಸದಲ್ಲಿ 20 ಕಾರ್ಮಿಕರಿಗಿಂತ ಹೆಚ್ಚು ಬಲವಿರುವ ಎಲ್ಲ ಕಾರ್ಖಾನೆಗಳಿಗೆ ಕಾರ್ಮಿಕ ಕಾನೂನುಗಳು ಅನ್ವಯವಾಗುತ್ತಿದ್ದವು. ಈಗ ಇದನ್ನು ಅನುಕ್ರಮವಾಗಿ 20 ಮತ್ತು 40ಕ್ಕೆ ಏರಿಸಲಾಗಿದೆ. ಒಂದೇ ಹೊಡೆತದಲ್ಲಿ ಕೈಗಾರಿಕಾ ಸಂಬಂಧಗಳ ಸಂಹಿತೆ 70ಶೇ. ಕೈಗಾರಿಕಾ ಉದ್ದಿಮೆಗಳನ್ನು ಮತ್ತು 74ಶೇ. ಕೈಗಾರಿಕಾ ಕಾರ್ಮಿಕರನ್ನು 'ಹೈರ್ ಅಂಡ್ ಫೈರ್' ವ್ಯವಸ್ಥೆಗೆ ಒಳಪಡಿಸಿದೆ. ಮೊದಲು 100ಕ್ಕಿಂತ ಹೆಚ್ಚು ಕಾರ್ಮಿಕರಿದ್ದ ಉದ್ದಿಮೆಗಳು ತಮ್ಮ ಕಾರ್ಮಿಕರ ಲೇ ಆಫ್ ಮತ್ತು ರಿಟ್ರೆಂಚ್‌ಮೆಂಟ್ ಮಾಡಲು ರಾಜ್ಯಸರಕಾರದ ಅನುಮತಿಯನ್ನು ಪಡೆಯಬೆಕಾಗಿತ್ತು. ಈಗ ಈ ಕನಿಷ್ಟ ಮಿತಿಯನ್ನು 300ಕ್ಕೆ ಏರಿಸಲಾಗಿದೆ. ಅಲ್ಲದೆ ಸರಕಾರ ಒಂದು ಅಧಿಸೂಚನೆಯ ಮೇರೆಗೆ ಅದನ್ನು ಇನ್ನೂ ಏರಿಸುವ ಅಧಿಕಾರವನ್ನು ಹೊಂದಿದೆ. 300ಕ್ಕಿಂತ ಕಡಿಮೆ ಕಾರ್ಮಿಕರನ್ನು ದುಡಿಸಿಕೊಳ್ಳುವ ಕಾರ್ಖಾನೆಗಳು, ಉದ್ದಿಮೆಗಳು ಈಗ 'ಸ್ಥಾಯೀ ಆದೇಶ'ಗಳನ್ನು ಹೊಂದಿರಬೇಕಾಗಿಲ್ಲ. ಇದು ಕಾರ್ಮಿಕರ ಸೇವಾಷರತ್ತುಗಳಿಗೆ ಸಂಬಂಧಪಟ್ಟಂತೆ ಮಾಲಕರನ್ನು ಕಾನೂನಾತ್ಮಕವಾಗಿ ಬದ್ಧಗೊಳಿಸುವ ಒಂದು ದಸ್ತಾವೇಜು. ಅಂದರೆ ಮಾಲಕರು ಇಂತಹ ಬದ್ಧತೆ ಹೊಂದಿರಬೇಕಾಗಿಲ್ಲ. ಈ ಶಾಸನಗಳಲ್ಲಿ ಗಂಭೀರ ದೋಷಗಳಿವೆ. ಏಕೆಂದರೆ ಇವು ಕಾರ್ಯಾಂಗಕ್ಕೆ ಅವನ್ನು ಮುರಿದು ಮೂಲ ಅಂಶಗಳನ್ನು ದುರ್ಬಲಗೊಳಿಸುವ ನಿಯಮಗಳನ್ನು ರೂಪಿಸಲು ಅವಕಾಶ ಕೊಡುತ್ತವೆ. ಉದಾಹರಣೆಗೆ, ಕೈಗಾರಿಕಾ ಸಂಬಂಧಗಳ ಸಂಹಿತೆಯಲ್ಲಿ ಸೂಕ್ತ ಸರಕಾರ 'ಸಾರ್ವಜನಿಕ ಹಿತದೃಷ್ಟಿಯಿಂದ' ಯಾವುದೇ ಕೈಗಾರಿಕಾ ಉದ್ದಿಮೆಗೆ ಈ ಸಂಹಿತೆಯ ಅಂಶಗಳಿಂದ ವಿನಾಯ್ತಿ ಕೊಡಬಹುದು. ಈ ಕರಾಳ ಅಂಶದ ಪೂರ್ವಚಿತ್ರವನ್ನು ಮಧ್ಯಪ್ರದೇಶದ ಬಿಜೆಪಿ ಸರಕಾರ ಕೊರೊನ ಅವಧಿಯಲ್ಲಿ ರಾಜ್ಯದಲ್ಲಿ ಹೊಸದಾಗಿ ಸ್ಥಾಪನೆಗೊಂಡ ಉದ್ದಿಮೆಗಳಿಗೆ ಎಲ್ಲ ಕಾರ್ಮಿಕ ಕಾನೂನುಗಳನ್ನು ಅಮಾನತುಗೊಳಿಸಿದ್ದಾಗ ಕಾಣ ಸಿಕ್ಕಿತ್ತು. ರಾಜ್ಯಗಳಿಗೆ ಹೀಗೆ ಕೊಟ್ಟಿರುವ ಶಾಸನಾತ್ಮಕ ಅಧಿಕಾರ ಪರಿಣಾಮವೆಂದರೆ ಕಾರ್ಮಿಕ ರಕ್ಷಣೆಯನ್ನು ಯಾರು ಹೆಚ್ಚು ದುರ್ಬಲಗೊಳಿಸುತ್ತಾರೆ ಎಂಬ ಸ್ಪರ್ಧೆ.

ಹೊಸ ಕಾರ್ಮಿಕ ಕಾನೂನುಗಳು ಶ್ರಮಶಕ್ತಿಯ ಅನೌಪಚಾರೀಕರಣ, ಕಾಂಟ್ರಾಕ್ಟೀಕರಣ ಮತ್ತು ಕ್ಯಾಶುವಲೀಕರಣಕ್ಕೆ ಉತ್ತೇಜನೆ ನೀಡುತ್ತವೆ. 'ನಿಗದಿತ ಅವಧಿಯ ಉದ್ಯೋಗ' (fixed term employment) ಎಂಬ ಹೆಸರಿನಿಂದ ಅಲ್ಪ ಕಾಲದ ಕೆಲಸದ ಹೊಸದೊಂದು ವಿಧವನ್ನು ಸೇರಿಸಲಾಗಿದೆ. ಇದು ಸೀಸನಲ್ ಕೆಲಸಗಳಿಗಾಗಿ ಎನ್ನಲಾಗಿದೆ. ಆದರೆ ಇಂತಹ ನಿಗದಿತ ಅವಧಿಯ ನವೀಕರಣಕ್ಕೆ ಮಿತಿ ಹಾಕಿಲ್ಲ. ಇದರಿಂದಾಗಿ ಇದೊಂದು ಯಾವುದೇ ಸಾಮಾಜಿಕ ಭದ್ರತೆಯ ಸೌಲಭ್ಯಗಳಿಲ್ಲದ ಕೆಲಸದ ಒಂದು ಶಾಶ್ವತ ವಿಧಾನವಾಗಲಿದೆ. ಈ ಮಸೂದೆಯ ಹಿಂದಿನ ಆವೃತ್ತಿಯಲ್ಲಿ ಕನಿಷ್ಟ 20 ಕಾಂಟ್ರಾಕ್ಟ್ ಕಾರ್ಮಿಕರನ್ನು ದುಡಿಸಿಕೊಳ್ಳುವ ಸಂಸ್ಥೆಗಳಿಗೆ ಕಾಂಟ್ರಾಕ್ಟ್ ಕಲಮುಗಳು ಅನ್ವಯವಾಗುತ್ತವೆ ಎನ್ನಲಾಗಿತ್ತು. ಇದನ್ನು ಈಗ ಅಂಗೀಕರಿಸಿರುವವ ಶಾಸನದಲ್ಲಿ 50ಕ್ಕೆ ಏರಿಸಲಾಗಿದೆ. ಈ ಮೂಲಕ ಮೂರನೇ ಎರಡು ಇಂತಹ ಕಂಪನಿಗಳು ಕಾಂಟ್ರಾಕ್ಟ್ ಕಾನೂನಿನ ವ್ಯಾಪ್ತಿಗೇ ಬರುವುದಿಲ್ಲ.

ಕಾರ್ಮಿಕರ ಸುರಕ್ಷಿತತೆ ಮತ್ತು ಕೆಲಸದ ಪರಿಸ್ಥಿತಿಗಳ ಪ್ರಶ್ನೆಗಳನ್ನು ನಿಭಾಯಿಸುವ ಗಂಭೀರ ಪ್ರಯತ್ನವೇನಿಲ್ಲ. ಕೊವಿಡ್ ಮಹಾಸೋಂಕಿನ ಅವಧಿಯಲ್ಲಿಯೇ 30 ಕೈಗಾರಿಕಾ ಅಪಘಾತಗಳು ಸಂಭವಿಸಿವೆ, ಇದರಲ್ಲಿ 75 ಕಾರ್ಮಿಕರು ಪ್ರಾಣ ಕಳಕೊಂಡಿದ್ದಾರೆ, ನೂರಾರು ಜನ ಗಾಯಗೊಂಡಿದ್ದಾರೆ. ಸುರಕ್ಷಿತತೆಯ ಮಾನದಂಡಗಳು ಮತ್ತು ಗರಿಷ್ಟ ಕೆಲಸದ ಗಂಟೆಗಳನ್ನು ಕುರಿತಾದ 'ವೃತ್ತಿ ಸುರಕ್ಷಿತತೆ, ಆರೋಗ್ಯ ಮತ್ತು ದುಡಿಮೆಯ ಪರಿಸ್ಥಿತಿಗಳ ಸಂಹಿತೆ' ಸಣ್ಣ ಉದ್ದಿಮೆಗಳನ್ನೆಲ್ಲವನ್ನೂ ತನ್ನ ವ್ಯಾಪ್ತಿಯಿಂದ ಹೊರಗಿಟ್ಟಿದೆ. ಅಲ್ಲದೆ ಸುರಕ್ಷಿತತೆಯ ಮಾನಕಗಳ ಮತ್ತು ವಿವಿಧ ಸಾಮಾಜಿಕ ಭದ್ರತಾ ಸ್ಕೀಮುಗಳ ಅನ್ವಯದ ಮಿತಿಗಳನ್ನು ನಿಯಮಗಳ ಮೂಲಕ ನಿರ್ದಿಷ್ಟ ಪಡಿಸಬಹುದು, ಇಲ್ಲವೇ ಆ ಅಧಿಕಾರವನ್ನು ರಾಜ್ಯ ಸರಕಾಗಳಿಗೆ ನೀಡಲಾಗಿದೆ.

ಸಂಘಟಿಸುವ ಹಕ್ಕು ಮತ್ತು ಸಂಘ ಕಟ್ಟಿಕೊಳ್ಳುವ ಹಕ್ಕು ಕೂಡ ಕೈಗಾರಿಕಾ ಸಂಬಂಧಗಳ ಸಂಹಿತೆಗೆ ಒಳಪಟ್ಟಿದೆ. ಯೂನಿಯನ್‌ಗಳ ಮಾನ್ಯತೆಗೆ ಮಾನದಂಡಗಳಿಲ್ಲ; ಮಾನ್ಯತೆ ನೀಡಲು ಗುಪ್ತ ಮತದಾನ ನಡೆಸಬೇಕು ಎಂಬ ದೀರ್ಘಕಾಲದ ಬೇಡಿಕೆಯನ್ನು ನಿರ್ಲಕ್ಷಿಸಲಾಗಿದೆ. ಸಾಮೂಹಿಕ ಚೌಕಾಸಿಯ ಪ್ರಕ್ರಿಯೆಯನ್ನು ನಿರ್ದಿಷ್ಟ ಪಡಿಸಲಾಗಿಲ್ಲ. ಸ್ಥಾಯೀ ಆದೇಶಗಳು ಇರುವುದಿಲ್ಲ ಎಂದರೆ, ಅದರರ್ಥ, ಒಂದು ಸಂಸ್ಥೆಯೊಳಗೆ ಒಂದೇ ರೀತಿಯ ದುಡಿಮೆಯ ಪರಿಸ್ತಿತಿಗಳಿರುವುದಿಲ್ಲ, ಬಹಳಷ್ಟು ಕಾರ್ಮಿಕರು ಕಾಂಟ್ರಾಕ್ಟ್ ಅಥವ ನಿಗದಿತ ಅವಧಿಯವರಾಗಿರುತ್ತಾರೆ. ಇದು ಕಾರ್ಮಿಕ ಸಂಘಗಳ ಕಾರ್ಯನಿರ್ವಹಣೆಗೆ ತೊಂದರೆಯುಂಟು ಮಾಡುತ್ತದೆ.

ಒಂದು ಹೆಚ್ಚು ಗಂಭೀರ ದಾಳಿಯೆಂದರೆ, ಮುಷ್ಕರದ ಹಕ್ಕಿನ ಮೇಲೆ ಸುಮಾರಾಗಿ ನಿರ್ಬಂಧವನ್ನೇ ಹಾಕಲಾಗಿದೆ. ಕೈಗಾರಿಕಾ ಸಂಬಂಧಗಳ ಸಂಹಿತೆಯಲ್ಲಿ 14 ದಿನಗಳ ನೋಟೀಸು ಕೊಡಬೇಕು ಎಂದು ಹೇಳಲಾಗಿದೆ(ಅದೇ ವೇಳೆಗೆ, 60ದಿನಗಳ ಮೊದಲು ಮುಷ್ಕರದ ನೋಟೀಸು ಕೊಡಬೇಕು ಎಂದೂ ಹೇಳಲಾಗಿದೆ). ಇದರಲ್ಲಿ ರಾಜಿ–ಸಂಧಾನದ ಕಲಾಪಗಳೂ ತಂತಾನೇ ನುಸುಳುತ್ತವೆ. ಈ ಅವಧಿಯಲ್ಲಿ ಮುಷ್ಕರಕ್ಕೆ ಅನುಮತಿ ಇರುವುದಿಲ್ಲ. ರಾಜಿ–ಸಂಧಾನ ಕಲಾಪಗಳು ಮುಗಿದ ಒಂದು ವಾರದ ನಂತರವಷ್ಟೇ ಮುಷ್ಕರ ನಡೆಸಬಹುದು. ಇನ್ನೊಂದು ಅಂಶವಿದೆ. ಮೂರು ತಿಂಗಳ ನ್ಯಾಯನಿರ್ಣಯ ಕಲಾಪಗಳ ವೇಳೆಯಲ್ಲಿ ಮುಷ್ಕರ ನಡೆಸುವಂತಿಲ್ಲ. ಅಗತ್ಯ ಸೇವೆಗಳಲ್ಲಿರುವ ಕಾರ್ಮಿಕರು ಮುಷ್ಕರಕ್ಕೆ ಆರು ವಾರಗಳ ನೋಟೀಸು ಕೊಡಬೇಕು.

ಇಂತಹ ಷರತ್ತುಗಳ ಗೊಂದಲದ ಗೂಡಿನಿಂದ ಮೂಡಿ ಬರುವ ಸಂಗತಿಯೆಂದರೆ ಮುಷ್ಕರದ ನೋಟೀಸು ಕೊಟ್ಟ ಮೇಲೆ ರಾಜಿಸಂಧಾನ/ನ್ಯಾಯನಿರ್ಣಯದ ದೀರ್ಘಕಾಲ ಎಳೆಯುವ ಘಟ್ಟದ ವರೆಗೆ ಮುಷ್ಕರ ನಡೆಸುವಂತಿಲ್ಲ.

ಮೋದಿ ಸರಕಾರ ಈ ಮೂರು ಕಾರ್ಮಿಕ–ವಿರೋಧಿ ಮಸೂದೆಗಳನ್ನು ಮಹಾಸೋಂಕಿನ ಅವಧಿಯಲ್ಲಿ ಸಂಸತ್ತಿನ ಬಾಯಿ ಕಟ್ಟಿ ಹಾಕಿ ತುರುಕಿಸಿದೆ. ಈ ಅಧಿವೇಶನದಲ್ಲಿ ಮಂಡಿಸಿದ ಮೂರು ಮಸೂದೆಗಳು 2019ರಲ್ಲಿ ಸಂಸತ್ತಿನಲ್ಲಿ ಮಂಡಿಸಿದ ಮಸೂದೆಗಳಿಗಿಂತ ಭಿನ್ನವಾಗಿದ್ದವು. ಅವು ಸ್ಥಾಯಿ ಸಮಿತಿಯ ಮೂಲಕ ಹಾದು ಬಂದಿದ್ದವು. ಆದರೆ ಇವಕ್ಕೆ ಲೇಆಫ್, ರಿಟ್ರೆಂಚ್‌ಮೆಂಟ್‌ಗಳಿಗೆ ಕನಿಷ್ಟ ಕಾರ್ಮಿಕ ಬಲವನ್ನು 300ಕ್ಕೆ ಏರಿಸುವುದು ಮುಂತಾದ ಹೊಸ ಅಂಶಗಳನ್ನು ಸೇರಿಸಲಾಯಿತು. ಇಂತಹ ದೀರ್ಘ ಕಾಲ ಪರಿಣಾಮ ಬೀರುವಂತಹ ಮಸೂದೆಗಳನ್ನು ಸ್ಥಾಯೀ ಸಮಿತಿಗಳಲ್ಲಿ ತಪಾಸಣೆ ಇಲ್ಲದೆ, ಪ್ರತಿಪಕ್ಷಗಳು ಇಲ್ಲದ ಸದನಗಳಲ್ಲಿ ಚರ್ಚೆಯೆಂಬ ತಮಾಷೆ ನಡೆಸಿ ಅಂಗೀಕರಿಸಲಾಗಿದೆ.

ಈ ಶಾಸನಗಳು ಒಂದು ವರ್ಗ ದಾಳಿಯಾಗಿವೆ. 'ನ್ಯೂ ಇಂಡಿಯ' ಎಂಬ ಆಳ್ವಿಕೆ ದೊಡ್ಡ ಬಂಡವಾಳಶಾಹಿಗಳು ಮತ್ತು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಕೈಂಕರ್ಯ ನಡೆಸಲು ಸಂಪೂರ್ಣವಾಗಿ ಕಟಿಬದ್ಧವಾಗಿರುವಂತದ್ದು ಎಂಬ ವಾಸ್ತವತೆಯನ್ನು ಇದು ಬಯಲಿಗೆ ತಂದಿದೆ. ಮೂರು ಕಾರ್ಮಿಕ ಶಾಸನಗಳು ಮತ್ತು ಮೂರು ಕೃಷಿ ಸಂಬಂಧಿ ಕಾನೂನುಗಳು ಕಾರ್ಮಿಕರು ಮತ್ತು ರೈತರ ಮೇಲಿನ ದುಷ್ಟ ದಾಳಿಗಳು. ಕಾರ್ಮಿಕ ವರ್ಗ ಈ ಭೀಷಣ ದಾಳಿಯನ್ನು ಐಕ್ಯ ಮತ್ತು ನಿರಂತರ ಪ್ರತಿರೋಧದ ಮೂಲಕ ಎದುರಿಸಲು ಸಿದ್ಧಗೊಳ್ಳುತ್ತಿದೆ. ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಪ್ರತಿಭಟನೆಗಳ ಕರೆಗಳಿಗೆ ಉತ್ತಮ ಸ್ಪಂದನ ದೊರೆಯುತ್ತಿದೆ. ಇದು ಆರಂಭವಷ್ಟೇ. ಸನ್ನಿವೇಶ ಒಂದು ಬಲಿಷ್ಟ ಕಾರ್ಮಿಕ –ರೈತ ಐಕ್ಯತೆಯನ್ನು ಕಟ್ಟಬೇಕಾದ ಅಗತ್ಯವನ್ನು ತೋರಿಸುತ್ತದೆ. ಕಾರ್ಮಿಕರು ಮತ್ತು ರೈತರ ಹೋರಾಟಗಳನ್ನು ತೀವ್ರಗೊಳಿಸುವ ಮತ್ತು ವಿಸ್ತರಿಸುವ ಮೂಲಕ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಸಾಧ್ಯವಾದಷ್ಟು ವ್ಯಾಪಕವಾದ ಐಕ್ಯತೆಯನ್ನು ಬೆಸೆಯಲು ಸಾಧ್ಯವಿದೆ.



ವ್ಯಂಗ್ಯಚಿತ್ರ ಕೃಪೆ: ಪಂಜು ಗಂಗೊಳ್ಳಿ





ರಾಷ್ಟ್ರವ್ಯಾಪ್ತಿ ರೈತರ ಪ್ರತಿಭಟನಾ ಉಪವಾಸ ಸತ್ಯಾಗ್ರಹ

ರಾಷ್ಟ್ರದಲ್ಲಿ ಸುಮಾರು 200 ಸಂಘಟನೆಗಳಿಗೂ ಹೆಚ್ಚಿನ ರೈತ ಸಂಘಟನೆಗಳಿಂದ ರಚನೆಯಾಗಿರುವ ಅಖಿಲ ಭಾರತ ಸಂಘರ್ಷ ಸಮನ್ವಯ ಸಮಿತಿ **(AIKSCC)** ಭಾಗವಾಗಿರುವ ರಾಜ್ಯದ ಬಹುತೇಕ ಎಲ್ಲಾ ರೈತ ಮತ್ತು ಕೃಷಿ ಕೂಲಿಕಾರರ ಸಂಘಟನೆಗಳನ್ನು ಒಳಗೊಂಡಿರುವ ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ (AIKSCC) ಅಕ್ಟೋಬರ್ 2 ರಂದು ಪ್ರತಿಭಟನಾ ಉಪವಾಸ ಸತ್ಯಾಗ್ರಹ ವನ್ನು ಬೆಳಿಗ್ಗೆ ಯಿಂದ ಮಹಾತ್ಮಗಾಂಧಿ ಪ್ರತಿಮೆ ಎದುರು ಆರಂಭಗೊಂಡಿತ್ತು.

ಈ ಕಾರ್ಯಕ್ರಮದಲ್ಲಿ AIKSCC ಕೇಂದ್ರ ಸಮಿತಿ ಸದಸ್ಯರಾದ ಶ್ರೀಮತಿ ಕವಿತಾ ಕುರುಗಂಟಿ, ಶ್ರೀ ಕೋಡಿಹಳ್ಳಿ ಚಂದ್ರಶೇಖರ್, KRRS ರಾಜ್ಯಾಧ್ಯಕ್ಷರಾದ ಶ್ರೀ ಬಡಗಲಪುರ ನಾಗೇಂದ್ರ, ಕೆಪಿಆರ್ಎಸ್

ಪುಟ 16 ಕ್ಕೆ


ಬಾಗೇಪಲ್ಲಿ


ಮೈಸೂರು


ಗುಡಿಬಂಡೆ


ಅಂಕೋಲ


ಬೆಂಗಳೂರು


ಹುಬ್ಬಳ್ಳಿ


ಗಂಗಾವತಿ


ಕೋಲಾರ



ಭಗತ್ ಸಿಂಗ್ : ಕಾಲದಲ್ಲಿ ದೂರ ಸಂಕಲ್ಪದಲ್ಲಿ ಹತ್ತಿರ

ಸೀತಾರಾಮ್ ಯೆಚುರಿ

ಅನುವಾದ: ಶ್ರೃಂನಾ ಮತ್ತು ರಾಮು

ಈ ವರ್ಷ ಭಗತ್ ಸಿಂಗ್‌ರ ಜನ್ಮದಿನಾಚರಣೆ ನಡೆಸುವ ಸಂದರ್ಭದಲ್ಲಿ ಅವರ ಹಲವು ವಿಚಾರಗಳು ಒಂದು ಸಮಕಾಲೀನ ಪ್ರಸ್ತುತತೆ ಮತ್ತು ತುರ್ತಿನಿಂದ ಮಾರ್ದನಿಗೊಳ್ಳುತ್ತಿವೆ. ಕ್ರಾಂತಿಯ ನಿಜವಾದ ಅರ್ಥ, ಶಾಸಕಾಂಗದ ಬಾಯಿ ಮುಚ್ಚಿಸುವುದು. ಕೋಮುವಾದಕ್ಕೆ ಎದುರಾಗಿ ಜಾತ್ಯತೀತತೆ, ಮಾಧ್ಯಮ ಮತ್ತು ಸಾಮಾಜಿಕ ನ್ಯಾಯ ಕುರಿತಂತೆ ಅವರ ಶ್ರೀಮಂತ ಕೊಡುಗೆಗಳನ್ನು ಮುಂದೊಯ್ಯುವ ಪ್ರಜ್ಞಾಪೂರ್ವಕ ಪ್ರಯತ್ನದೊಂದಿಗೆ ಈ ಮಹಾನ್ ಕ್ರಾಂತಿಕಾರಿಗೆ ಈ ಬಾರಿ ಪ್ರಜಾಪ್ರಭುತ್ವಾದಿ ಶಕ್ತಿಗಳು ಶ್ರದ್ಧಾಂಜಲಿಯನ್ನು ಅರ್ಪಿಸಿದ್ದಾರೆ.

ಸೆಪ್ಟೆಂಬರ್ 28, 2020 ರಂದು ಭಾರತದಲ್ಲಿ ಐತಿಹ್ಯವಾಗಿರುವ ಹುತಾತ್ಮ ಭಗತ್ ಸಿಂಗ್ ರ 113 ನೇ ಜನ್ಮ ದಿನಾಚರಣೆ. ಇವರು ವರ್ಷದಿಂದ ವರ್ಷಕ್ಕೆ ಕಾಲದಲ್ಲಿ ದೂರ ಸರಿಯುಯುತ್ತಿರಬಹುದು, ಆದರೆ ಇವರ ಪ್ರಸ್ತುತತೆ ನಮ್ಮ ಇಂದಿನ ಸವಾಲುಗಳಲ್ಲಿ ಇನ್ನೂ ಹೆಚ್ಚಾಗಿ ಹೆಚ್ಚು ಅನುರಣಿಸುತ್ತದೆ.

ಈ ವರ್ಷ ಈ ಸಂದರ್ಭದಲ್ಲಿ ಭಗತ್ ಸಿಂಗ್‌ರ ಹಲವು ವಿಚಾರಗಳು ಒಂದು ಸಮಕಾಲೀನ ಪ್ರಸ್ತುತತೆ ಮತ್ತು ತುರ್ತಿನಂದ ಮಾರ್ದನಿಗೊಳ್ಳುತ್ತಿವೆ. 23 ವರ್ಷಗಳ ಅಲ್ಪ ಜೀವನಾವಧಿಯಲ್ಲಿಯೇ ಅವರು ರಚಿಸಿದ ಕೃತಿಗಳ ಅಗಾಧತೆ ನಮ್ಮನ್ನು ಇಂದಿಗೂ ದಿಗ್ಭ್ರಾಂತಿಗೊಳಿಸುತ್ತದೆ. ಮಾನವ ಜೀವನದ ಎಲ್ಲಾ ಆಯಾಮಗಳ ಕುರಿತಂತೆ ಕಲವಾರು ಪ್ರಶ್ನೆಗಳ ಮೇಲೆ ಅವರು ಬರೆದಿದ್ದಾರೆ. ತನ್ನ ಕ್ರಾಂತಿಕಾರಿ ಚಟುವಟಿಕೆಗಳ ನಡುವೆಯೇ ಸಮಯ ಮಾಡಿಕೊಂಡು ಅವರು ಬಹಳಷ್ಟು ಓದಿದ್ದರು, ಅಂತರರಾಷ್ಟ್ರೀಯ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ವಿಶ್ವದ ಬಹುತೇಕ ಬರಹಗಾರರು ಮತ್ತು ಕವಿಗಳಿಂದ ಸ್ಫೂರ್ತಿ ಪಡೆದಿದ್ದರು ಮತ್ತು ದುಡಿಯುವ ವರ್ಗದ ಸರ್ವಾಧಿಕಾರದಡಿ ಕ್ರಾಂತಿಕಾರಿ ವಿಮೋಚನೆಯ ಗುರಿಯನ್ನು ದೃಢವಾಗಿ ಎತ್ತಿ ಹಿಡಿದಿದ್ದರು ಎನ್ನುವುದು ಸ್ಪಷ್ಟ.

ಇವರ ಜೀವನ ಮತ್ತು ಕಾರ್ಯದ ಬಗ್ಗೆ ಬಹಳ ಬರೆಯಲಾಗಿದೆ. ಮುಂದೆಯೂ ಇನ್ನಷ್ಟು ಬರೆಯಲಾಗುತ್ತದೆ. ಭಾರತದ ಯುವ ಸಮೂಹದ ಹಲವು ಪೀಳಿಗೆಗಳಿಗೆ ಇವರು ಸ್ಫೂರ್ತಿಯಾಗಿಯೇ ಉಳಿದಿದ್ದಾರೆ. ಇವರ ಶ್ರೀಮಂತ ಕೊಡುಗೆಗಳಲ್ಲಿ, ಕೆಲವು ವಿಷಯಗಳನ್ನು ಸಮಕಾಲೀನ ಸಂದರ್ಭದಲ್ಲಿ ಚರ್ಚಿಸುವುದು ಅಗತ್ಯ.

ದೆಹಲಿ ಬಾಂಬ್ ಕೇಸ್

ಇಂದು ಭಾರತದ ಸಂಸತ್ತು ಆಗಿರುವ, ಅಂದಿನ ದೆಹಲಿ ಕೇಂದ್ರೀಯ ಅಸೆಂಬ್ಲಿಯಲ್ಲಿ ಏಪ್ರಿಲ್ 8, 1929 ರಂದು ಹಾನಿಕಾರಕವಲ್ಲದ ಬಾಂಬ್ ಎಸೆದಿದ್ದು ದೇಶದ ಮತ್ತು ವಿಶ್ವದ ಗಮನ ಸೆಳೆದಿತ್ತು. ಇದನ್ನು ಉಲ್ಲೇಖಿಸಿ ನಂತರದಲ್ಲಿ, 'ಹಿಂದುಸ್ತಾನ ಸೋಷಿಯಲಿಸ್ಟ್ ರಿಪಬ್ಲಿಕನ್ ಆರ್ಮಿ'(HSRA) ಹೊರಡಿಸಿದ ಕರಪತ್ರ ಹೀಗೆ ಹೇಳಿತ್ತು:

> 'ಕಿವುಡರಿಗೂ ಕೇಳಿಸಬೇಕಾದರೆ ಸದ್ದು ದೊಡ್ಡದಾಗಿರಬೇಕು' ಎಂದು ಇದೇ ರೀತಿಯ ಸಂದರ್ಭದಲ್ಲಿ ಫ್ರಾನ್ಸ್‌ನ ಒಬ್ಬ ಅರಾಜಕತಾವಾದಿ ಹುತಾತ್ಮ ವೈಲಾಂಟ್ ಉದ್ಗರಿಸಿದ ಈ ಅಮರ ಪದಗಳೊಂದಿಗೆ ನಾವು ಇಂದಿನ ನಮ್ಮ ಈ ಕೃತ್ಯವನ್ನು ಸಮರ್ಥಿಸಿಕೊಳ್ಳುತ್ತಿದ್ದೇವೆ.

ಈ ಬಾಂಬ್ ಪ್ರಕರಣ ಭಗತ್ ಸಿಂಗ್ ಪ್ರತಿನಿಧಿಸುವ 'ಹಿಂಸಾ ಪಂಥ'ದ ಅಭಿವ್ಯಕ್ತಿ ಎನ್ನುವ ಆಪಾದನೆಗೆ ಉತ್ತರವಾಗಿ ದೆಹಲಿಯ ಸೆಷನ್ಸ್ ಕೋರ್ಟ್‌ನಲ್ಲಿ ಬಿ.ಕೆ. ದತ್‌ರೊಡನೆ ನೀಡಿದ ಹೇಳಿಕೆ ಹೀಗಿದೆ. (ವಕೀಲರು ಮತ್ತು ಧೀಮಂತ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಅಸಿಫ್ ಅಲಿ ಇದನ್ನು ಕೋರ್ಟಿನಲ್ಲಿ ಓದಿದ್ದರು.)

> "ಅಸೆಂಬ್ಲಿಯಲ್ಲಿ ಸಣ್ಣ ಗಾಯಗಳಾದ ಜನರ ಮೇಲಾಗಲೀ ಅಥವಾ ಅಲ್ಲಿದ್ದ ಯಾರ ಮೇಲಾದರೂ ಆಗಲಿ ನಮಗೆ ಯಾವುದೇ ರೀತಿಯ ವ್ಯಕ್ತಿಗತ ದ್ವೇಷ ಅಥವಾ ಹಗೆತನವಾಗಲಿ ಇಲ್ಲ. ಬದಲಾಗಿ ನಾವು ಮಾನವ ಜೀವವನ್ನು ಪದಗಳಿಗೂ ಮೀರಿದ ಪೂಜ್ಯತೆಯಿಂದ ಕಾಣುತ್ತೇವೆ ಮತ್ತು ಮಾನವತೆಯ ಸೇವೆಯಲ್ಲಿ ನಮ್ಮ ಪ್ರಾಣ ತ್ಯಾಗ ಸದ್ಯದಲ್ಲಿಯೇ ಮಾಡುತ್ತೇವೆಯೇ ವಿನಃ ಬೇರಾರನ್ನೂ ನೋಯಿಸುವುದಿಲ್ಲ ಎಂದು ಮತ್ತೊಮ್ಮೆ ಹೇಳುತ್ತೇವೆ. ಯಾವುದೇ ವಿಷಾದವಿಲ್ಲದೆ ಸಾಯಿಸುವ ಶಿಸ್ತು ಕಲಿಸಲ್ಪಟ್ಟ ಕೂಲಿಗೆ ದುಡಿಯುವ ಸೈನಕರ ರೀತಿಗೆ ವಿರುದ್ಧವಾಗಿ ನಾವು ಮಾನವ ಜೀವವನ್ನು ಗೌರವಿಸುತ್ತೇವೆ ಮತ್ತು ನಮ್ಮ ಶಕ್ತಿ ಇರುವವರೆಗೆ ನಾವು ಮಾನವ ಜೀವವನ್ನು ಉಳಿಸಲು ಪ್ರಯತ್ನಿಸುತ್ತೇವೆ. ಇಷ್ಟಾದರೂ ಅಸೆಂಬ್ಲಿ ಕೊಠಡಿಯ ಒಳಗೆ ಬೇಕೆಂದೇ ಬಾಂಬನ್ನು ಎಸೆದವು ಎಂದು ಒಪ್ಪಿಕೊಳ್ಳುತ್ತೇವೆ. ಆದರೆ ವಾಸ್ತವಾಂಶಗಳು. ಅವೇ ಮಾತನಾಡುತ್ತವೆ ಮತ್ತು ಈ ಕೃತ್ಯದ ಫಲಿತಾಂಶದ ಮೇಲೆ ನಮ್ಮ ಉದ್ದೇಶವನ್ನು ನಿರ್ಣಯಿಸಲಾಗುತ್ತದೆ."



ಕ್ರಾಂತಿ:
ಇಂಕ್‌ಲಾಬ್ ಜಿಂದಾಬಾದ್

ಭಗತ್ ಸಿಂಗ್ ಮತ್ತು ಹಿಂದುಸ್ತಾನ ಸೋಷಿಯಲಿಸ್ಟ್ ರಿಪಬ್ಲಿಕನ್ ಆರ್ಮಿಗೆ ತಮ್ಮ ಗುರಿ ಕೇವಲ ಬ್ರಿಟಿಷ್ ಆಳ್ವಿಕೆಯಿಂದ ರಾಜಕೀಯ ಸ್ವಾತಂತ್ರ್ಯ ಮಾತ್ರವಲ್ಲ, ಈ ಸ್ವಾತಂತ್ರ್ಯ ಜನರ ಆರ್ಥಿಕ, ಸಾಮಾಜಿಕ ಮತ್ತಿತರ ಆಯಾಮಗಳಿಗೂ ಎಲ್ಲಾ ಹರಡಿ ಅದು 'ಸಂಪೂರ್ಣ ಸ್ವಾತಂತ್ರ್ಯ' ವಾಗಬೇಕು ಎನ್ನುವ ಸ್ಪಷ್ಟತೆ ಇತ್ತು. ಇನ್ನೊಂದು ಬೇರೆ ಸಂದರ್ಭದಲ್ಲಿ ಭಗತ್ ಸಿಂಗ್ ಹೀಗೆಂದಿದ್ದರು:


> "ನಮ್ಮ ಸ್ವಾತಂತ್ರ್ಯವೆಂದರೆ ಕೇವಲ ಬ್ರಿಟಿಷರ್ ಹಿಡಿತದಿಂದ ತಪ್ಪಿಸಿಕೊಳ್ಳುವುದು ಎಂದರ್ಥವಲ್ಲ; ಸ್ವಾತಂತ್ರ್ಯ ಎಂದರೆ ಸಂಪೂರ್ಣ ಸ್ವಾತಂತ್ರ್ಯ ಎಂದರೆ ಸಂಪೂರ್ಣ ಸ್ವಾತಂತ್ರ್ಯ – ಯಾವಾಗ ಜನರು ಒಬ್ಬರಿಗೊಬ್ಬರು ಮುಕ್ತವಾಗಿ ಜೊತೆಯಾಗಿರುತ್ತಾರೋ ಮತ್ತು ಮಾನಸಿಕ ಗುಲಾಮಗಿರಿಯಿಂದಲೂ ಸ್ವಾತಂತ್ರ್ಯ ಎಂದರ್ಥ".

ಕೋರ್ಟ್‌ನ ವಿಚಾರಣೆಗೆ ಹೋಗುವಾಗ ಪ್ರತಿ ದಿನವೂ ಭಗತ್ ಸಿಂಗ್ ಮತ್ತು ಬಿ.ಕೆ. ದತ್ ಅವರುಗಳು 'ಇಂಕ್‌ಲಾಬ್ ಜಿಂದಾಬಾದ್'(ಕ್ರಾಂತಿ ಚಿರಾಯುವಾಗಲಿ) ಎಂದು ಘೋಷಣೆ ಕೊಡುತ್ತ ಪ್ರವೇಶಿಸುತ್ತಿದ್ದರು. ಬ್ರಿಟಿಷ್ ಮ್ಯಾಜಿಸ್ಟ್ರೇಟ್ ರವರು ಈ ಘೋಷಣೆಯ ಅರ್ಥವೇನು, ಕ್ರಾಂತಿ ಎಂದರೇನು ಎಂದು ಕೇಳಿದಾಗ, ಲಿಖಿತ ರೂಪದಲ್ಲಿ ಇವರುಗಳು ಹೀಗೆ ಹೇಳಿದ್ದರು:

> "ಕ್ರಾಂತಿಯು ರಕ್ತಪಾತಪೂರ್ಣ ಕಲಹವನ್ನು ಹೊಂದಿರಬೇಕು ಎಂದೇನೂ ಇಲ, ಅದರಲ್ಲಿ ವೈಯಕ್ತಿಕ ದ್ವೇಷಾಸೂಯೆಗಳಿಗೆ ಜಾಗವಿಲ್ಲ. ಇದು ಬಾಂಬ್ ಮತ್ತು ಪಿಸ್ತೂಲಿನ ಪಂಥವಲ್ಲ. 'ಕ್ರಾಂತಿ' ಎಂದರೆ ಎದ್ದು ಕಾಣುವ ಅನ್ಯಾಯವನ್ನು ಒಳಗೊಂಡಿರುವ ಈ ಪ್ರಸಕ್ತ ವ್ಯವಸ್ಥೆ ಬದಲಾಗಬೇಕು ಎಂದು ನಮ್ಮ ಅರ್ಥ. ಉತ್ಪಾದಕರು ಅಥವಾ ಶ್ರಮಿಕರು ಸಮಾಜದ ಅತ್ಯಂತ ಅಗತ್ಯ ಭಾಗವಾಗಿದ್ದರೂ ಸಹ ತಮ್ಮ ಶೋಷಕರಿಂದ ತಮ್ಮ ದುಡಿಮೆಯ ಫಲದಿಂದ ವಂಚಿತರಾಗುತ್ತಿದ್ದಾರ್ದೆ ಮತ್ತು ಮೂಲಭೂತ ಹಕ್ಕುಗಳಿಂದ ವಂಚಿತರಾಗುತ್ತಿದ್ದಾರೆ. ಎಲ್ಲರಿಗೂ ಧಾನ್ಯ ಬೆಳೆಯುವ ರೈತ ತನ್ನ ಕುಟುಂಬದೊಂದಿಗೆ ಹಸಿದಿರುತ್ತಾನೆ, ಜಾಗತಿಕ ಮಾರುಕಟ್ಟೆಗೆ ಜವಳಿ ಬಟ್ಟೆಗಳನ್ನು ಒದಗಿಸುವ ನೇಕಾರನಿಗೆ ತನ್ನ ಮತ್ತು ತನ್ನ ಮಕ್ಕಳ ಮೈಯ್ಯನ್ನು ಪೂರ್ಣವಾಗಿ ಮುಚ್ಚಿಕೊಳ್ಳಲು ಆಗುತ್ತಿಲ್ಲ, ಅದ್ಭುತ ಅರಮನೆಗಳನ್ನು ನಿರ್ಮಿಸುವ ಮೇಸ್ತ್ರಿಗಳು, ಮರಗೆಲಸಗಾರರು, ಕುಶಲಕರ್ಮಿಗಳು ಕೊಳೆಗೇರಿಗಳಲ್ಲಿ ಬಹಿಷ್ಕೃತರ ರೀತಿಯಲ್ಲಿ ಜೀವಿಸುತ್ತಿದ್ದಾರೆ. ಸಮಾಜದ ಪರಾವಲಂಬಿಗಳಾಗಿರುವ ಬಂಡವಾಳಿಗರು ಮತ್ತು ಶೋಷಕರು ತಮ್ಮ ಮನಸ್ಸಿಗೆ ಬಂದ ಹಾಗೆ ಕೋಟಿಗಟ್ಟಲೆ ಹಣ ವ್ಯಯ ಮಾಡುತ್ತಿದ್ದಾರೆ. ಈ ಅಗಾಧ ಅಸಮಾನತೆಗಳು ಮತ್ತು ಅವಕಾಶದಲ್ಲಿನ ಬಲವಂತದ ತಾರತಮ್ಯಗಳು ಒಂದು ಅವ್ಯವಸ್ಥೆಗೆ ಖಂಡಿತವಾಗಿಯೂ ಎಡೆ ಮಾಡುತ್ತವೆ. ಈ ವಿಧದ ಪರಿಸ್ಥಿತಿ ಬಹುಕಾಲ ಇರಲು ಸಾಧ್ಯವಿಲ್ಲ ಮತ್ತು ಲೋಲುಪತೆಯಲ್ಲಿರುವ ಪ್ರಸಕ್ತ ಸಮಾಜ ಒಂದು ಜ್ವಾಲಾಮುಖಿಯ ಮೇಲೆ ಕೂತಿದೆ ಎಂಬುದು ವೇದ್ಯವಾಗುತ್ತಿದೆ.
> ಈ ನಾಗರಿಕತೆಯ ಸಮಸ್ತ ಸೌಧವನ್ನು ಸಮಯದೊಳಗೆ ಕಾಪಾಡದಿದ್ದಲ್ಲಿ, ಈ ಸೌಧ ಕುಸಿದು ಬೀಳುತ್ತದೆ. ಹೀಗಾಗಿ ಕ್ಷಿಪ್ರ ಬದಲಾವಣೆ ಅಗತ್ಯ ಮತ್ತು ಸಮಾಜವನ್ನು ಸಮಾಜವಾದಿ ಆಧಾರದಲ್ಲಿ ಮರುಸಂರಚನೆ ಮಾಡುವುದು ಇದನ್ನು ಅರಿತವರ ಕರ್ತವ್ಯವಾಗುತ್ತದೆ. ಇದಾಗದಿದ್ದರೆ ಮತ್ತು ಮಾನವನಿಂದ ಮಾನವನ ಶೋಷಣೆ ಮತ್ತು ದೇಶಗಳಿಂದ ದೇಶಗಳ ಶೋಷಣೆಯನ್ನು ಕೊನೆಗೊಳಿಸದಿದ್ದರೆ,

ಮಾನವತೆ ಎದುರಿಸುತ್ತಿರುವ ಸಂಕಷ್ಟ ಮತ್ತು

ಪುಟ 10 ನೋಡಿ





ಭಗತ್ ಸಿಂಗ್: ಕಾಲದಲ್ಲಿ ದೂರ ಸಂಕಲ್ಪದಲ್ಲಿ ಹತ್ತಿರ

ಪುಟ 9 ರಿಂದ

ಮಾರಣ ಹೋಮದ ಅಪಾಯಗಳನ್ನು ತಡೆಯಲು ಸಾಧ್ಯವಿಲ್ಲ. ಯುದ್ಧ ನಿಲ್ಲಿಸುವುದು ಮತ್ತು ವಿಶ್ವಶಾಂತಿಯ ಯುಗದ ಸ್ಥಾಪನೆ ಎಲ್ಲವೂ ಬರೀ ಆಷಾಢಭೂತಿತನ.

'ಕ್ರಾಂತಿ' ಎಂದರೆ ನಮ್ಮ ಅರ್ಥದಲ್ಲಿ ಅಂತಿಮವಾಗಿ ಇಂತಹ ಭಂಗಗಳಿಂದ ಬೆದರಿಕೆಗೊಳಗಾಗದ, ಶ್ರಮಜೀವಿಗಳ ಸಾರ್ವಭೌಮತೆಯನ್ನು ಮಾನ್ಯ ಮಾಡುವ ಮತ್ತು ಒಂದು ವಿಶ್ವ ಒಕ್ಕೂಟ ಮಾನವತೆಯನ್ನು ಬಂಡವಾಳಶಾಹಿಯ ಗುಲಾಮಗಿರಿಯಿಂದ ಮತ್ತು ಸಾಮ್ರಾಜ್ಯಶಾಹಿ ಯುದ್ಧಗಳ ಸಂಕಷ್ಟಗಳಿಂದ ಮುಕ್ತಗೊಳಿಸುವ ಒಂದು ಸಮಾಜ ವ್ಯವಸ್ಥೆಯನ್ನು ಸ್ಥಾಪಿಸುವುದು.

"ಇದು ನಮ್ಮ ಆದರ್ಶ, ಮತ್ತು ಈ ತತ್ವವನ್ನು ನಮ್ಮ ಸ್ಫೂರ್ತಿಯಾಗಿ ತೆಗೆದುಕೊಂಡು ನಾವು ಒಂದು ನ್ಯಾಯಯುತ ಮತ್ತು ಗಟ್ಟಿಯಾದ ಎಚ್ಚರಿಕೆ ನೀಡಿದ್ದೇವೆ.

"ಆದರೆ, ಒಂದು ವೇಳೆ ಇದಕ್ಕೆ ಲಕ್ಷ್ಯಗೊಡದಿದ್ದರೆ ಮತ್ತು ಸರ್ಕಾರದ ಪ್ರಸಕ್ತ ವ್ಯವಸ್ಥೆ ಉಕ್ಕೇರಿ ಬರುತ್ತಿರುವ ಸ್ವಾಭಾವಿಕ ಶಕ್ತಿಗಳಿಗೆ ತೊಡಕಾಗಿ ಮುಂದುವರೆದರೆ, ಎಲ್ಲ ಅಡೆತಡೆಗಳನ್ನು ಕಿತ್ತೆಸೆಯುವ ಮತ್ತು ಕ್ರಾಂತಿಯ ಆದರ್ಶವನ್ನು ಸಾಕಾರಗೊಳಿಸಲು ಶ್ರಮಜೀವಿಗಳ ದುಡಿಯುವ ವರ್ಗದ ಸರ್ವಾಧಿಕಾರವನ್ನು ಸ್ಥಾಪಿಸುವುದನ್ನು ಖಾತ್ರಿಗೊಳಿಸುವ ಒಂದು ಉಗ್ರ ಹೋರಾಟ ನಡೆಯುತ್ತದೆ. ಕ್ರಾಂತಿಯು ಮಾನವಕುಲದ ಅವಿಭಾಜ್ಯ ಹಕ್ಕು. ಸ್ವಾತಂತ್ರ್ಯವು ಎಲ್ಲರ ಒಂದು ಅವಿನಾಶಿ ಜನ್ಮಸಿದ್ಧ ಹಕ್ಕು. ಶ್ರಮಿಕರು ಸಮಾಜದ ನೈಜ ಪೋಷಕರು ಮತ್ತು ಕಾರ್ಮಿಕರ ಈ ಅಂತಿಮ ನಿಯತಿಯ ಸಾರ್ವಭೌಮತೆ."

ಸಂಸ್ಥೆಯ ವಿರುದ್ಧ, ವ್ಯಕ್ತಿಯ ವಿರುದ್ಧವಲ್ಲ

ಇಂದು ಬಿಜೆಪಿ ಕೇಂದ್ರ ಸರ್ಕಾರವು ಭಾರತದ ಸಂಸತ್ತನ್ನು ಹಿಂದೆಂದೂ ಕಂಡರಿಯದ ರೀತಿಯಲ್ಲಿ ಸವೆಸುತ್ತಿರುವುದನ್ನು ಭಾರತವು ಎದುರಿಸುತ್ತಿರುವ ಸಂದರ್ಭದಲ್ಲಿ ಹೇಗೆ ಆ ಸಂಸ್ಥೆಯು ಜನರ ಆಶೋತ್ತರಗಳನ್ನು ಪ್ರತಿನಿಧಿಸದೆ ಆಳುವ ವರ್ಗಗಳಿಂದ ಅದೇ ಜನರ ವಿರುದ್ಧವಾಗುತ್ತದೆ ಎಂದು ಭಗತ್‌ಸಿಂಗ್ ಎಚ್ಚರಿಸಿದ್ದು ಗಟ್ಟಿಯಾಗಿ ಮತ್ತು ಸ್ಪಷ್ಟವಾಗಿ ಅನುರಣನಗೊಳ್ಳುತ್ತಿದೆ:

"ಸದನ ಅಂಗೀಕರಿಸಿದ ಗಂಭೀರ ಸ್ವರೂಪದ ನಿರ್ಣಯಗಳನ್ನು ಕಡೆಗಣಿಸಿ ಪಾದದ ಕೆಳಗೆ ಹೊಸಕಿ ಹಾಕಲಾಗುತ್ತಿದೆ..." "ಶಾಸಕಾಂಗದ ಚುನಾಯಿತ ಸದಸ್ಯರುಗಳು ಒಪ್ಪಲಾಗದು ಎಂದು ತಿರಸ್ಕರಿಸಿದ ಸರ್ಕಾರದ ಕ್ರಮಗಳು ಮತ್ತು ಪ್ರಸ್ತಾಪಗಳನ್ನು ಕೇವಲ ಒಂದು ಲೇಖನಿಯ ಬಳಕೆಯಿಂದ ಮರುಚಾಲ್ತಿ ಮಾಡಲಾಗುತ್ತಿದೆ".

ಈ ಮಾತುಗಳು, ನಾವು ಸಂವಿಧಾನದ ಕೇಂದ್ರ ಮಹತ್ವವನ್ನು ಎತ್ತಿ ಹಿಡಿಯುವ ಹೋರಾಟದ ನಡುವೆ ಇರುವಾಗ, 'ಜನತೆಯ ಸಾರ್ವಭೌಮತೆಯನ್ನು ಪ್ರತಿಫಲಿಸುವ 'ನಾವು, ಜನತೆ...' ಎಂಬುದನ್ನು ಪ್ರಭುತ್ವದ ಒಂದು ಪ್ರಮುಖ ಅಂಗವಾದ ಸಂಸತ್ತಿನಲ್ಲಿ ಹೊಸಕಿ ಹಾಕುತ್ತಿರುವಾಗ, ವೈನಡುಗಿಸುವ ಜ್ಞಾಪನೆಗಳು.

ಕೋಮುವಾದ ಮತ್ತು ಜಾತ್ಯತೀತತೆ

1919 ರಲ್ಲಿ ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡದ ನಂತರ, ಬ್ರಿಟಿಷರು ತಮ್ಮ ಒಡೆದು ಆಳುವ ಅಸ್ತ್ರವನ್ನು ಮತ್ತಷ್ಟು ತೀಕ್ಷ್ಣಗೊಳಿಸಿದರು. ನಿರ್ದಯವಾಗಿ ಗುಂಡಿಕ್ಕಿ ಕೊಲ್ಲಲ್ಪಟ್ಟ ಜನಗಳಲ್ಲಿ ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಜಂಟಿಯಾಗಿ ಭಾಗವಹಿಸುತ್ತಿದ್ದ ಸಿಖ್ಖರು, ಮುಸ್ಲಿಮರು ಮತ್ತು ಹಿಂದೂಗಳು ಸೇರಿದ್ದರು. ತರುವಾಯ, ದೇಶಾದ್ಯಂತ ಕೋಮುಗಲಭೆಗಳು ಭುಗಿಲೆದ್ದವು. 1924 ರಲ್ಲಿ, ಪಂಜಾಬ್‌ನ ಕೊಹತ್‌ನಲ್ಲಿ ಇಂತಹ ಒಂದು ಭೀಕರ ಗಲಭೆಯ ನಂತರ ಸ್ವಾತಂತ್ರ್ಯ ಚಳವಳಿಯಲ್ಲಿ ಕೋಮುಗಲಭೆಗಳ ಕುರಿತು ಒಂದು ರಾಷ್ಟ್ರೀಯ ಚರ್ಚೆ ಹೊರ ಹೊಮ್ಮಿತು. ಸಾರ್ವತ್ರಿಕವಾಗಿ, ಸ್ವಾತಂತ್ರ್ಯ ಚಳವಳಿಯು ಅಂತಹ ಕಲಹಗಳಿಗೆ ಅಂತ್ಯ ಹಾಡುವ ಅಗತ್ಯವನ್ನು ಗುರುತಿಸಿತು ಮತ್ತು ಅಂದಿನ ಕಾಂಗ್ರೆಸ್ ನಾಯಕತ್ವವು ಹಿಂದೂ ಮತ್ತು ಮುಸ್ಲಿಂ ನಾಯಕರು ಶಾಂತಿ ಒಪ್ಪಂದಕ್ಕೆ ಸಹಿ ಹಾಕುವ ಪ್ರಯತ್ನವನ್ನ ಮಾಡಿತು. ಇದನ್ನು ಭಗತ್‌ಸಿಂಗ್ ಬೆಂಬಲಿಸಿದರು.

"ಭಾರತವರ್ಷ/ಇಂಡಿಯಾದ ಸ್ಥಿತಿ ಇಂದು ನಿಜಕ್ಕೂ ಕರುಣಾಜನಕವಾಗಿದೆ. ಒಂದು ಧರ್ಮದ ಪೂಜಕರು ಮತ್ತೊಂದು ಧರ್ಮದ ಪೂಜಕರ ಪರಮ ಶತ್ರುಗಳಾಗಿದ್ದಾರೆ. ಕೇವಲ ಒಂದು ಧರ್ಮಕ್ಕೆ ಸೇರಿರುವುದು ಈಗ ಮತ್ತೊಂದು ಧರ್ಮದ ಶತ್ರುಗಳಾಗಲು ಸಾಕಷ್ಟು ಕಾರಣವೆಂದು ಪರಿಗಣಿಸಲಾಗಿದೆ. ಇದನ್ನು ನಂಬಲು ನಮಗೆ ಕಷ್ಟವಾಗಿದೆ. ಲಾಹೋರ್‌ನಲ್ಲಿ ಹೊಸದಾಗಿ ನಡೆಯುತ್ತಿರುವ ಹಿಂಸಾಚಾರವನ್ನು ನೋಡೋಣ...... ಈ ಪರಿಸ್ಥಿತಿಗಳಲ್ಲಿ ಹಿಂದೂಸ್ತಾನದ ಭವಿಷ್ಯವು ತುಂಬ ಮಂಕಾಗಿ ಕಾಣುತ್ತದೆ........ ಮತ್ತು ಈ ಧಾರ್ಮಿಕ ಗಲಭೆಗಳು ಹಿಂದೂಸ್ತಾನವನ್ನು ಎಷ್ಟು ಕಾಲ ಪೀಡಿಸುತ್ತವೆ ಎಂದು ಯಾರಿಗೂ ತಿಳಿದಿಲ್ಲ."

ಇದಕ್ಕೆ ಪ್ರತ್ಯೌಷಧ ಏನು? ಧರ್ಮವನ್ನು ರಾಜಕೀಯದಿಂದ ಬೇರ್ಪಡಿಸುವುದೇ ಇದಕ್ಕೆ ಉತ್ತರ ಎಂದು ಭಗತ್‌ಸಿಂಗ್‌ಗೆ ಸ್ಪಷ್ಟವಾಗಿತ್ತು.

"1914–15 ರಲ್ಲಿ ಹುತಾತ್ಮರು ಧರ್ಮವನ್ನು ರಾಜಕೀಯದಿಂದ ಬೇರ್ಪಡಿಸಿದರು. ಧರ್ಮವು ವ್ಯಕ್ತಿಯ ವೈಯಕ್ತಿಕ ವಿಷಯ ಎಂದು ಅವರು ನಂಬಿದ್ದರು ಮತ್ತು ಬೇರೆ ಯಾರು ಇದರಲ್ಲಿ ಹಸ್ತಕ್ಷೇಪ ಮಾಡಬಾರದು. ಧರ್ಮವು ಕೂಡ ಅದು ಎಲ್ಲರನ್ನೂ ಒಂದುಗೂಡಿಸುವುದಿಲ್ಲವಾದ್ದರಿಂದ ಅಥವ ಒಟ್ಟಿಗೆ ಕೆಲಸ ಮಾಡುವಂತೆ ಮಾಡುವುದಿಲ್ಲವಾದ್ದರಿಂದ ತನ್ನನ್ನು ರಾಜಕೀಯಕ್ಕೆ ತಳ್ಳಲು ಬಿಡಬಾರದು. ಆದ್ದರಿಂದಲೇ ಘದರ್ ಪಾರ್ಟಿಯಂತಹ ಚಳವಳಿಗಳು ಪ್ರಬಲವಾಗಿದ್ದವು, ಅವು ಒಂದೇ ಆತ್ಮವನ್ನು ಹೊಂದಿದ್ದವು. ಅದರಲ್ಲಿ ಸಿಖ್ಖರು ಗಲಿಗೇರುವುದರಲ್ಲಿ ಮುಂಚೂಣಿಯಲ್ಲಿದ್ದರೆ, ಹಿಂದೂಗಳು ಮತ್ತು ಮುಸ್ಲಿಮರು ಸಹ ಹಿಂದುಳಿದಿರಲಿಲ್ಲ.

"ಪ್ರಸ್ತುತ, ಕೆಲವು ಭಾರತೀಯ ನಾಯಕರು ಕೂಡ ಧರ್ಮವನ್ನು ರಾಜಕೀಯದಿಂದ ಬೇರ್ಪಡಿಸಲು ಬಯಸುತ್ತಾರೆ. ಜಗಳಗಳನ್ನು ತೊಡೆದುಹಾಕಲು ಇದು ಸುಂದರವಾದ ಪರಿಹಾರವಾಗಿದೆ, ನಾವು ಅದನ್ನು ಬೆಂಬಲಿಸುತ್ತೇವೆ.

"ಧರ್ಮವು ರಾಜಕೀಯದಿಂದ ಬೇರ್ಪಟ್ಟರೆ, ನಾವೆಲ್ಲರೂ ಬೇರೆ ಬೇರೆ ಧರ್ಮಗಳಿಗೆ ಸೇರಿದವರಾದರೂ ರಾಜಕೀಯದಲ್ಲಿ ಒಟ್ಟಿಗೆ ಸೇರಬಹುದು".

ಆದಾಗ್ಯೂ, ಭಗತ್‌ಸಿಂಗ್ ಕೋಮುವಾದವನ್ನು ತೊಡೆದು ಹಾಕಲು ಅಂತಿಮ ಉತ್ತರವಾಗಿ ವರ್ಗ ಪ್ರಜ್ಞೆಯ ಮಹತ್ವವನ್ನು ಒತ್ತಿ ಹೇಳಿದರು. ಅವರು ಹೀಗೆ ಬರೆದಿದ್ದಾರೆ.

"ಇಂತಹ ಗಲಭೆಗಳ ಬಗ್ಗೆ ಹೃದಯ ಕಲಕುವ ಅಂಶಗಳನ್ನು ಕೇಳಿದರೂ, ಕಲ್ಕತ್ತಾ ಗಲಭೆಗಳ ಬಗ್ಗೆ ಸಕಾರಾತ್ಮಕವಾದುದು ಕೇಳಬಂದಿದೆ. ಕಾರ್ಮಿಕ ಸಂಘಗಳ ಕಾರ್ಮಿಕರು ಗಲಭೆಗಳಲ್ಲಿ ಭಾಗವಹಿಸಲಿಲ್ಲ, ಪರಸ್ಪರ ಹೊಡೆದಾಡಲಿಲ್ಲ; ಮತ್ತೊಂದೆಡೆ; ಎಲ್ಲಾ ಹಿಂದೂಗಳು ಮತ್ತು ಮುಸ್ಲಿಮರು ಗಿರಣಿಗಳಲ್ಲಿ ಪರಸ್ಪರ ಸಾಮಾನ್ಯವಾಗಿ ವರ್ತಿಸುತ್ತಿದ್ದರು, ಅವರು ಗಲಭೆಗಳನ್ನು ತಡೆಯಲು ಸಹ ಪ್ರಯತ್ನಿಸಿದರು. ಏಕೆಂದರೆ ಅವರುಗಳಲ್ಲಿ ವರ್ಗಪ್ರಜ್ಞೆ ಇತ್ತು ಮತ್ತು ಅವರ ವರ್ಗಕ್ಕೆ ಏನು ಪ್ರಯೋಜನವಾಗಲಿದೆ ಎಂಬುದನ್ನು ಅವರು ಸಂಪೂರ್ಣವಾಗಿ ಗುರುತಿಸಿದ್ದಾರೆ. ಇದು ಕೋಮು ಗಲಭೆಯನ್ನು ತಡೆಯಬಲ್ಲ ವರ್ಗ ಪ್ರಜ್ಞೆಯ ಸುಂದರ ಮಾರ್ಗವಾಗಿದೆ".

ಮಾಧ್ಯಮ

ಕೋಮು ಗಲಭೆಗಳ ರಚನೆಯನ್ನು ವಿಶ್ಲೇಷಿಸುತ್ತ ಭಗತ್‌ಸಿಂಗ್ ಹೀಗೆ ಹೇಳಿದ್ದಾರೆ:

"ನಾವು ನೋಡಿದ ಹಾಗೆ ಕೋಮು ಮುಂದಾಳುಗಳು ಮತ್ತು ವೃತ್ತ ಪತ್ರಿಕೆಗಳು ಗಲಭೆಯ ಹಿಂದಿದ್ದಾರೆ." ಅಲ್ಲದೆ ಕೆಲವು ವೃತ್ತ ಪತ್ರಿಕೆಗಳು "ಕೋಮು ಗಲಭೆಗಳ ಕಿಡಿ ಹೊತ್ತಿಸುವಲ್ಲಿ ವಿಶೇಷ ಪಾತ್ರ ವಹಿಸಿದವು" ಎಂದು ಅವರು ಹೇಳಿದ್ದರು.

"ಒಂದು ಅತ್ಯುನ್ನತ ವರ್ಚಸ್ಸನ್ನು ಒಂದು ಕಾಲಘಟ್ಟದಲ್ಲಿ ಹೊಂದಿದ್ದ ಪತ್ರಿಕೋದ್ಯಮ ವೃತ್ತಿಯು ಈಗ ಬಹಳ ಕೊಳಕಾಗಿದೆ. ಈ ವ್ಯಕ್ತಿಗಳು ಪ್ರಚೋದನಕಾರಿ ಸುದ್ದಿಗಳನ್ನು ಪ್ರಮುಖವಾಗಿ ಪ್ರಕಟಿಸಿ ಜನರಲ್ಲಿ ಒಬ್ಬರ ವಿರುದ್ಧ ಇನ್ನೊಬ್ಬರ ಭಾವನೆಗಳನ್ನು ಕೆರಳಿಸುತ್ತಾರೆ ಮತ್ತು ಇದು ಗಲಭೆಗೆ ಈಡು ಮಾಡುತ್ತದೆ. ಒಂದೆರಡು ಸ್ಥಳಗಳಲ್ಲಿ, ಹಲವು ಜಾಗಗಳಲ್ಲಿ ಸ್ಥಳೀಯ ಪತ್ರಿಕೆಗಳು ಅವಹೇಳನಕಾರಿ ಲೇಖನಗಳನ್ನು ಬರೆದಿರುವುದರಿಂದ ಗಲಭೆಗಳು ನಡೆದಿವೆ. ಕೆಲವೇ ವರದಿಗಾರರು ಮಾತ್ರ ತಮ್ಮ ವಿವೇಚನೆಯನ್ನು ಕಾಯ್ದುಕೊಂಡಿದ್ದರು, ಇಂತಹ ದಿನಗಳಲ್ಲಿ ಶಾಂತಚಿತ್ತವನ್ನು ಕಾಯ್ದುಕೊಂಡಿದ್ದರು.

"ವೃತ ಪತ್ರಿಕೆಗಳ ನಿಜವಾದ ಕರ್ತವ್ಯವು ಶಿಕ್ಷಣ ನೀಡುವುದು, ಜನರಲ್ಲಿನ ಸಂಕುಚಿತ ಭಾವನೆಗಳನ್ನು ತೆಗೆದು ಹಾಕುವುದು, ಕೋಮು ಭಾವನೆಗಳನ್ನು ಕೊನೆಗೊಳಿಸುವುದು, ಪರಸ್ಪರ ಹೊಂದಾಣಿಕೆಯನ್ನು ಉತ್ತೇಜಿಸುವುದು ಮತ್ತು ಒಂದು ಸಮಾನ ಭಾರತೀಯ ರಾಷ್ಟ್ರೀಯತೆಯನ್ನು ಸ್ಥಾಪಿಸುವುದು ಆಗಿತ್ತು. ಆದರೆ ಅವು ತಮ್ಮ ಪ್ರಮುಖ ವ್ಯವಹಾರವನ್ನು ಮೌಢ್ಯ ಹರಡಿಸಲು, ಸಂಕುಚಿತತೆಯನ್ನು ಭೋಧಿಸಲು, ಪೂರ್ವಾಗ್ರಹಗಳನ್ನು ಉಂಟು ಮಾಡಲು, ಗಲಭೆಗಳನ್ನು ಪ್ರೋತ್ಸಾಹಿಸಲು ಮತ್ತು ಭಾರತದ ಸಮಾನ ರಾಷ್ಟ್ರೀಯತೆಯನ್ನು ನಾಶಗೊಳಿಸುವತ್ತ ತಿರುಗಿಸಿದವು. ಹೀಗಾಗಿಯೇ ಭಾರತದ ಇಂದಿನ ಸ್ಥಿತಿಯನ್ನು ನೋಡಿದಾಗ ನಮ್ಮ ಕಣ್ಣಿನಿಂದ ರಕ್ತ ಸುರಿಯುತ್ತಿರುವುದು ಮತ್ತು ನಮ್ಮ ಮನಸ್ಸಿನಲ್ಲಿ 'ಹಿಂದೂಸ್ತಾನ ಏನಾಗಬಹುದು?' ಎಂಬ ಪ್ರಶ್ನೆ ಏಳುತ್ತಿರುವುದು."

ಸಮಕಾಲೀನ ಸಂದರ್ಭದಲ್ಲಿಯೂ ಕಾರ್ಪೋರೇಟ್ ಮಾಧ್ಯಮಗಳ ಪಾತ್ರದಲ್ಲಿ ಭಗತ್‌ಸಿಂಗ್‌ರ ಈ ಮಾತುಗಳು ವೈನಡುಗಿಸುವ ರೀತಿಯಲ್ಲಿ ಮಾರ್ದನಿಗೊಳ್ಳುತ್ತಿವೆ. ಕೆಲವೇ ಕೆಲವು ಆದರಣೀಯ ಮಾಧ್ಯಮಗಳು ಇದಕ್ಕೆ ಹೊರತಾಗಿವೆ.

ಸಾಮಾಜಿಕ ನ್ಯಾಯ

ಸಾಮಾಜಿಕ ನ್ಯಾಯ ಮತ್ತು ಎಲ್ಲ ಮಾನವ ಜನಾಂಗಕ್ಕೆ ಸಾರ್ವತ್ರಿಕ ಸಮಾನತೆಯ ಪ್ರಾಮುಖ್ಯತೆಯನ್ನು ಭಗತ್ ಸಿಂಗ್ ಒತ್ತಿ ಹೇಳಿದ್ದರು.

"...... ಪ್ರತಿಯೊಬ್ಬರೂ ಸಮಾನರಾಗಿರಬೇಕು ಎಂದು ನಾವು ಬಯಸುತ್ತೇವೆ. ಯಾವುದೇ ರೀತಿಯ ವರ್ಗ ವಿಭಜನೆಯಾಗಲಿ ಹಾಗೆಯೇ ಸ್ಪೃಶ್ಯರು ಮತ್ತು ಅಸ್ಪೃಶ್ಯರು ಎಂಬ ವಿಭಜನೆಯಾಗಲೀ ಇರಬಾರದು. ಆದರೆ ಸನಾತನ ಧರ್ಮವು ಈ ಬೇಧಬಾವದ ಪರವಾಗಿದೆ. ಈ ಇಪ್ಪತ್ತನೇ ಶತಮಾನದಲ್ಲಿಯೂ ಓರ್ವ–ತಳ ಜಾತಿಯ ಹುಡುಗ ಯಾವುದೇ ಪಂಡಿತ ಅಥವಾ ಮೌಲ್ವಿಗೆ ಹಾರ ಹಾಕಿದರೆ ಅವರು ತಾವು ಉಟ್ಟ ಬಟ್ಟೆಯಲ್ಲಿಯೇ ಸ್ನಾನ ಮಾಡುತ್ತಾರೆ ಮತ್ತು ಅಸ್ಪೃಶ್ಯರಿಗೆ ಜನಿವಾರ ಹಾಕಲು ವಿರೋಧಿಸುತ್ತಾರೆ. ಒಂದೇ ನಾವು ಈ ಧರ್ಮದ ವಿರುದ್ಧವಾಗಿ ಏನು ಹೇಳದಿರುವ ಪಣ ತೊಟ್ಟು ಮನೆಯಲ್ಲಿ ಮೌನವಾಗಿ ಕುಳಿತಿರಬೇಕು, ಇಲ್ಲವೇ ನಾವು ಇದನ್ನು ವಿರೋಧಿಸಬೇಕು."

ಭಗತ್‌ಸಿಂಗ್ ತಮ್ಮ ಪ್ರಬಂಧ 'ನಾನೇಕೆ ಒಬ್ಬ ನಾಸ್ತಿಕ' ಬರೆದಾಗ, ಅದು ಅವರ ವೈಚಾರಿಕತೆ, ಭೌತಿಕವಾದೀ ತಿಳುವಳಿಕೆ ಮತ್ತು ಇವರನ್ನು ಪ್ರಭಾವಿಸಿದ್ದ ಮಾರ್ಕ್ಸ್‌ವಾದದ ಜಾಗತಿಕ ಕಣ್ಣೋಟದ ಪ್ರತೀಕವಾಗಿತ್ತು. ಆದರೆ ಮುಖ್ಯವಾಗಿ ಸಂಕುಚಿತ ಧರ್ಮಾಂಧತೆಗಾಗಿ ಧರ್ಮ ಅಥವಾ ಜನರ ಧಾರ್ಮಿಕ ಭಾವನೆಗಳನ್ನು ಶೋಷಿಸುವುದನ್ನು ಭಗತ್‌ಸಿಂಗ್ ಜನರ ಶತ್ರು ಎಂದು ಕಾಣುತ್ತಿದ್ದರು. ಇದು ಎಂತಹ ಮುನ್ನರಿವಿನ ವಿಚಾರ ಎಂಬುದು ಪ್ರಸಕ್ತ ಸಂದರ್ಭದಲ್ಲಿ ಎದ್ದು ಕಾಣಿಸುತ್ತಿದೆ. ಜನರಿಗೆ ಅವರ ಸಂಪೂರ್ಣ ಸ್ವಾತಂತ್ರ್ಯವನ್ನು ನಿರಾಕರಿಸಲು ಧಾರ್ಮಿಕ ಭಾವನೆಗಳನ್ನು ಒಂದು ಬಲವಾದ ಆಯುಧವಾಗಿ ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ.

ಈ ಮಹಾನ್ ಕ್ರಾಂತಿಕಾರಿಗೆ ಮತ್ತೊಮ್ಮೆ ನಮ್ಮ ಶ್ರದ್ಧಾಂಜಲಿಯನ್ನು, ಭಗತ್‌ಸಿಂಗ್ ರವರು ಒಂದು ಉತ್ತಮ ಭಾರತದ ನಿರ್ಮಾಣಕ್ಕಾಗಿ ಮತ್ತು ನಮ್ಮ ಜನರ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ನೀಡಿದ ಕೆಲವು ಅಮೂಲ್ಯ ಕೊಡುಗೆಗಳನ್ನು ಮುಂದೊಯ್ಯುವ ಪ್ರಜ್ಞಾಪೂರ್ವಕ ಪ್ರಯತ್ನದೊಂದಿಗೆ ಅರ್ಪಿಸುತ್ತೇವೆ.

ಬೃಂದಾ ಕಾರಟ್ ಹೆಸರು–ಎಐಡಿಡಬ್ಲ್ಯುಎ ಖಂಡನೆ


ಪುಟ 2 ರಿಂದ

ಇವು ನ್ಯಾಯಾಲಯದಲ್ಲಿ ಸಾಕ್ಷ್ಯವಾಗಿ ನಿಲ್ಲುವುದಿಲ್ಲ ಎಂದು ಗೊತ್ತಿದ್ದರೂ ಕೇಂದ್ರ ಗೃಹಮಂತ್ರಿಗಳ ಆದೇಶದಂತೆ ಇಂತಹ ಕೆಲಸವನ್ನು ದಿಲ್ಲಿ ಪೋಲೀಸ್ ಮುಂದುವರೆಸಿದೆ.

ಸರಕಾರದ ಧೋರಣೆಗಳೊಂದಿಗೆ ಬಿನನಾಭಿಪ್ರಾಯ ಅಪರಾಧವೇನಲ್ಲ, ಅಸಮ್ಮತಿಯ ಹಕ್ಕು ಸಂವಿಧಾನ ದತ್ತವಾಗಿರುವ ಹಕ್ಕು ಈ ರೀತಿ ಕಾನೂನಿನ ದುರುಪಯೋಗ ಮಾಡಿ ಬಿಜೆಪಿ ಸರಕಾರ ಇದನ್ನು ನಿರಾಕರಿಸಲು ಸಾಧ್ಯವಿಲ. ಎಐಡಿಡಬ್ಲ್ಯುಎ. ಕೂಡ ಸರಕಾರದ ಹಲವು ಧೋರಣೆಗಳನ್ನು, ಕಾನೂನುಗಳನ್ನೂ ವಿರೋಧಿಸುತ್ತ ಬಂದಿದೆ. ಸಿಎಎ, ಎನ್‌ಆರ್‌ಸಿಯನ್ನೂ ವಿರೋಧಿಸಿದೆ.

ಸರಕಾರ ಅಸಮ್ಮತಿಯನ್ನು ಅಪರಾಧ ವಾಗಿಸುವುದನ್ನು ನಿಲ್ಲಿಸಬೇಕು, ಈ ಗಲಭೆಗಳಲ್ಲಿ ಸುಳ್ಳು–ಸುಳ್ಳೇ ಸಿಲುಕಿಸಿರುವ ಹೆಸರುಗಳನ್ನೆಲ್ಲ ತೆಗೆಯಬೇಕು. ಅವರನ್ನು ಜೈಲುಗಳಿಂದ ತಕ್ಷಣವೇ ಬಿಡುಗಡೆ ಮಾಡಬೇಕುಎಂದು ಆಗ್ರಹಿಸಿರುವ ಎಐಡಿಡಬ್ಲ್ಯುಎ, ಬಹುಪಾಲು ಮುಸ್ಲಿಮರನ್ನೇ ಗುರಿ ಮಾಡಿರುವ ಈಶಾನ್ಯ ದಿಲ್ಲಿ ಗಲಭೆಗಳ ಬಗ್ಗೆ ಒಂದು ಸ್ವತಂತ್ರ ತನಖೆಯನ್ನು ದಿಲ್ಲಿ ಪೋಲೀಸ್ ಬಿಟ್ಟು ಬೇರೆಯವರಿಂಥ ಒಬ್ಬ ನಿವೃತ್ತ ನ್ಯಾಯಾಧೀಶರ ನೇತರತ್ವದಲ್ಲಿ ನಡೆಸಬೇಕು ಎಂದು ಆಗ್ರಹಿಸಿದೆ.

ಈ ಸುದ್ದಿಗೆ ಪ್ರತಿಕ್ರಿಯಿಸುತ್ತ ಬೃಂದಾ ಕಾರಟ್ ಅವರು "ಸೌಹಾರ್ದತೆ ಒಂದು ಅಪರಾಧವೇ?" ಎಂಬ ಪ್ರಶ್ನೆಯನ್ನು ಎತ್ತಿದರು.



ಶತಮಾನೋತ್ಸವ ಲೇಖನಮಾಲೆ-46

ರೈತಾಪಿ ಜನರ ನಡುವಿನ ಕೆಲಸ ಕಾರ್ಯಗಳು -2

ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ತನ್ನ ಏಪ್ರಿಲ್ 1954 ರ ಸಭೆಯಲ್ಲಿ 'ರೈತಾಪಿ ಜನರ ನಡುವಿನ ಕೆಲಸ ಕಾರ್ಯಗಳು' ಕುರಿತು ಒಂದು ನಿರ್ಣಯ ಅಂಗೀಕರಿಸಿತು. "ಭೂಮಿತಿ, 'ಪುನಃಸ್ವಾಧೀನದ ಹಕ್ಕು', ಗೇಣಿ ಕಡಿಮೆಮಾಡುವುದು, ಕಂದಾಯದ ಹೊರೆಗಳು, ರೈತರ ಉತ್ಪನ್ನಕ್ಕೆ ಆರ್ಥಿಕ ಬೆಲೆ, ಋಣಭಾರ, ಹಿಡುವಳಿಗಳ ಕ್ರೋಡೀಕರಣ ಮತ್ತು ಛಿದ್ರೀಕರಣವನ್ನು ತಡೆಯುವುದು, ಸಹಕಾರ ಸಂಘಗಳು, ಪಂಚಾಯತ್‌ಗಳು, ನೀರಾವರಿ ಸೌಲಭ್ಯಗಳು, ಕೃಷಿ ಕೂಲಿಕಾರರ ಬೇಡಿಕೆಗಳು ಮತ್ತು ರೈತ ಸಂಘಟನೆಗಳನ್ನು ಕಟ್ಟುವುದು ಮತ್ತು ಕ್ರಿಯಾಶೀಲಗೊಳಿಸುವಲ್ಲಿನ ಸಮಸ್ಯೆಗಳು ಮುಂತಾದ ಪ್ರಶ್ನೆಗಳನ್ನು ಅದು ಎತ್ತಿಕೊಂಡಿತ್ತು. ರೈತ ಚಳುವಳಿಯಲ್ಲಿ ಪಕ್ಷದ ಕೆಲಸಗಳಿಗೆ ಮಾರ್ಗದರ್ಶನ ಮಾಡಲು ಈ ಎಲ್ಲ ಪ್ರಶ್ನೆಗಳ ಮೇಲೆ ಮೂರ್ತ ನೀತಿ-ನಿಯಮಗಳನ್ನು ಅದು ಹಾಕಿ ಕೊಟ್ಟಿತು. ಆ ನಿರ್ಣಯದ ಮುಖ್ಯಾಂಶಗಳನ್ನು ಕಳೆದ ಸಂಚಿಕೆಯಲ್ಲಿ ಆರಮಭಿಸಲಗಿತ್ತು. ಇಲ್ಲಿ ಅದನ್ನು ಮುಂದುವರೆಸಲಾಗಿದೆ.

ಕನ್ನಡಕ್ಕೆ: ಟಿ. ಸುರೇಂದ್ರ ರಾವ್

"ವಿದೇಶಿ ಹಾಗೂ ಭಾರತೀಯ ಏಕಸ್ವಾಮ್ಯಗಳ ಒಳಸಂಚುಗಳಿಂದ ರೈತರನ್ನು ಮುಕ್ತಗೊಳಿಸಲು ಮತ್ತು ರೈತರ ಉತ್ಪನ್ನಗಳಿಗೆ ಲಾಭದಾಯಕ ಬೆಲೆಯನ್ನು ಖಾತ್ರಿಗೊಳಿಸುವ ಮೂಲಕ ರೈತ ಉತ್ಪಾದಕರಿಗೆ ರಕ್ಷಣೆ ನೀಡಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂಬ ಬೇಡಿಕೆಯು ಕಿಸಾನ್ ಚಳುವಳಿಯು ಮಾಡಬೇಕಾದ ಕೆಲಸಗಳಲ್ಲಿ ಬಹಳ ಪ್ರಮುಖವಾದದ್ದಾಗಿದೆ.

"ರೈತರ ಉತ್ಪನ್ನಗಳಿಗೆ ಲಾಭದಾಯಕ ಬೆಲೆಯನ್ನು ಖಾತ್ರಿಗೊಳಿಸುವ ಜತೆಯಲ್ಲೇ, ಒಂದೊಮ್ಮೆ ಮಾರುಕಟ್ಟೆ ಬೆಲೆಯು ಕನಿಷ್ಠಕ್ಕಿಂತ ಕೆಳಗೆ ಕುಸಿದರೆ, ಸರ್ಕಾರವು ಮಧ್ಯಪ್ರವೇಶ ಮಾಡಿ ರೈತರಿಂದ ಆ ಉತ್ಪನ್ನಗಳನ್ನು ಕನಿಷ್ಠ ದರಗಳಲ್ಲಿ ಖರೀದಿಸಬೇಕು ಎಂದು ನಾವು ಒತ್ತಾಯಿಸಬೇಕು.

"ಬರಗಾಲ ಮತ್ತು ಅಭಾವಪೀಡಿತ ಪ್ರದೇಶಗಳಲ್ಲಿ ಸರ್ಕಾರವು ಈ ಕೆಳಗಿನಂತೆ ವ್ಯವಸ್ಥೆ ಮಾಡಬೇಕೆಂದು ನಾವು ಒತ್ತಾಯಿಸಬೇಕು:

ಅ) ಅಗ್ಗದ ಆಹಾರ ಧಾನ್ಯಗಳ ಮಳಿಗೆಗಳನ್ನು, ಪರಿಹಾರ ಕೆಲಸಗಳನ್ನು ಮತ್ತು ಉಚಿತ ಅಡಿಗೆಮನೆಗಳನ್ನು ಸ್ಥಾಪಿಸಬೇಕು;

ಆ) ಶೋಧನಾ ಕಾರ್ಯಗಳು, ಉದ್ಯೋಗಗಳು ಹಾಗೂ ಕೂಲಿಗಳಿಗೆ ಸಂಬಂಧಪಟ್ಟಂತೆ ಬರಗಾಲ ಸಂಹಿತೆಯನ್ನು ಸರಳೀಕರಿಸಬೇಕು;

ಇ) ಬರಗಾಲ ಪ್ರದೇಶಗಳಲ್ಲಿ ಪರಿಹಾರ ಕೆಲಸಗಳಾಗಿ ಕಲ್ಲು ಒಡೆಯುವ, ಕೇವಲ ರಸ್ತೆ ನಿರ್ಮಾಣ ಮುಂತಾದ ಕೆಲಸಗಳ ಬದಲು ಉತ್ಪಾದಕ ಕೆಲಸಗಳು ಮತ್ತು ರಕ್ಷಣಾ ಕೆಲಸಗಳನ್ನು ಲಾಭವನ್ನು ಪರಿಗಣಿಸದೆ ಕೈಗೆತ್ತಿಕೊಳ್ಳಬೇಕು;

ಈ) ಎಲ್ಲಾ ಋಣಭಾರಗಳು, ಗೇಣಿ ಬಾಕಿ ಮತ್ತು ಭೂಕಂದಾಯ ಸಂದಾಯ ಮಾಡುವುದನ್ನು ಮುಂದೂಡಬೇಕು;

ಉ) ಮೇವುಗಳನ್ನು ಪೂರೈಸಬೇಕು; ಮತ್ತು

ಊ) ತಕಾವಿ ಸಾಲಗಳನ್ನು ಉದಾರಗೊಳಿಸಬೇಕು.

"ಅದೇ ಸಮಯದಲ್ಲಿ ನಾವು ಬರಗಾಲ ಪರಿಹಾರ ಸಮಿತಿಗಳನ್ನು ಬೇರೆಯವರ ಸಹಕಾರದೊಂದಿಗೆ ಸಂಘಟಿಸಬೇಕು ಮತ್ತು ಪರಿಹಾರ ಒದಗಿಸಬೇಕು. ಕಿಸಾನ್ ಸಭಾ ಮತ್ತು ಕೃಷಿ ಕೂಲಿಕಾರರ ಸಂಘಟನೆಗಳ ಘಟಕಗಳು ಈ ಪರಿಹಾರ ಕೇಂದ್ರಗಳಲ್ಲಿ, ಶೋಧನಾ ಕಾರ್ಯಗಳಲ್ಲಿ, ಅಗ್ಗದ ಧಾನ್ಯ ಮಳಿಗೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಭ್ರಷ್ಟಾಚಾರವನ್ನು ತಡೆಯಬೇಕು ಮತ್ತು ಅವು ಸರಿಯಾಗಿ ನಿರ್ವಹಿಸುವಂತೆ ನೋಡಿಕೊಳ್ಳಬೇಕು.

"ತಕ್ಷಣ ಋಣಸಂದಾಯ ಮುಂದೂಡಲು ಮತ್ತು ಹಳೆ ಸಾಲ ಬಾಕಿಯನ್ನು ಕಡಿಮೆ ಮಾಡುವ ಮತ್ತು ರದ್ದು ಮಾಡುವ ಬಗೆಗಿನ ಶಾಸನಕ್ಕಾಗಿ ತೀವ್ರವಾದ ಪ್ರಚಾರ ಕೈಗೊಳ್ಳಬೇಕು.

"ಸಹಕಾರ ಸಂಘಗಳು ಸಾಮಾನ್ಯವಾಗಿ ಭೂಮಾಲಕರ ಮತ್ತು ಶ್ರೀಮಂತ ರೈತರ ಕೈಯಲ್ಲಿರುತ್ತವೆ. . . .ಕಿಸಾನ್ ಚಳುವಳಿ ಎಲ್ಲೆಲ್ಲಿ ದುರ್ಬಲವಾಗಿದೆಯೋ ಅಂತಹ ಪ್ರದೇಶಗಳಲ್ಲಿ ಅವು ಅವರ ಕೈಯಲ್ಲಿರುತ್ತವೆ. ಆದರೆ ಈ ವಿದ್ಯಮಾನಗಳು ಈ ಸಹಕಾರ ಸಂಘಗಳ ಮೂಲಕ ಸರ್ಕಾರವು ನೀಡುತ್ತಿರುವ ಸೌಲಭ್ಯಗಳ ಬಗ್ಗೆ ನಮ್ಮನ್ನು ಕುರುಡಾಗಿಸಬಾರದು. ಸರ್ಕಾರವು ಈ ಸೌಲಭ್ಯಗಳನ್ನು ಮುಂದುವರಿಸುತ್ತಲೇ ಇದೆ ಮತ್ತು ನಿಜವಾಗಿಯೂ 'ಕೋಆಪರೇಟಿವ್ ಕಾಮನ್‌ವೆಲ್ತ್'ನ್ನು ಈ ರೀತಿಯಲ್ಲಿ ಬೆಳೆಸಬಹುದು ಎಂಬ ಭ್ರಮೆಯನ್ನು ಹುಟ್ಟುಹಾಕಲು ಈ ಸಹಕಾರ ಸಂಘಗಳನ್ನು ಹೆಚ್ಚು ವ್ಯಾಪಕವಾಗಿ ಬೆಳೆಸಬೇಕೆಂಬುದನ್ನು ಸರ್ಕಾರ ಬಯಸುತ್ತದೆ. ಆದರೆ, ನಾವು ಈ ಭ್ರಮೆಗಳ ಬಲೆಗೆ ಬೀಳದೆ, ಈ ಸಹಕಾರಿ ಸಂಘಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕಾದ್ದು ಅಗತ್ಯವಿದೆ ಮತ್ತು ಅವನ್ನು ಬಳಸಲು ಪ್ರಯತ್ನಿಸಬೇಕು, ಆ ಮೂಲಕ ಕೃಷಿ ಕೂಲಿಕಾರರ, ಬಡವರ ಮತ್ತು ಮಧ್ಯಮ ರೈತರ ಅಗತ್ಯಗಳಿಗೆ ನೆರವು ನೀಡಬಹುದು. ಸಹಕಾರಿ ರಂಗದಲ್ಲಿನ ಭ್ರಷ್ಟಾಚಾರದ ವಿರುದ್ಧ ನಾವು ಹೋರಾಡಬೇಕು ಮತ್ತು ಹೆಚ್ಚು ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಒತ್ತಾಯಿಸಬೇಕು.

"ಹಲವಾರು ತೆರಿಗೆ ಹೊರೆಗಳನ್ನು ಕಡಿಮೆಮಾಡಬೇಕೆಂಬ ಬೇಡಿಕೆಗಳನ್ನು ನಾವು ರೂಪಿಸಬೇಕು ಮತ್ತು ಶ್ರೇಣೀಕೃತ ಕೃಷಿ ತೆರಿಗೆಯನ್ನು ಆರಂಭಿಸಬೇಕೆಂದು ಒತ್ತಾಯಿಸಬೇಕು. ರೈತರ ಮೇಲೆ ಹೊಸ ತೆರಿಗೆ ಹೊರೆಗಳನ್ನು ಹೇರುವುದರ ವಿರುದ್ಧ ಹೋರಾಟಗಳನ್ನು ತೀವ್ರಗೊಳಿಸಬೇಕು ಮತ್ತು ಅಂತಹ ಎಲ್ಲಾ ಪ್ರಯತ್ನಗಳನ್ನು ಪ್ರತಿರೋಧಿಸಬೇಕು.

"ಆದಿವಾಸಿ ಪ್ರದೇಶಗಳಲ್ಲಿ, ಮೀಸಲು ರೇಖೆಯನ್ನು ಹಳ್ಳಿಗಳಿಂದ ಒಂದು ಮೈಲಿ ದೂರದಲ್ಲಿಡಬೇಕು: ಅರಣ್ಯಗಳೇ ಇಲ್ಲದ, ಆದರೆ ಮೀಸಲು ಎಂದು ಗುರುತಿಸಲ್ಪಟ್ಟ ಪ್ರದೇಶಗಳನ್ನು ಸಾಗುವಳಿಗಾಗಿ ನೀಡಬೇಕು. ಸಾಗುವಳಿ ಸ್ಥಳಾಂತರಕ್ಕೆ ಸಂಬಂಧಪಟ್ಟ ನಿಯಮಗಳನ್ನು ಸರಳವಾಗಿಸಬೇಕು. ಅರಣ್ಯ ಪಂಚಾಯತುಗಳನ್ನು ರಚಿಸಬೇಕು. ಅರಣ್ಯ ಉತ್ಪನ್ನಗಳನ್ನು ಆದಿವಾಸಿಗಳು ಮುಕ್ತವಾಗಿ ಬಳಸಲು ಹಾಗೂ ಮಾರಾಟ ಮಾಡಲು ಸಾಧ್ಯವಾಗಬೇಕು. ಮಾರಾಟಕ್ಕಾಗಿ ಮರಗಳನ್ನು ಕಡಿಯಬಹುದಾದಂತಹ ಪ್ರದೇಶಗಳಲ್ಲಿ ಆದಿವಾಸಿಗಳ ಸಹಕಾರ ಸಂಘಗಳನ್ನು ಸ್ಥಾಪಿಸಬೇಕು.

"ಆದಿವಾಸಿ ಪ್ರದೇಶಗಳಲ್ಲಿ ಎಲ್ಲಾ ರೀತಿಯ ಭೂಮಾಲಕತ್ವವನ್ನು ರದ್ದುಮಾಡಬೇಕು ಮತ್ತು ಹಳೆಯ ಋಣಭಾರವನ್ನು ಕೊನೆಗೊಳಿಸಬೇಕು.

"ಗುತ್ತಿಗೆದಾರರಿಂದ ಎಲ್ಲಾ ರೀತಿಯ ಶೋಷಣೆಯನ್ನು ತಡೆಯಬೇಕು ಮತ್ತು ಆದಿವಾಸಿಗಳ ಅರಣ್ಯ ಸಂಗ್ರಹಣೆಗಳಿಗೆ ನ್ಯಾಯಬೆಲೆ, ಅವರ ಕೆಲಸಗಳಿಗೆ ಸರಿಯಾದ ಕೂಲಿ ಸಿಗಬೇಕು.

"ದವಾಖಾನೆಗಳ ಮೂಲಕ ವೈದ್ಯಕೀಯ ನೆರವು, ಸಂಚಾರಿ ವೈದ್ಯಾಧಿಕಾರಿಗಳು, ಆದಿವಾಸಿ ಪ್ರದೇಶಗಳಲ್ಲಿ ವ್ಯಾಪಕವಾಗಿರುವ ವಿಶೇಷ ರೋಗಗಳಿಗೆ ವಿಶೇಷ ಕ್ರಮಗಳು, ಕುಡಿಯುವ ನೀರಿನ ಬಾವಿಗಳು, ಹೊಂಡಗಳನ್ನು ಸೋಂಕಿಲ್ಲದಂತೆ ಶುದ್ಧಗೊಳಿಸುವುದು ಮತ್ತು ಮಲೇರಿಯಾ ಹೋಗಲಾಡಿಸಲು ವಿಶೇಷ ಕ್ರಮಗಳು ಮುಂತಾದವುಗಳನ್ನು ಕೈಗೊಳ್ಳಬೇಕು.

"ಜಾನುವಾರುಗಳ ಖಾಯಿಲೆಗಳನ್ನು ತಡೆಯಲು ಔಷಧಾಲಯಗಳನ್ನು ಮತ್ತು ಸಂಚಾರಿ ಜಾನುವಾರು ವೈದ್ಯರುಗಳನ್ನು ಒದಗಿಸಬೇಕು.

"ಆದಿವಾಸಿ ಪ್ರದೇಶಗಳಲ್ಲಿ ವಿಶೇಷ ಶಿಕ್ಷಣ ಸೌಲಭ್ಯವನ್ನು, ಅವರ ಭಾಷೆಯಲ್ಲೇ ಶಿಕ್ಷಣ ಒದಗಿಸುವುದು; ಶಾಲಾ ಪರಿಕರಗಳನ್ನು ಉಚಿತವಾಗಿ ನೀಡಬೇಕು; ವಯಸ್ಕರಿಗೆ ರಾತ್ರಿ ಶಾಲೆಗಳನ್ನು ನಡೆಸಬೇಕು; ಪ್ರೌಢ ಹಾಗೂ ವಿಶ್ವವಿದ್ಯಾಲಯಗಳ ಶಿಕ್ಷಣಕ್ಕೆ ಉಚಿತ ವಿದ್ಯಾರ್ಥಿವೇತನಗಳನ್ನು ಹಾಗೂ ಆದಿವಾಸಿ ಶಿಕ್ಷಕರಿಗೆ ತರಬೇತಿ ನೀಡಬೇಕು.

"ನೀರಾವರಿ ಯೋಜನೆಗಳು ಪೂರ್ಣಗೊಳ್ಳುವ ಮುಂಚೆಯೇ ಅನೇಕ ಸಂದರ್ಭಗಳಲ್ಲಿ ರೈತರ ಮೇಲೆ ಎಕರೆವಾರು ಅಭಿವೃದ್ಧಿ ಶುಲ್ಕ ವಿಧಿಸಬೇಕೆಂಬ ಕಾಂಗ್ರೆಸ್ ಸರ್ಕಾರದ ಉದ್ದೇಶವನ್ನು ವಿರೋಧಿಸಬೇಕು, ಏಕೆಂದರೆ ಇದು ಬಡ ಮತ್ತು ಮಧ್ಯಮ ರೈತರನ್ನು ಹೆಚ್ಚೆಚ್ಚು ಸಾಲಗಾರರನ್ನಾಗಿಸಿ ಸರ್ವನಾಶ ಮಾಡುತ್ತದೆ.

"ಸರ್ಕಾರದ ನೀತಿಗಳು ಮತ್ತು ಕಾರ್ಯಗಳನ್ನು ಟೀಕೆ ಮಾಡುವುದಕ್ಕೆ ಮಾತ್ರವೇ ಸೀಮಿತವಾಗದೇ, ಯೋಜನೆಗಳನ್ನು ರೂಪಿಸುವವರಾಗಿ, ಬರಗಾಲ ಹಾಗೂ ಪ್ರವಾಹ ಪರಿಹಾರ ಸಂಘಟಿಸುವವರಾಗಿ ಕೂಡ ಪಕ್ಷ ಮತ್ತು ಕಿಸಾನ್ ಸಭಾ ಮುಂದಾಗಬೇಕಾದ ಸಮಯವಿದು; ಸಹಕಾರಿ ಸಂಘಗಳು, ಗ್ರಾಮೀಣ ಬ್ಯಾಂಕ್‌ಗಳು, ಮಾರುಕಟ್ಟೆ ಮಂಡಲಿಗಳು, ಪಂಚಾಯತುಗಳು ಹಾಗೂ ಶಾಲೆಗಳು; ಸಾಂಸ್ಕೃತಿಕ ಸಂಘಗಳು, ಕೃಷಿ ಸಂಶೋಧನಾ ಕೇಂದ್ರಗಳು ಮುಂತಾದ ಎಲ್ಲಾ ಸಂಸ್ಥೆಗಳನ್ನು ನಡೆಸುವ ಶಕ್ತಿಸಾಮರ್ಥ್ಯಗಳನ್ನು ಹೊಂದಬೇಕು.

" 'ಸೃಜನಾತ್ಮಕ' ಯೋಜನೆಗಳನ್ನು ರೈತರು ಮತ್ತು ಜನರ ದೃಷ್ಟಿಯಿಂದ ಜಾಗರೂಕತೆಯಿಂದ ಅಭ್ಯಾಸ ಮಾಡದೆ ತಿರಸ್ಕಾರ ಭಾವದಿಂದ ನೋಡುವ ಮತ್ತು ಅವಹೇಳನ ಮಾಡುವ ಪರಿಪಾಟವನ್ನು ಬಿಡಬೇಕು. ಅಂತಹ ಕೆಲಸಗಳು ನಮ್ಮನ್ನು 'ಪರಿಷ್ಕರಣವಾದ'ದತ್ತ ಕೊಂಡೊಯ್ಯುತ್ತವೆ ಮತ್ತು ನಾವು ರೈತಾಪಿಗಳ ನಡುವೆ 'ಭ್ರಮೆಗಳನ್ನು' ಸೃಷ್ಟಿಸುತ್ತೇವೆ ಎಂಬ ಭೀತಿಯಿಂದ ಹೊರಬರಬೇಕು. ಭೂಮಾಲಕರು ಮತ್ತು ಸರ್ಕಾರದ ವಿರುದ್ಧ ಇವುಗಳನ್ನು ಸಾಧಿಸುವ ನಿಟ್ಟಿನಲ್ಲಿ ರೈತ ಸಮುದಾಯವನ್ನು ಯಶಸ್ವಿಯಾಗಿ ಮುನ್ನಡೆಸುವ ಮೂಲಕ, ಅವರ ಬೇಡಿಕೆಗಳನ್ನು ಈಡೇರಿಸುವುದಕ್ಕಾಗಿ ರೈತ ಸಮುದಾಯವನ್ನು ಹುರಿದುಂಬಿಸಿ ಕಾರ್ಯಾಚರಣೆಗೆ ಇಳಿಸಲು ಸಾಧ್ಯವಾಗುತ್ತದೆ.

"ಕಾರ್ಷಿಕ ಕ್ರಾಂತಿಯ ಚಳುವಳಿಗೆ ಲಕ್ಷಾಂತರ ರೈತರು ಮತ್ತು ಕೃಷಿ ಕೂಲಿಕಾರರನ್ನು ಸೆಳೆದುಕೊಳ್ಳುವ ದೃಷ್ಟಿಯಿಂದ ಯೋಜನಾಬದ್ಧ ಸಂಘಟನಾತ್ಮಕ ಕೆಲಸಗಳ ಮೂಲಕ ಸೈದ್ಧಾಂತಿಕ ಹೋರಾಟ ಮತ್ತು ಐಕ್ಯ ರಂಗದ ಕಾರ್ಯಾಚರಣೆಗಳನ್ನು ಬಲಪಡಿಸಬೇಕು.

"ನಿರ್ದಿಷ್ಟ ಪ್ರಶ್ನೆಗಳ ಮೇಲೆ ರೈತ ಹೋರಾಟಗಳನ್ನು ಮಾಡುವಾಗ ಅಸ್ತಿತ್ವದಲ್ಲಿರುವ ಇತರ ಕಿಸಾನ್ ಸಂಘಟನೆಗಳ ಜತೆ ಜಂಟೀ ಸಮಿತಿಗಳನ್ನು ರಚಿಸುವ ನಿಟ್ಟಿನಲ್ಲಿ ವ್ಯವಸ್ಥಿತ ಪ್ರಯತ್ನ ಮಾಡಲು ಕೆಳ ಮಟ್ಟದ ಘಟಕಗಳಿಗೆ ಕಿಸಾನ್ ಸಭಾವು ಮನವಿ ಮಾಡುವುದನ್ನು ಮುಂದುವರಿಸಬೇಕು. ಆಗ ಮಾತ್ರವೇ ಇಡೀ ರೈತ ಸಮುದಾಯವನ್ನು ಒಂದು ಒಗ್ಗಟ್ಟಾದ ಸಂಘಟನೆಯ ಹಿಂದೆ ಅಣಿನೆರೆಸಬಹುದು.

"ಒಂದು ವಿಶಾಲ ಒಗ್ಗಟ್ಟಾದ ರೈತ ಚಳುವಳಿಯನ್ನು ಬೆಳೆಸುವ ಸಲುವಾಗಿ ಭೂಮಾಲಕ-ಸಾಮ್ರಾಜ್ಯಶಾಹಿ ಶೋಷಣೆಯ ವಿರುದ್ದ ಇಡೀ ರೈತಾಪಿ ಜನರ ಐಕ್ಯತೆಯನ್ನು ಬೆಸೆಯುವುದು ಅತ್ಯಂತ ಮುಖ್ಯವಾದ ಕೆಲಸವಾಗಬೇಕು.

"ಸಾಮ್ರಾಜ್ಯಶಾಹಿಗಳು, ಭೂಮಾಲಕರು ಮತ್ತು ಭಾರತೀಯ ಏಕಸ್ವಾಮ್ಯಗಳ ವಿರುದ್ಧ ರೈತರನ್ನು ಒಗ್ಗೂಡಿಸುವ ಸಮಸ್ಯೆಯು ಪ್ರಮುಖವಾಗಿ ಶ್ರೀಮಂತ ರೈತರನ್ನೂ ಒಳಗೊಂಡಂತೆ ಕೃಷಿ ಕೂಲಿಕಾರರು ಮತ್ತು ರೈತರನ್ನು ಒಗ್ಗೂಡಿಸುವ ಸಮಸ್ಯೆಯಾಗಿದೆ. ಈ ಸಮಸ್ಯೆಯನ್ನು ಅದರ ಎಲ್ಲಾ ಸಂಬಂಧಗಳ ಆಧಾರದಲ್ಲಿ ಅಧ್ಯಯನ ಮಾಡವಲ್ಲಿನ ನಿಷ್ಕ್ರಿಯತೆ ಅಥವಾ ಕಾದು ಕೂರುವ ಮತ್ತು ಸ್ವಯಂಪ್ರೇರಿತ ಪ್ರವೃತ್ತಿಯು ಅಥವಾ ವೈಫಲ್ಯವು, ಪಾಳೇಗಾರಿ ಶೋಷಣೆಯ ವಿರುದ್ಧ ಇಬ್ಬರ ಸಮಾನ ತಿಕ್ಕಾಟವನ್ನು ಬದಿಗಿರಿಸಿ ಕೃಷಿ ಕೂಲಿಕಾರರನ್ನು, ಅವರ ಬೇಡಿಕೆಗಳನ್ನು ಮತ್ತು ಹೋರಾಟಗಳನ್ನು ಕಡೆಗಣಿಸಲು ಅಥವಾ ರೈತರ ನಡುವಿನ ಅವರ ತಿಕ್ಕಾಟಕ್ಕೆ ಒತ್ತುಕೊಡಲು ಕಾರಣವಾಗಿದೆ. ಪ್ರಧಾನವಾಗಿ ಮೊದಲನೆಯದರ ಕಡೆಗಣಿಸುವಿಕೆಯಿಂದಾಗಿ ರೈತ ಚಳುವಳಿಯು ಇಲ್ಲಿಯ ತನಕ ಹಾನಿಗೊಳಗಾಗಿದೆ.

"ಒಂದು ಬಲಿಷ್ಠ ರೈತ ಚಳುವಳಿಯನ್ನು ಕಟ್ಟಲು, ಸಾಕ್ಷರತಾ ತರಗತಿಗಳು, ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು, ಪರಿಹಾರ ಮತ್ತು ಸ್ವಸಹಾಯ ಚಳುವಳಿ, ಸಾಮಾಜಿಕ ಕುಂದು ಕೊರತೆಗಳ ವಿರುದ್ಧ ಹೋರಾಟ ಮುಂತಾವುಗಳನ್ನು ಸಂಘಟಿಸುವ ಮತ್ತು ವೈದ್ಯಕೀಯ, ಸಾರ್ವಜನಿಕ ಆರೋಗ್ಯ ಮತ್ತಿತರ ನೈತಿಕ ಉನ್ನತಿಗಾಗಿನ ಚಟುವಟಿಕೆಗಳನ್ನು ಸಂಘಟಿಸುವ ಮೂಲಕ ರೈತರ ಮತ್ತು ಕೃಷಿ ಕೂಲಿಕಾರರ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಮಟ್ಟವನ್ನು ಎತ್ತರಿಸುವಂತಹ ಎಲ್ಲಾ ಕಾರ್ಯಗಳನ್ನು ಕಿಸಾನ್ ಸಭಾ ಮತ್ತು ಕೃಷಿ ಕೂಲಿಕಾರರ ಸಂಘಟನೆಗಳು ಕೈಗೆತ್ತಿಕೊಳ್ಳಬೇಕಾದ ಅಗತ್ಯವಿದೆ.

"ಭೂಮಾಲಕರೊಂದಿಗೆ, ಸರ್ಕಾರಿ ಅಧಿಕಾರಿಗಳೊಂದಿಗೆ ಮತ್ತಿತರ ಸಾರ್ವಜನಿಕ ಸಂಸ್ಥೆಗಳೊಂದಿಗಿನ ಸಂಬಂಧದಲ್ಲಿ ರೈತಾಪಿ ಜನಗಳು ಎದುರಿಸುವ ಹಲವಾರು ಸಮಸ್ಯೆಗಳನ್ನು ದಿನನಿತ್ಯ ವಿಚಾರಿಸಲು ಕಿಸಾನ್ ಸಭಾ ಮತ್ತು ಕೃಷಿ ಕೂಲಿಕಾರರ ಸಂಘಟನೆಗಳ ಕಛೇರಿಗಳು ಸದಾ ಕಾರ್ಯನಿರ್ವಹಿಸಬೇಕು; ಕಾನೂನು ಸಹಾಯ ಒದಗಿಸುವುದು, ಬೇಸಾಯವನ್ನು ಉತ್ತಮಪಡಿಸಲು ಇತ್ತೀಚಿನ ವಿಧಾನಗಳನ್ನು ಅವರ ಗಮನಕ್ಕೆ ತರುವುದರ ಮೂಲಕ ಅವರ ಇಳುವರಿಯನ್ನು ಹೆಚ್ಚಿಸಲು ಸಹಾಯ ಮಾಡುವುದು, ಅವರ ಬೆಳೆ ಮತ್ತು ಜಾನುವಾರಗಳಿಗೆ ಬಾಧೆಯುಂಟುಮಾಡುವ ಕೀಟಗಳನ್ನು ನಾಶಪಡಿಸಲು ಸಹಾಯ ಮಾಡುವುದು, ಉತ್ತಮ ಬೀಜಗಳು, ಸಲಕರಣೆಗಳು, ಗೊಬ್ಬರ, ಸಮಯಕ್ಕೆ ಸರಿಯಾಗಿ ಅವರ ಜಮೀನಿಗೆ ನೀರು ಪೂರೈಕೆಗೆ ಸಹಾಯ ಮಾಡುವುದು ಮತ್ತು ರೈತರ ಮತ್ತು ಅವರ ದಿನನಿತ್ಯದ ವೃತ್ತಿಗೆ ಸಂಬಂಧಪಟ್ಟಂತಹ ಮತ್ತು ಅವರ ಇಡೀ ಬದುಕಿನಲ್ಲಿನ ಈ ತರದ ವಿವಿಧ ಚಟುವಟಿಕೆಗಳಿಗೆ ಸಹಾಯ ಮಾಡಬೇಕು.

"ಒಂದೇ ಮಾತಿನಲ್ಲಿ ಹೇಳುವುದಾದರೆ, ಕಿಸಾನ್ ಸಭಾ ಮತ್ತು ಕೃಷಿ ಕೂಲಿಕಾರರ ಸಂಘಟನೆಗಳು ರೈತರ ಬದುಕಿನ ಅವಿಭಾಜ್ಯ ಅಂಗವಾಗಬೇಕು, ಅದರಿಂದ ನಿರಂತರ ಸಲಹೆ ಮತ್ತು ಸಹಾಯ ಅವರಿಗೆ ಸಿಗುವಂತಾಗಬೇಕು.

"ನಮ್ಮ ರೈತ ಹೋರಾಟಗಳು ಯಶಸ್ಸನ್ನು ಸಾಧಿಸಲು, ಕಾರ್ಮಿಕ ವರ್ಗದ ಕ್ರಿಯಾಶೀಲ ಬೆಂಬಲವನ್ನು ಗಳಿಸಬೇಕು. ಆದರೆ ಇಲ್ಲಿ ಪಕ್ಷ ಸೋಲುತ್ತಿದೆ. ಕಾರ್ಮಿಕ ವರ್ಗದ ನಡುವೆ ರೈತಾಪಿ ಜನರ ಬೇಡಿಕೆಗಳನ್ನು ಜನಪ್ರಿಯಗೊಳಿಸಲು ನಮಗೆ ಸಾಧ್ಯವಾಗಲಿಲ್ಲ. ರೈತರ ಬೇಡಿಕೆಗಳಿಗೆ ಬೆಂಬಲವಾಗಿ ನಡೆಯುವ ಸಭೆ, ಮತಪ್ರದರ್ಶನ ಮತ್ತು ಸಾರ್ವತ್ರಿಕ ಮುಷ್ಕರಗಳಿಗೆ ಕಾರ್ಮಿಕ ವರ್ಗವನ್ನು ಕರೆತರಲು ಸಾಧ್ಯವಾಗಿಲ್ಲ.

"ಕಾರ್ಮಿಕ ವರ್ಗದ ಬೇಡಿಕೆಗಳು ಮತ್ತು ಹೋರಾಟಗಳ ಬಗ್ಗೆ ರೈತರ ಮಧ್ಯೆ ಕೊಂಡೊಯ್ಯಲು ಮತ್ತು ಕಾರ್ಮಿಕ ವರ್ಗದ ಬೇಡಿಕೆಗಳು ಮತ್ತು ಹೋರಾಟಗಳ ಬೆಂಬಲಕ್ಕೆ ರೈತರನ್ನು ಕರೆತರಲು ಪಕ್ಷ ಶ್ರಮಿಸಬೇಕು. ಹೀಗಾದಾಗ

ಪುಟ 14 ನೋಡಿ

ಬಾಬ್ರಿ 'ತೀರ್ಪು', ಖುಲಾಸೆಗಳು ಮತ್ತು 'ಸಮಾಜ ಘಾತುಕ'ರು–ನ್ಯೂ ಇಂಡಿಯಾದ ದ್ಯೋತಕಗಳು

ಬಾಬ್ರಿ ಮಸೀದಿ ಕಟ್ಟಡವನ್ನು 1992ರಲ್ಲಿ ಕರಸೇವಕರು ಕೆಡವಿಹಾಕಿದ ಘಟನೆಯ ಸಂಬಂಧ ಕೊನೆಗೂ ಸಪ್ಟಂಬರ್ 30ರಂದು ನ್ಯಾಯಾಲಯದ ತೀರ್ಪು ಬಂದಿದೆ. 28 ವರ್ಷಗಳ ಈ ಹಳೆಯ ಪ್ರಕರಣದ ತೀರ್ಪನ್ನು ಸಿಬಿಐ ವಿಶೇಷ ನ್ಯಾಯಾಲಯ ಪ್ರಕಟಿಸಿದೆ. ಬಾಬರಿ ಮಸೀದಿ ಧ್ವಂಸ ಮಾಡಿದ್ದು ಪೂರ್ವನಿಯೋಜಿತ ಎಂದು ಅನಿಸುವುದಕ್ಕೆ ಪ್ರಬಲ ಸಾಕ್ಷ್ಯಾಧಾರಗಳು ಇಲ್ಲ ಎಂದು ಅಭಿಪ್ರಾಯಪಟ್ಟ ನ್ಯಾಯಪೀಠ, ಎಲ್ಲಾ 32 ಆರೋಪಿಗಳನ್ನು ಖುಲಾಸೆಗೊಳಿಸಿದೆ.

ಈ ಪ್ರಕರಣದ ತನಿಖೆ ನಡೆಸಿದ ಸಿಬಿಐ ಒಟ್ಟು 351 ಜನ ಸಾಕ್ಷಿಗಳು ಹಾಗೂ ಸುಮಾರು 600 ಸಾಕ್ಷ್ಯಚಿತ್ರಗಳ ಸಾಕ್ಷ್ಯಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿತ್ತು. ಇವೆಲ್ಲವೂ 1992ರ ಡಿಸೆಂಬರ್ 6ರಂದು ಕರಸೇವಕರು ಅಯೋಧ್ಯೆಯ ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸಿದ್ದರು ಎಂಬ ಬಗೆಗಿನ ಸಾಕ್ಷ್ಯಾಧಾರಗಳಾಗಿವೆ. ಆದರೆ ಇವು ಯಾವವೂ ನ್ಯಾಯಾಲಯಕ್ಕೆ ಗಟ್ಟಿ ಸಾಕ್ಷಿಗಳು ಎಂದು ಅನಿಸಲಿಲ್ಲವಂತೆ. ಆರೋಪಿಗಳು ಸಂಚು ರೂಪಿಸಿದ್ದರು ಎನ್ನುವುದಕ್ಕೆ ಪೂರಕವಾಗಿ ಸಮರ್ಪಕ ಸಾಕ್ಷ್ಯಾಧಾರ ಇಲ್ಲ ಎಂದು ತಮ್ಮ 2 ಸಾವಿರ ಪುಟಗಳ ತೀರ್ಪಿನಲ್ಲಿ ಹೇಳಲಾಗಿದೆ.

ಸುಪ್ರಿಂ ಕೋರ್ಟ್ 'ಕಾನೂನಿನ ಆಳ್ವಿಕೆಯ ಘೋರ ಉಲ್ಲಂಘನೆ' ಎಂದಿತ್ತು !

ಇದಕ್ಕೆ ಮೊದಲು ದೇಶದ ಸರ್ವೋಚ್ಚ ನ್ಯಾಯಾಲಯದ ಐವರು ನ್ಯಾಯಾಧೀಶರಿದ್ದ ಪೀಠ ಅಯೋಧ್ಯಾ ವಿವಾದ ಕುಇರಿತ ನವಂಬರ್ 9, 2019ರ ತೀರ್ಪಿನಲ್ಲಿ ಬಾಬ್ರಿ ಸಮೀದಿ ಧ್ವಂಸದ ಬಗ್ಗೆ ಹೇಳಿರುವ ಈ ಮಾತುಗಳನ್ನು ನೋಡಿ:

"6 ಡಿಸೆಂಬರ್ 1992ರಂದು ಮಸೀದಿಯ ರಚನೆಯನನು ನೆಲಸಮ ಮಾಡಲಯಿತು ಮತ್ತು ಮಸೀದಿಯನ್ನು ಧ್ವಂಸ ಮಾಡಲಾಯಿತು. ಮಸೀದಿಯ ಧ್ವಂಸ ಈ ನ್ಯಾಯಾಲಯದ ಯಥಾಸ್ಥಿತಿ ಕಾಯ್ದುಕೊಳ್ಳಬೇಕೆಂಬ ಆದೇಶವನ್ನು ಮತ್ತು ಈ ನ್ಯಾಯಾಲಯಕ್ಕೆ ನೀಡಿದ ಆಶ್ವಾಸನೆಯನ್ನು ಉಲ್ಲಂಘಿಸಿ ಮಾಡಲಾಗಿದೆ. ಮಸೀದಿಯ ಧ್ವಂಸ ಮತ್ತು ಇಸ್ಲಾಮಿಕ ಕಟ್ಟಡದ ನಿರ್ನಾಮ ಕಾನೂನಿನ ಆಳ್ವಿಕೆಯ ಒಂದು ಘೋರ ಉಲ್ಲಂಘನೆ"!

ಆದರೆ ಲಕ್ನೌ ಸಿಬಿಐ ನ್ಯಾಯಾಲಯಕ್ಕೆ ಇದರಲ್ಲಿ ಯಾವುದೇ ಪಿತೂರಿ ಕಂಡಿಲ್ಲ.

"ಗುಪ್ತಚರ ಸಂಸ್ಥೆಯಿಂದ ಪಿತೂರಿಯ ವರದಿಗಳು ಬರುತ್ತಿದ್ದವು"

ಪಿತೂರಿ ಇರಲಿಲ್ಲ ಎಂಬ ತೀರ್ಪನ್ನು ನಂಬಲಾಗಲಿಲ್ಲ ಎಂದು ಬಾಬ್ರಿ ಮಸೀದಿ ಧ್ವಂಸದ ವೇಳೆಯಲ್ಲಿ ಕೇಂದ್ರ ಗೃಹ ಇಲಾಖೆಯ ಕಾರ್ಯದರ್ಶಿ, ಐಎಎಸ್ ಅಧಿಕಾರಿ ಮಾಧವ ಗೋಡ್ಬೊಳೆಯವರ ಪ್ರತಿಕ್ರಿಯೆ.

"......ನಮಗೆ ಇಂಟೆಲಿಜೆನ್ಸ್ ಬ್ಯುರೊ ದಿಂದ ಇಂತಹ ಒಂದು ಪಿತೂರಿ ಇದೆ ಎಂಬ ಮಾಹಿತಿಗಳು ಲಭ್ಯವಾಗಿದ್ದವು, ಅವನ್ನು ಸುಪ್ರಿಂ ಕೋರ್ಟ್ ಎದುರು ಪ್ರತಿದಿನ ಸಲ್ಲಿಸುತ್ತಿದ್ದೆವು" ಎಂದು ಅವರು ಹೇಳಿದ್ದಾರೆ.

ಇಂತಹ ವರದಿಗಳ ಆಧಾರದಲ್ಲಿಯೇ ಸುಪ್ರಿಂ ಕೋರ್ಟ್ ಒಬ್ಬ ವೀಕ್ಷಕರನ್ನು ನೇಮಿಸಿದ್ದು, ಬಾಬ್ರಿಮಸೀದಿಗೆ ಯಾವುದೇ ಹಾನಿ ಉಂಟು ಮಾಡುವುದಿಲ್ಲ" ಎಂದು ಒಪ್ಪಿಕೊಂಡ ಮೇಲೆಯೇ ಕರಸೇವೆಗೆ ಅನುಮತಿ ನೀಡಿದ್ದು ಎಂದು ಅವರು ನೆನಪಿಸಿಕೊಳ್ಳುತ್ತಾರೆ.

ಅದನ್ನು ಈಗ ಖುಲಾಸೆಯಾಗಿರುವವರಲ್ಲಿ ಒಬ್ಬರಾದ ಅಲ್ಲಿನ ಆಗಿನ ಮುಖ್ಯಂತ್ರಿಗಳು ಪಾಲಿಸಲಿಲ್ಲ. ಆ ಬಗ್ಗೆ ಈಗಲೂ ಅವರಿಗೆ ಬೇಸರವಿಲ್ಲ, ಬದಲಿಗೆ ಹೆಮ್ಮೆಯಿದೆಯಂತೆ!

ಇದನ್ನೇ ಸುಪ್ರಿಂ ಕೋರ್ಟ್‌ಮೇಲೆ ಹೇಳಿದಂತೆ "ಈ ನ್ಯಾಯಾಲಯಕ್ಕೆ ನೀಡಿದ ಆಶ್ವಾಸನೆಯನ್ನು ಉಲ್ಲಂಘಿಸಿ ಮಾಡಲಾಗಿದೆ" ಎಂದಿರುವುದು

ವಾಸ್ತವವಾಗಿ ಇಂಟೆಲಿಜೆನ್ಸ್ ಬ್ಯುರೊ ವರದಿಯ ಆಧಾರದಲ್ಲಿ ಉತ್ತರಪ್ರದೇಶದ ಸರಕಾರವನ್ನು ಕಲಮು 356 ರ ಅಡಿಯಲ್ಲಿ ವಜಾ ಮಾಡಬೇಕು, ಎಂದು ಶಿಫಾರಸು ಮಾಡಬೇಕು ಎಂದು ಗೋಡ್ಬೊಳೆಯವರು ಗೃಹಮಂತ್ರಿ ಶಂಕರರಾವ್ ಚವ್ಹಾಣ್‌ರವರಿಗೆ ಹೇಳಿದ್ದರು. ಆದರೆ ಪ್ರಧಾನಿ ನರಸಿಂಹ ರಾವ್ ಅವರು ಒಂದು ಸ್ಪಷ್ಟ ನಿರ್ಧಾರಕ್ಕೆ ಬರುವ ಸ್ಥಿತಿಯಲ್ಲಿದ್ದಂತೆ ತೋರಲಿಲ್ಲ ಎನ್ನುತ್ತಾರೆ ಅವರು. ಈ ಘಟನೆಯ ನಂತರ ಗೋಡ್ಬೊಳೆಯವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದರು, ಸ್ವಯಂ ನಿವೃತ್ತಿ ತೆಗೆದುಕೊಂಡರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ತೀರ್ಪೋ–ಪ್ರಕರಣದ 'ವಿಲೇವಾರಿ'ಯೋ?

ಬಾಬ್ರಿ ಮಸೀಧಿ ಧ್ವಂಸ ಕೃತ್ಯ ನಡೆದಾಗ ಎರಡು ಎಫ್‌ಐಆರ್‌ಗಳನ್ನು ಸಲ್ಲಿಸಲಾಯಿತು. ಅದರಲ್ಲಿ ಒಂದು ಲಕ್ಷಾಂತರ ಅಪರಿಚಿತ ಕರಸೇವಕರ ವಿರುದ್ಧ ಮತ್ತು ಇನ್ನೊಂದು ಅಡ್ವಾಣಿ, ಉಮಾಬಾರತಿ ಮತ್ತಿತರ ಸಂಘ ಪರಿವಾರದ ಹಿರಿಯ ಮುಖಂಡರ ಪ್ರಚೋದನಾಕಾರೀ ಭಾಷಣಗಳ ವಿರುದ್ಧ. ಆಗಸ್ಟ್ 27, 1993ರಲ್ಲಿ ಉತ್ತರಪ್ರದೇಶ ಸರಕಾರ ಇದನ್ನು ಸಿಬಿಐಗೆ ವಹಿಸಿತು. ಸಿಬಿಐ ಅಕ್ಟೋಬರ್ 5, 1993ರಂದು 40 ಮಂದಿಯನ್ನು ಆರೋಪಿಗಳೆಂದು ಗುರುತಿಸಿ ಚಾರ್ಜ್‌ಶೀಟ್ ಹಾಕಿತು. ಆದರೆ ನಂತರ ಕೆಲವು ಹಿಂದುತ್ವ ಮುಖಂಡರ ಮೇಲಿನ ಪಿತೂರಿ ಆರೋಪವನ್ನು ಕೈಬಿಡಲಾಯಿತು. 2001ರಲ್ಲಿ ವಿಶೇಷ ಸಿಬಿಐ ನ್ಯಾಯಾಲಯದಲ್ಲೂ ಅಡ್ವಾಣಿಯವರ ವಿರುದ್ಧ ಪಿತೂರಿ ಆರೋಪವನ್ನು ಕೈಬಿಡಲಾಯಿತು. ಇದನ್ನು ನಂತರ ಅಲಹಾಬಾದ್ ಹೈಕೋರ್ಟ್ ಕೂಡ ಎತ್ತಿ ಹಿಡಿದರೂ, 2017ರಲ್ಲಿ, ದೇಶದ ಸರ್ವೋಚ್ಚ ನ್ಯಾಯಾಲಯ "ಭಾರತದ ಸಂವಿಧಾನದ ಜಾತ್ಯತೀತ ಹಂದರವನ್ನು ಅಲುಗಾಡಿಸುವ ಅಪರಾಧಗಳನ್ನು 25 ವರ್ಷಗಳ ಹಿಂದೆ ಎಸಗಿದ್ದಾರೆ ಎಂಬ ಆರೋಪವಿದೆ" ಎನ್ನುತ್ತ ಅಡ್ವಾಣಿ ಮತ್ತು ಇತರ ಎಲ್ಲರ ಮೇಲೂ ಕ್ರಿಮಿನಲ್ ಪಿತೂರಿಯ ಆರೋಪವನ್ನು ಕೈಬಿಟ್ಟಿರುವ ಕ್ರಮವನ್ನು ರದ್ದು ಮಾಡಿತು, ಎರಡು ವರ್ಷಗಳ ಒಳಗೆ ಇದರ ವಿಚಾರಣೆಯನ್ನು ಮುಗಿಸಿ ತೀರ್ಪು ನೀಡಬೇಕು ಎಂದು ಆದೇಶಿಸಿತು. ಸಿಬಿಐ ಕೋರ್ಟ್ ಅದನ್ನು ಮಾಡಲಿಲ್ಲ. ಸುಪ್ರಿಂ ಕೋರ್ಟ್ ಸಿಬಿಐ ನ್ಯಾಯಾಧೀಶರ ಸೇವಾವಧಿಯನ್ನು ಸಪ್ಟಂಬರ್ 30, 2020ರ ವರೆಗೆ ವಿಸ್ತರಿಸಿತು. ಎರಡು ವಿಸ್ತರಣೆಗಳ ನಂತರ ಕೊನೆಗೂ ಈ ನ್ಯಾಯಾಧೀಶರು ಈ 'ತೀರ್ಪ'ನ್ನು ನೀಡಿದ್ದಾರೆ!

ವಾಸ್ತವವಾಗಿ ಇದು ತೀರ್ಪೇ ಅಲ್ಲ, ತನ್ನ ಎದುರಿದ್ದ ಕೇಸನ್ನು ವಿಲೇವಾರಿ ಮಾಡಿದ್ದಾರಷ್ಟೇ ಎಂದು ಕೆಲವು ನ್ಯಾಯವಿದರು ಟಿಪ್ಪಣಿ ಮಾಡಿದ್ದಾರೆ. ಸತ್ಯವನ್ನು ಕಂಡು ಹಿಡಿಯಬೇಕು ಎಂದು ನ್ಯಾಯಾಂಗಕ್ಕಿರಬೇಕಾದ ಆಕಾಂಕ್ಷೆ ಇಲ್ಲಿ ಕಾಣುತ್ತಿಲ್ಲ ಎಂದೂ ಅವರು ಹೇಳಿದ್ದಾರೆ.

ತೀರ್ಪು ಎಂಬ ಪ್ರಹಸನ–ನ್ಯಾ. ಲಿಬರ್‌ಹಾನ್

ನಿವೃತ್ತ ನ್ಯಾಯಮೂರ್ತಿ ಎಂ ಎಸ್ ಲಿಬರ್ಹಾನ್ ಬಾಬ್ರಿ ಮಸೀದಿ ಧ್ವಂಸದಲ್ಲಿ ಪಿತೂರಿಯೇನೂ ಇರಲಿಲ್ಲ, ಅದು ಆಕಸ್ಮಿಕವಾಗಿ ನಡೆದು ಹೋದ ಘಟನೆ ಎಂಬ ಈ ತೀರ್ಪು ಒಂದು ಪ್ರಹಸನವಲ್ಲದೆ ಬೇರೇನೂ ಅಲ್ಲ ಎಂದು ಸಾಕಷ್ಟು ಕಟುವಾಗಿಯೇ ಪ್ರತಿಕ್ರಿಯಿಸಿದ್ದಾರೆ.

ಕೇಂದ್ರ ಸರಕಾರ 1992ರಲ್ಲಿ ಈ ಧ್ವಂಸ ಕಾರ್ಯದ ನಂತರ ನ್ಯಾಯಮೂರ್ತಿ ಲಿಬರ್‌ಹಾನ್ ನೇತೃತ್ವದಲ್ಲಿ ಒಂದು ತನಿಖಾ ಆಯೋಗವನ್ನು ನೇಮಿಸಿತ್ತು. ಇದು 17 ವರ್ಷಗಳ ಕಾಲ ಸಿಗಬಹುದಾದ ಎಲ್ಲ ಸಾಕ್ಷ್ಯಗಳನ್ನು ಸಂಗ್ರಹಿಸಿ ಜೂನ್ 2009ರಲ್ಲಿ ಕೇಂದ್ರ ಸರಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿತ್ತು.

ಅದರ ಪ್ರಕಾರ 68 ವ್ಯಕ್ತಿಗಳು (ಇದರಲ್ಲಿ ಅಡ್ವಾಣಿ, ಜೋಷಿ, ಉಮಾಭಾರತಿ, ಕಲ್ಯಾಣ್ ಸಿಂಗ್ ಮುಂತಾದ 'ಘಟಾನುಘಟಿಗಳೂ ಸೇರಿದ್ದಾರೆ) ಬಾಬ್ರಿ ಮಸೀದಿ ಧ್ವಂಸದ ಮೊದಲು ಕೋಮು ವೈಷಮ್ಯವನ್ನು ಉಂಟುಮಾಡುವ ಅಪರಾಧ ಎಸಗಿದ್ದಾರೆ. ಆಗಿನ ಬಿಜೆಪಿ ಮುಖಂಡರು ಒಂದು ಪಿತೂರಿ ನಡೆಸಿದ್ದರು ಎಂಬುದಕ್ಕೆ ಗಟ್ಟಿಯಾದ ಸಾಕ್ಷ್ಯ ಇದೆ ಎಂದು ಆ ವರದಿ ಹೇಳಿತ್ತು.

ಸಿಬಿಐ ಸಲ್ಲಿಸಿದ ಆಡಿಯೊ ಮತ್ತು ವಿಡಿಯೊ ಸಾಕ್ಷ್ಯಗಳು ಪ್ರಾಮಾಣಿಕವಾದವುಗಳು ಎಂದು ವಿಚಾರಣೆಯ ವೇಳೆಯಲ್ಲಿ ತೀರ್ಮಾನಕ್ಕೆ ಬರುವುದು ಸಾಧ್ಯವಾಗಿಲ್ಲ ಎಂದು ತೀರ್ಪಿನಲ್ಲಿ ಹೇಳಲಾಗಿದೆ. ಆದರೆ ಈ ಆಡಿಯೊ ಮತ್ತು ವೀಡಿಯೊ ಒಟ್ಟು ಸಾಕ್ಷ್ಯಗಳಲ್ಲಿ ಒಂದು ಸಣ್ಣ ಪ್ರಮಾಣವಷ್ಟೇ, ಆಗಿನ ಬಿಜೆಪಿ ಮುಖಂಡರು ಒಂದು ಪಿತೂರಿ ನಡೆಸಿದ್ದರು ಎಂಬುದಕ್ಕೆ ಇನ್ನೂ ಗಟ್ಟಿಯಾದ ಸಾಕ್ಷ್ಯಗಳು ಹಲವಾರು ಇವೆ. ಕಮಿಷನ್‌ನ ವರದಿಯಲ್ಲಿ ಇಂತಹ ಅಸಂಖ್ಯ ಸಾಕ್ಷ್ಯಗಳು ದೊರೆಯುತ್ತವೆ. ನ್ಯಾಯಾಲಯ ತೀರ್ಮಾನಕ್ಕೆ ಬರುವ ಮೊದಲು ಅವನ್ನೆಲ್ಲ ಗಮನಕ್ಕೆ ತಗೊಂಡಿದೆಯೇ, ಅಥವ ಸಿಬಿಐಗೆ ಅವನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು ಎಂದಾದರೂ ಅನಿಸಿದೆಯೇ ನನಗೆ ಗೊತ್ತಿಲ್ಲ" ಎಂದು ನ್ಯಾಯಮೂರ್ತಿ ಲಿಬರ್‌ಹಾನ್ ಟಿಪ್ಪಣಿ ಮಾಡಿದ್ದಾರೆ.




ವ್ಯಂಗ್ಯಚಿತ್ರ ಕೃಪೆ: ಪಿ. ಮಹಮ್ಮದ್,

ವಿಚಾರಣೆ ಸರಿಯಾಗಿ ನಡೆದಿಲ್ಲ, ಅದಕ್ಕೆ ಕಾರಣಗಳ ಬಗ್ಗೆ ನಾನು ಟಿಪ್ಪಣಿ ಮಾಡಬಯಸುವುದಿಲ್ಲ, ಆದರೆ ತನಿಖೆ ಮತ್ತು ಅದನ್ನನುಸರಿಸಿ ಮಾಡಿದ್ದೆಲ್ಲ ಕೇವಲ ಪ್ರಹಸನ ಎಂದು ನ್ಯಾ. ಲಿಬರ್‌ಹಾನ್ 'ಔಟ್‌ಲುಕ್' ಪತ್ರಿಕೆಗೆ ಹೇಳಿದ್ದಾರೆ.

'ಅಪೀಲು ಹೋಗಬೇಕು, ಸಿಬಿಐ ಪಾತ್ರದ ತನಿಖೆಯಾಗಬೇಕು'"

ಬಾಬರಿ ಮಸೀದಿ ಕೆಡವಲು ಯಾವುದೇ ಸಂಚು ನಡೆದಿಲ್ಲ ಎಂದು ಹೇಳಿದರೆ ನಂಬಲು ಬಹಳ ಕಷ್ಟವಾಗುತ್ತದೆ. ನ್ಯಾಯಾಲಯ ಸುಮಾರು 500 ಸಾಕ್ಷಿಗಳನ್ನು ವಿಚಾರಣೆ ನಡೆಸಿದರೂ ಸಂಚು ನಡೆದಿದ್ದರ ಸುಳಿವು ಸಿಕ್ಕಿಲ್ಲ ಎಂದು ಹೇಳಿರುವುದು ನಿಜಕ್ಕೂ ದೊಡ್ಡ ಅಚ್ಚರಿ 'ಂದಿರುವ ಮಾಧವ ಗೋಡ್ಬೊಳೆ "ಎಲ್ಲ ಸಾಕ್ಷ್ಯಾಧಾರಗಳು ಇದ್ದರೂ, ಹಲವು ಪ್ರತ್ಯಕ್ಷ ಸಾಕ್ಷಿಗಳು ಸಾಕ್ಷ್ಯಗಳನ್ನು ಕೊಟ್ಟರೂ ತೀರ್ಪು ಆರೋಪಿಗಳ ಪರವಾಗಿ ಹೋಗಿದೆಯೆಂದರೆ ಇದರ ವಿರುದ್ಧ ಹೈಕೋರ್ಟಿನಲ್ಲಿ ಅಪೀಲು ಹಾಕಬೇಕು ಎಂದು ನಾನು ಭಾವಿಸುತ್ತೇನೆ. ಅದೇ ವೇಳೆಗೆ ಸಿಬಿಐನ ಪಾತ್ರದ ತನಿಖೆಯನ್ನೂ ಮಾಡಬೇಕಾಗಿದೆ. ಸರಕಾರೀ ಏಜೆನ್ಸಿಗಳಿಂದಲೇ ಪಿತೂರಿಯ ಬಗ್ಗೆ ವರದಿಗಳಿರುವಾಗ, ಅವನ್ನೆಲ್ಲ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆಯೇ ಇಲ್ಲವೇ ಎಂದು ನೋಡಬೇಕಾಗಿದೆ. ಹಾಗೆ ಮಾಡಿರದಿದ್ದರೆ, ಇಂತಹ ಕ್ರಿಮಿನಲ್ ನಿರ್ಲಕ್ಷ್ಯ ನಡೆಸಿದ ಸಿಬಿಐ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು" ಎಂದು ಹೇಳಿದ್ದಾರೆ.



ಈ ನಡುವೆ, ಪಿತೂರಿ ಇದೆಯೆಂಬುದಕ್ಕೆ ಸಾಕ್ಷ್ಯಗಳು ಇಲ್ಲ ಎಂದಿರುವ ತೀರ್ಪು, ಈ 32 ಮುಂದಿ ವಾಸ್ತವವಾಗಿ ಹಜನಜಂಗುಳಿಯನ್ನು ಸಮಾಧಾನ ಪಡಿಸಲು ಪ್ರಯತ್ನಿಸಿದರು. ಇದನ್ನು ಯಾವ ಸಾಕ್ಷ್ಯಾಧಾರದಲ್ಲಿ ಹೇಳಿದ್ದಾರೆ ಎಂಬ ಪ್ರಶ್ನೆ ಸಹಜವಾ.ಗಿಯೇ ಎದ್ದಿದೆ. ಈ ಫೋಟೋವಂತೂ ಖಂಡಿತ ಅದಕ್ಕೆ ಸಾಕ್ಷಿಯಾಗವುದಿಲ್ಲ!

ಇನ್ನು ಶುದ್ಧ "ಸಮಾಜ ಘಾತುಕ'ರು!

ಮಾಜಿ ಉಪಪ್ರಧಾನಿ ಎಲ್.ಕೆ.ಅಡ್ವಾಣಿಯವರು ಇದೊಂದು ಮಹತ್ವದ ತೀರ್ಪು ಎಂದು ಸ್ವಾಗತಿಸುತ್ತ ಇದು ರಾಮಜನ್ಮಭೂಮಿ ಆಂದೋಲನದ ಬಗ್ಗೆ ನನ್ನ ಮತ್ತು ನನ್ನ ಪಕ್ಷದ ನಂಬಿಕೆ ಮತ್ತು ಬದ್ಧತೆಯನ್ನು ಎತ್ತಿ ಹಿಡಿದಿದೆ ಎಂದಿದ್ದಾರೆ. ಏನಿದರ ಅರ್ಥ? ಬಹುಶ: ಈಗ ನಿವೃತ್ತರಾಗಿರುವ ನ್ಯಾಯಾಧೀಶರು ಇದಕ್ಕೆ ಉತ್ತರಿಸಬೇಕಾಗಿಲ್ಲ.

ಮುಂದುವರೆದು ತಮ್ಮ ಪಕ್ಷದ ಇತರೆಲ್ಲರೊಂದಿಗೆ ತನ್ನ ಪಕ್ಷದ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸಿದ ಅಡ್ವಾಣಿಯವರು ಈ ತೀರ್ಪಿನಲ್ಲಿ ಮಸೀದಿಯನ್ನು ಕೆಡವಿದ್ದಕ್ಕಾಗಿ 'ಸಮಾಜಘಾತುಕ'ರು ಎಂಬ ಬಿರುದು ಪಡೆದವರ ಬಗ್ಗೆ ಏನೂ ಹೇಳಲಿಲ್ಲ.

ಹಿಂದಿನ 25 ವರ್ಷಗಳ ಕಾಲ ಪ್ರತಿ ಡಿಸೆಂಬರ್ 6ರಂದು 'ಶೌರ್ಯದಿವಸ್' ಎಂದು ಇವರನ್ನು ಗೌರವಿಸಲಾಗುತ್ತಿತ್ತು. ಕಳೆದ ವರ್ಷ, ಅಯೋಧ್ಯಾತೀರ್ಪಿನ ಹಿನ್ನೆಲೆಯಲ್ಲಿ ವಿಹೆಚ್‌ಪಿಯ ಒಂದು ವಿಭಾಗ ಇನ್ನು ಮುಂದೆ ಈದಿನಾಚರಣೆ ಬೇಡ ಎಂದರಂತೆ. ಆದರೆ ಇನ್ನೊಂದು ವಿಭಾಗ ಈ ಆಚರಣೆಯನ್ನು ಮುಮದುವರೆಸಬೇಕು ಎಂದಿತ್ತು.

ಈಗ ಸಂಘಪರಿವಾರವೆಲ್ಲವೂ ಏಕಕಂಠದಿಂದ ಸ್ವಾಗತಿಸಿರುವ ಅಯೋಧ್ಯಾ ತೀರ್ಪು ಹೇಳಿದಂತೆ ಮಸೀದಿ ಧ್ವಾಂಸ ಮಾಡಿ 'ಕಾನೂನಿನ ಆಳ್ವಿಕೆಯ ಘೋರ ಉಲ್ಲಂಘನೆ' ಮಾಡಿದವರನ್ನು, ಮತ್ತು ಈಗ ಬಾಬ್ರಿ ಮಸೀದಿ ತೀರ್ಪು ಅವರೆಲ್ಲರೂ ಈ 32 ಮಂದಿ ಸಮಾಧಾನ ಪಡಿಸಿದರೂ ಕಿವಿಗೊಡದೆ ಧ್ವಂಸಕಾರ್ಯ ನಡೆಸಿದ 'ಸಮಾಜ ಘಾತಕರು' ಎಂದಿರುವಾಗಿ ಇನ್ನು ಮುಂದೆ 'ಶೌರ್ಯ ದಿವಸ್' ಆಚರಣೆ ಹೇಗಿರುತ್ತದೆ?

ಹಾಥ್ರಸ್ 'ಅಂತ್ಯ ಸಂಸ್ಕಾರ' ಮತ್ತು ಬಾಬ್ರಿ 'ತೀರ್ಪು' ಒಂದೇ ದಿನ ಬಂದದ್ದು ಕೇವಲ ಕಾಕತಾಳೀಯ? ಅಥವ 'ನ್ಯೂ ಇಂಡಿಯ'ದ ದ್ಯೋತಕಗಳು?



ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ

ಸಾಮ್ರಾಜ್ಯಶಾಹಿಯ ಕಾರ್ಯಸೂಚಿಯ ಜಾರಿಗೆ ಮೋದಿಯ ಕೃಷಿ ಮಸೂದೆಗಳು



ಭಾರತವು ತನ್ನ ರೈತರಿಂದ ಆಹಾರ ಧಾನ್ಯಗಳನ್ನು ಪೂರ್ವ ಘೋಷಿತ ಬೆಲೆಗಳಲ್ಲಿ ಖರೀದಿಸಬಾರದು ಎಂಬ ಸಾಮ್ರಾಜ್ಯಶಾಹಿಗಳ ಒತ್ತಡಗಳಿಗೆ ಭಾರತದ ಯಾವ ಸರ್ಕಾರವೂ ಇಷ್ಟೊಂದು ಹೆದರಿದ್ದಿಲ್ಲ. ಭಾರತದ ಬಿಗಿ ನಿಲುವಿನಿಂದಾಗಿಯೇ ಈ ಕುರಿತ ದೋಹಾ ಸುತ್ತಿನ ಮಾತು-ಕತೆಗಳು ಸ್ಥಗಿತವಾಗಿದ್ದವು. ಆದರೇನು ಮಾಡುವುದು, ಈ ಬಗ್ಗೆ ಸಾಮ್ರಾಜ್ಯಶಾಹಿಗಳಿಗೆ ಹೆದರುವ ಅಥವಾ ಈ ವಿಷಯದ ಬಗ್ಗೆ ಅಜ್ಞಾನಿಯಾಗಿರುವ ಸರ್ಕಾರವೊಂದನ್ನು ನಾವು ಮೊದಲ ಬಾರಿಗೆ ಕಾಣುತ್ತಿದ್ದೇವೆ. "ಕೃಷಿ ಮಾರುಕಟ್ಟೆಗಳ ಆಧುನೀಕರಣ", "ಇಪ್ಪತ್ತೊಂದನೇ ಶತಮಾನದ ತಂತ್ರಜ್ಞಾನ" ಮುಂತಾದವುಗಳ ಹೆಸರಿನಲ್ಲಿ, ತಲಾ ಧಾನ್ಯ ಉತ್ಪಾದನೆಯು ಇಳಿಯುತ್ತಿರುವ ಸನ್ನಿವೇಶದಲ್ಲಿ, ಲಭ್ಯವಿರುವ ಕೃಷಿ ಭೂಮಿಯನ್ನು ರಫ್ತು ಬೆಳೆಗಳತ್ತ ತಿರುಗಿಸುವ ಕ್ರಮವು ನಮ್ಮನ್ನು ವಸಾಹತುಶಾಹಿ ಯುಗಕ್ಕೆ ಮರಳಿಸುತ್ತದೆ. ವಾಸ್ತವವಾಗಿ, ಅದು ಸಾಮ್ರಾಜ್ಯಶಾಹಿ ಕಾರ್ಯಸೂಚಿಯನ್ನು ಜಾರಿಗೊಳಿಸುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಕಳೆದ ವಾರ ಸಂಸತ್ತಿನಲ್ಲಿ ಬಲವಂತವಾಗಿ ಅಂಗೀಕಾರ ಪಡೆದುಕೊಂಡಿರುವ ಎರಡು ಮಸೂದೆಗಳೂ ಊಹಿಸಲು ಸಾಧ್ಯವಿರುವ ಯಾವುದೇ ಅರ್ಥದಲ್ಲಿ ನೋಡಿದರೂ ಆಕ್ಷೇಪಾರ್ಹವಾಗಿರುವಂತವು. ಈ ವಿಧೇಯಕಗಳನ್ನು ಮತಕ್ಕೆ ಹಾಕಬೇಕೆಂದು ರಾಜ್ಯಸಭೆಯಲ್ಲಿ ಸದಸ್ಯರು ಒತ್ತಾಯ ಮಾಡಿದರೂ ಸಹ ಅವುಗಳನ್ನು ಮತಕ್ಕೆ ಹಾಕದೇ ಧ್ವನಿಮತದ ಮೂಲಕ ಅಂಗೀಕರಿಸಲಾಗಿದೆ ಎಂದು ಘೋಷಿಸಿದ ಕ್ರಮವು ಸಂಪೂರ್ಣವಾಗಿ ಪ್ರಜಾಪ್ರಭುತ್ವ ವಿರೋಧಿಯಾಗಿದೆ. ಸಂವಿಧಾನದ ಏಳನೇ ಶೆಡ್ಯೂಲ್ ಅಡಿಯಲ್ಲಿ ರಾಜ್ಯಗಳ ವ್ಯಾಪ್ತಿಗೆ ಬರುವ ಕೃಷಿ ಮಾರುಕಟ್ಟೆ ವ್ಯವಸ್ಥೆಗೆ ಸಂಬಂಧಿಸಿದ ವಿಷಯದಲ್ಲಿ ಕೆಲವು ಮೂಲಭೂತ ಬದಲಾವಣೆಗಳನ್ನು ಕೇಂದ್ರ ಸರ್ಕಾರವು ಏಕಪಕ್ಷೀಯವಾಗಿ ಮಾಡಿರುವ ಕ್ರಮವು ಒಕ್ಕೂಟ ವ್ಯವಸ್ಥೆಗೆ ಕೊಟ್ಟಿರುವ ಒಂದು ಭಾರೀ ಹೊಡೆತವಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಬಂಡವಾಳಶಾಹಿ ಮಾರುಕಟ್ಟೆಯ ಹಿಡಿತಕ್ಕೆ ಸಿಕ್ಕಿ ನಲುಗಿದ್ದ ಮತ್ತು 1930ರ ದಶಕದ ಮಹಾ ಕುಸಿತದ ಕಾಲದಲ್ಲಿ ನುಚ್ಚುನೂರಾಗಿದ್ದ ರೈತರಿಗೆ ಅಂತಹ ಪರಿಸ್ಥಿತಿಗಳಿಂದ ಅವರನ್ನು ರಕ್ಷಿಸುವುದಾಗಿ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಅವರಿಗೆ ಕೊಟ್ಟ ಭರವಸೆಗೆ ದ್ರೋಹ ಎಸಗಲಾಗಿದೆ. ಈ ಮಸೂದೆಗಳು ಕೋಟ್ಯಂತರ ಸಣ್ಣ ರೈತರನ್ನು ಬೆರಳೆಣಿಕೆಯ ಖಾಸಗಿ ಖರೀದಿದಾರರ ಕ್ರಯಸ್ವಾಮ್ಯ ಶೋಷಣೆಗೆ ಈಡು ಮಾಡುತ್ತವೆ.

ಸರಕಾರವು ನಿಗದಿಪಡಿಸುವ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಪದ್ಧತಿಯು ಮುಂದುವರಿಯಲಿದೆ ಮತ್ತು ರೈತರು ಖಾಸಗಿ ಖರೀದಿದಾರರ ಕ್ರಯಸ್ವಾಮ್ಯ ಶೋಷಣೆಗೆ ಒಳಗಾಗಲು ಬಿಡುವುದಿಲ್ಲ ಎಂದು ಮೋದಿ ಹೇಳುತ್ತಿದ್ದಾರೆ. ಆದರೆ, ಈ ಬಗ್ಗೆ ಮಸೂದೆಯಲ್ಲಿ ಏನನ್ನೂ ಹೇಳಿಲ್ಲ. ಸ್ವಾಮಿನಾಥನ್ ಸಮಿತಿಯ ಶಿಫಾರಸಿನ ಪ್ರಕಾರ, ಕೃಷಿ ಉತ್ಪಾದನೆಗೆ ತಗಲುವ ಖರ್ಚುಗಳಿಗೆ (ಸಿ2) ಅದರ ಶೇ.50ರಷ್ಟನ್ನು ಸೇರಿಸಿ ಲೆಕ್ಕಹಾಕಿದ ಮೊತ್ತವನ್ನು ಕನಿಷ್ಠ ಬೆಂಬಲ ಬೆಲೆ ಎಂಬ ಪರಿಗಣನೆಯನ್ನು ಈ ಮಸೂದೆಯಲ್ಲಿ ಅಳವಡಿಸಲು ಸರ್ಕಾರವು ನಿರಾಕರಿಸಿದೆ. ಇದು ಸರ್ಕಾರದ ದುರುದ್ದೇಶವನ್ನು ಬಯಲುಮಾಡುತ್ತದೆ. ವಸಾಹತುಶಾಹಿ ಆಳ್ವಿಕೆಯ ಕಾಲದಲ್ಲಿ ಕುಪ್ರಸಿದ್ಧ ಬೆಲೆ ಏರಿಳಿತಗಳಿಗೆ ಪಕ್ಕಾಗಿದ್ದ ರೈತರನ್ನು ಮತ್ತೊಮ್ಮೆ ಅದೇ ರೀತಿಯ ಪರಿಸ್ಥಿತಿಗೆ ತಳ್ಳಲಾಗಿದೆ. ಸಾಲದ ಬಲೆಯಿಂದ ಹೊರಬರಲಾರದೆ ನಿರ್ಗತಿಕತನಕ್ಕೆ ಇಳಿದ ರೈತರು ಅದರ ವಿರುದ್ಧ ಹೋರಾಟ ಮಾಡುತ್ತಿರುವುದು ಸರಿಯಾಗಿಯೇ ಇದೆ.

ರೈತರ ಸ್ಥಿತಿ-ಗತಿಗಳ ಬಗ್ಗೆ ಚರ್ಚೆ ನಡೆದಿದೆ, ನಿಜ. ಆದರೆ, ಒಂದು ಮಹತ್ವದ ವಿಷಯವಾದ ದೇಶದ ಆಹಾರ ಭದ್ರತೆಯು ಈ ಚರ್ಚೆಯಲ್ಲಿ ಕಾಣೆಯಾಗಿದೆ. ದೇಶದ ಆಹಾರ ಭದ್ರತೆಯ ಪ್ರಶ್ನೆ ಬಂದ ಕೂಡಲೇ ಸಾಮ್ರಾಜ್ಯಶಾಹಿಯ ಕಾಲದಲ್ಲಿದ್ದ ಪರಿಸ್ಥಿತಿಯು ಕಣ್ಮುಂದೆ ಬರುತ್ತದೆ.

ಭಾರತದಂತಹ ಉಷ್ಣ ವಲಯದ ದೇಶಗಳು ಆಹಾರ-ಆಮದು-ಅವಲಂಬಿತವಾಗಿರಬೇಕು ಮತ್ತು ಶೀತ ಪ್ರದೇಶದ ಸಾಮ್ರಾಜ್ಯಶಾಹಿ ದೇಶಗಳು ಬೆಳೆಯಲು ಸಾಧ್ಯವಿಲ್ಲದ ಕಾಫಿ, ಟೀ, ಹಣ್ಣುಗಳು, ಬೇಳೆ ಕಾಳು, ಎಣ್ಣೆ ಬೀಜಗಳು, ತರಕಾರಿ ಮುಂತಾದವುಗಳನ್ನು ಬೆಳೆಯಲು ತಮ್ಮ ಭೂ ಪ್ರದೇಶವನ್ನು ಬಳಸಿಕೊಳ್ಳಬೇಕು ಎಂದು ಸಾಮ್ರಾಜ್ಯಶಾಹಿಯು ಬಹಳ ಕಾಲದಿಂದಲೂ ಆಗ್ರಹಿಸುತ್ತಿದೆ. ಅಂದರೆ, ಉಷ್ಣವಲಯ ಮತ್ತು ಅರೆ ಉಷ್ಣವಲಯದ ದೇಶಗಳು ತಮ್ಮ ಆಹಾರ ಭದ್ರತೆಯನ್ನು ತ್ಯಜಿಸಬೇಕು ಎಂಬುದು ಈ ಆಗ್ರಹದ ಅರ್ಥ.

ಭಾರತದಂತಹ ದೇಶದಲ್ಲಿ ಜನರಿಗೆ ಆಹಾರ ಭದ್ರತೆ ಇರಬೇಕು ಎಂದಾದರೆ, ಆಹಾರ ಪದಾರ್ಥಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಬೇಕಾದ ಅಗತ್ಯವಿದೆ. ಆಹಾರ ಪದಾರ್ಥಗಳ ಆಮದು ಸಲ್ಲದು. ನಮ್ಮ ಆಹಾರವನ್ನು ನಾವೇ ಉತ್ಪಾದಿಸಿಕೊಳ್ಳುವುದರ ಬದಲಾಗಿ ಅದನ್ನು ಆಮದು ಮಾಡಿಕೊಳ್ಳಬಾರದು ಎಂಬುದಕ್ಕೆ ಹಲವಾರು ಕಾರಣಗಳಿವೆ. ಮೊದಲನೆಯದಾಗಿ, ಅಪಾರ ಜನಸಂಖ್ಯೆಯುಳ್ಳ ಭಾರತವು ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳಲು ಜಾಗತಿಕ ಮಾರುಕಟ್ಟೆಗೆ ಹೋದಾಗಲೆಲ್ಲಾ, ಜಾಗತಿಕ ಬೆಲೆಗಳು ವಿಪರೀತವಾಗಿ ಏರುತ್ತವೆ. ಹಾಗಾಗಿ ಆಮದುಗಳು ದುಬಾರಿಯಾಗುತ್ತವೆ.

ಎರಡನೆಯದಾಗಿ, ಅಂತಹ ಆಮದುಗಳಿಗೆ ಬೇಕಾಗುವಷ್ಟು ವಿದೇಶಿ ವಿನಿಮಯದ ಸಂಗ್ರಹವು ಇಲ್ಲದೇ ಇರಬಹುದು ಎಂಬುದರ ಹೊರತಾಗಿಯೂ, ಅಷ್ಟೊಂದು ದುಬಾರಿ ಬೆಲೆ ತೆತ್ತು ಆಮದಾದ ಆಹಾರ ಪದಾರ್ಥಗಳನ್ನು ಕೊಳ್ಳುವ ಶಕ್ತಿ ಜನರಲ್ಲಿ ಇಲ್ಲದೇ ಇರಬಹುದು ಎಂಬ ಅಂಶವೂ ಇದೆ. ಮೂರನೆಯದಾಗಿ, ಸಾಮ್ರಾಜ್ಯಶಾಹಿ ದೇಶಗಳ ಬಳಿ ತಮಗೆ ಬೇಕಾದಷ್ಟು ಧಾನ್ಯಗಳನ್ನು ಬಳಸಿಕೊಂಡ ನಂತರವೂ ಹೆಚ್ಚುವರಿಯಾಗಿ ಉಳಿದ ದಾಸ್ತಾನುಗಳನ್ನು ದುಬಾರಿ ಬೆಲೆ ತೆತ್ತು ಕೊಂಡುಕೊಳ್ಳಲೂ ಸಹ ಸಾಮ್ರಾಜ್ಯಶಾಹಿಯ ಮರ್ಜಿಗೆ ಒಳಗಾಗಬೇಕಾಗುತ್ತದೆ. ವಾಸ್ತವವಾಗಿ, ಒಂದು ನಿರ್ಣಾಯಕ ಸಂದರ್ಭದಲ್ಲಿ ಒಂದು ದೇಶಕ್ಕೆ ಬೇಕಾಗುವ ಆಹಾರ ಪದಾರ್ಥಗಳನ್ನು ಮಾರಲು ನಿರಾಕರಿಸುವ ಮೂಲಕ, ಆ ದೇಶವು ತನಗೆ ಶರಣಾಗುವಂತೆ ಸಾಮ್ರಾಜ್ಯಶಾಹಿಯು ನೋಡಿಕೊಳ್ಳುತ್ತದೆ.

ಈ ಎಲ್ಲ ಅಂಶಗಳು ಅಮೂರ್ತವಲ್ಲ ಅಥವಾ ಕಟ್ಟು ಕತೆಯೂ ಅಲ್ಲ. 1950ರ ದಶಕದಲ್ಲಿ, 'ಶಾಂತಿಗಾಗಿ ಆಹಾರ' ಎಂಬ ಕಾರ್ಯಕ್ರಮದ ಹೆಸರಿನಲ್ಲಿ ಬಡ ದೇಶಗಳಿಗೆ ಆಹಾರ ಧಾನ್ಯಗಳನ್ನು ಮಾರುವ ಸಲುವಾಗಿ ಅಮೇರಿಕಾ ದೇಶವು ರೂಪಿಸಿದ ಪಿಎಲ್-480 ಎಂಬ ಕಾನೂನಿನ ಅಡಿಯಲ್ಲಿ ಭಾರತವು ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳುತ್ತಿತ್ತು. ಬಿಹಾರವು 1965-66 ಮತ್ತು 1966-67ರಲ್ಲಿ ಎರಡು ವರ್ಷ ಸತತವಾಗಿ ಬರಗಾಲದ ಪರಿಸ್ಥಿತಿಯನ್ನು ಎದುರಿಸಿದಾಗ, ಭಾರತವು ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳಲು ವಾಸ್ತವಿಕವಾಗಿ ಅಮೇರಿಕಾದ ಮುಂದೆ ಮಂಡಿಯೂರಿತ್ತು. ಅಕ್ಷರಶಃ ಅದೊಂದು "ಹಡಗಿನಿಂದ ಅಡುಗೆ ಮನೆಗೆ" ಆಹಾರ ಕೊಂಡೊಯ್ಯುವ ಪ್ರಸಂಗವಾಗಿತ್ತು. ಆಗ, ಪ್ರಧಾನಿ ಇಂದಿರಾ ಗಾಂಧಿಯವರು ಅಂದಿನ ಆಹಾರ ಸಚಿವ ಜಗಜೀವನ್ ರಾಮ್ ಅವರನ್ನು ಆಹಾರ ಸ್ವಾವಲಂಬನೆಯ ಕಾರ್ಯಕ್ರಮವನ್ನು ಚುರುಕುಗೊಳಿಸುವಂತೆ ಕೇಳಿಕೊಂಡರು. ಪರಿಣಾಮವಾಗಿ, ಹಸಿರು ಕ್ರಾಂತಿಯ ಆಗಮನವಾಯ್ತು. ತರುವಾಯ, ಪ್ರತಿಯೊಬ್ಬರಿಗೂ ಸಾಕಾಗುವಷ್ಟು ಆಹಾರ ಒದಗಿಸುವ ಅರ್ಥದಲ್ಲಿ ಸ್ವಾವಲಂಬಿ ಅಲ್ಲದಿದ್ದರೂ, ದೇಶವು, ಕನಿಷ್ಠ ಪಕ್ಷ, ಬೆಳೆ ತೆಗೆಯುವ ಅರ್ಥದಲ್ಲಿ ಸ್ವಾವಲಂಬಿಯಾಗಿದೆ. ಈಗ ದೇಶವು ಆಮದು-ಅವಲಂಬಿತವಾಗಿಲ್ಲ ಮಾತ್ರವಲ್ಲ, ಅದಕ್ಕೆ ವ್ಯತಿರಿಕ್ತವಾಗಿ, ನಮ್ಮ ಜನರು ಪ್ರಪಂಚದಲ್ಲಿಯೇ ಅತಿ ಹೆಚ್ಚಿನ ಮಟ್ಟದ ಹಸಿವೆಯಿಂದ ಬಳಲುತ್ತಿದ್ದರೂ ಸಹ, ಪ್ರತಿ ವರ್ಷವೂ ನಿರಂತರವಾಗಿ ಮತ್ತು ಗಣನೀಯ ಪ್ರಮಾಣದಲ್ಲಿ ಆಹಾರ ಧಾನ್ಯಗಳು ರಫ್ತಾಗುತ್ತಿವೆ.

ದೇಶದಲ್ಲಿ ನಾವು ಕಂಡ ಈ ಪರಿಸ್ಥಿತಿಗೆ ಬದಲಾಗಿ, ಆಫ್ರಿಕಾದಲ್ಲಿ ಮತ್ತೊಂದು ಪರಿಸ್ಥಿತಿ ಕಾಣಸಿಗುತ್ತದೆ. ಆಹಾರ ಧಾನ್ಯಗಳ ದೇಶೀಯ ಉತ್ಪಾದನೆಯನ್ನು ಕೈಬಿಟ್ಟು ರಫ್ತು ಬೆಳೆಗಳತ್ತ ಹೊರಳುವಂತೆ ಸಾಮ್ರಾಜ್ಯಶಾಹಿಯು ಆಫ್ರಿಕಾವನ್ನು ಪುಸಲಾಯಿಸಿತು. ಆದರೆ, ಇತ್ತೀಚಿನ ದಿನಗಳಲ್ಲಿ ಆಫ್ರಿಕಾದಲ್ಲಿ ಮತ್ತೆ ಮತ್ತೆ ಬರಗಾಲದ ಪರಿಸ್ಥಿತಿ ಉಂಟಾಗುತ್ತಿರುವ ವಿದ್ಯಮಾನವು ಎಲ್ಲರಿಗೂ ತಿಳಿದದ್ದೇ.

1966-67ರ ಕಹಿ ಅನುಭವದ ನಂತರ, ರೈತರಿಂದ ಧಾನ್ಯಗಳನ್ನು ಕೊಳ್ಳುವ ಕನಿಷ್ಠ ಬೆಂಬಲ ಬೆಲೆಯ ಘೋಷಣೆ, ಅಂತಹ ಬೆಲೆಗಳ ಮಟ್ಟದಲ್ಲಿ ಧಾನ್ಯಗಳ ಖರೀದಿ, ಧಾನ್ಯಗಳ ಸಂಗ್ರಹಣೆ, ಧಾನ್ಯಗಳ ವಿತರಣಾ ಬೆಲೆ, ಒಂದು ಸಾರ್ವಜನಿಕ ವಿತರಣಾ ವ್ಯವಸ್ಥೆ, ಸಬ್ಸಿಡಿ ದರದಲ್ಲಿ ಧಾನ್ಯಗಳ ಮಾರಾಟ ಇಂತಹ ಒಂದು ವಿಸ್ತೃತ ವ್ಯವಸ್ಥೆಯನ್ನು ಸರ್ಕಾರವು ರೂಪಿಸಿತ್ತು. ಈ ವ್ಯವಸ್ಥೆಯು ರೈತರ ಮತ್ತು ಗ್ರಾಹಕರ ಹಿತಾಸಕ್ತಿಗಳನ್ನು ಕಾಪಾಡಿತ್ತು. ಮತ್ತು, ಆಮದುಗಳ ಅಗತ್ಯವಿಲ್ಲದೇ ದೇಶದ ಅಗತ್ಯವನ್ನು ಪೂರೈಸುವಷ್ಟು ಆಹಾರ ಧಾನ್ಯಗಳನ್ನು ಬೆಳೆಯುವಂತೆ ರೈತರಿಗೆ ಪ್ರೋತ್ಸಾಹ ಒದಗಿಸಿತ್ತು. ಈ ವ್ಯವಸ್ಥೆಯು ಮೂಲತಃ ನವಉದಾರೀಕರಣಕ್ಕೆ ವಿರುದ್ಧವಾಗಿದೆ. ಅದ್ದರಿಂದಲೇ ಈ ವ್ಯವಸ್ಥೆಯನ್ನು ಇಂಚು ಇಂಚಾಗಿ ಕತ್ತರಿಸಿ ಹಾಕುವ ಪ್ರಯತ್ನಗಳು ಆರಂಭವಾದವು. 1990ರ ದಶಕದ ಮಧ್ಯಭಾಗದಲ್ಲಿ ಬಡತನ ರೇಖೆಗಿಂತ ಕೆಳಗಿನವರು (ಬಿಪಿಎಲ್) ಮತ್ತು ಬಡತನ ರೇಖೆಗಿಂತ ಮೇಲಿರುವವರು(ಎಪಿಎಲ್) ಎಂಬುದಾಗಿ ಜನರನ್ನು ವಿಭಜಿಸಿ, ಬಡವರಿಗೆ ಮಾತ್ರ ಸಬ್ಸಿಡಿ ದರದಲ್ಲಿ ಆಹಾರ ಧಾನ್ಯಗಳನ್ನು ವಿತರಿಸುವ ಕ್ರಮವನ್ನು ಅನುಸರಿಸಲಾಗಿದೆ. ಈ ಕೊರತೆಗಳ ಹೊರತಾಗಿಯೂ, ಇಂತಹ ಒಂದು ಏರ್ಪಾಟಿನಿಂದಾಗಿಯೇ ದೇಶವು ಆಹಾರಕ್ಕಾಗಿ ಯಾರ ಮುಂದೆಯೂ ಮಂಡಿಯೂರುವ ಪರಿಸ್ಥಿತಿ ಬರಲಿಲ್ಲ.

ಇಂತಹ ಒಂದು ವ್ಯವಸ್ಥೆಯನ್ನು ಕಳಚಿಹಾಕುವಲ್ಲಿ ಸಾಮ್ರಾಜ್ಯಶಾಹಿಯು ಹರ ಸಾಹಸ ಮಾಡಿದೆ. ಇಂತಹ ಪ್ರಯತ್ನಗಳ ಪೈಕಿ, ವಿಶ್ವ ವ್ಯಾಪಾರ ಸಂಸ್ಥೆಯ ದೋಹಾ ಸುತ್ತಿನ ಮಾತುಕತೆಯಲ್ಲಿ, ಭಾರತವು ತನ್ನ ರೈತರಿಂದ ಆಹಾರ ಧಾನ್ಯಗಳನ್ನು ಪೂರ್ವ ಘೋಷಿತ ಬೆಲೆಗಳಲ್ಲಿ ಖರೀದಿಸುವ ಕ್ರಮವು ಮುಕ್ತ ವ್ಯಾಪಾರದ ತತ್ವಗಳಿಗೆ ವಿರುದ್ಧವಾಗಿರುವುದರಿಂದ ಅದನ್ನು ಸಡಿಲಿಸಬೇಕು ಎಂದು ಒತ್ತಾಯಿಸಿದ ಅಮೆರಿಕಾದ ಪ್ರಯತ್ನವು ಎದ್ದುಕಾಣುತ್ತದೆ. ಸಾಮ್ರಾಜ್ಯಶಾಹಿಗಳ ಇಂತಹ ಒತ್ತಡಗಳಿಗೆ ಭಾರತದ ಯಾವ ಸರ್ಕಾರವೂ ಇಷ್ಟೊಂದು ಹೆದರಿದ್ದಿಲ್ಲ. ಭಾರತದ ಬಿಗಿ ನಿಲುವಿನಿಂದಾಗಿಯೇ ದೋಹಾ ಸುತ್ತಿನ ಮಾತು-ಕತೆಗಳು ಸ್ಥಗಿತವಾಗಿದ್ದವು. ಆದರೇನು ಮಾಡುವುದು, ಈ ಬಗ್ಗೆ ಸಾಮ್ರಾಜ್ಯಶಾಹಿಗಳಿಗೆ ಹೆದರುವ ಅಥವಾ ಈ ವಿಷಯದ ಬಗ್ಗೆ ಅಜ್ಞಾನಿಯಾಗಿರುವ ಸರ್ಕಾರವೊಂದನ್ನು ನಾವು ಮೊದಲ ಬಾರಿಗೆ ಕಾಣುತ್ತಿದ್ದೇವೆ. "ಕೃಷಿ ಮಾರುಕಟ್ಟೆಗಳ ಆಧುನೀಕರಣ", "ಇಪ್ಪತ್ತೊಂದನೇ ಶತಮಾನದ ತಂತ್ರಜ್ಞಾನ" ಮುಂತಾದವುಗಳ ಹೆಸರಿನಲ್ಲಿ, ತಲಾ ಧಾನ್ಯ ಉತ್ಪಾದನೆಯು ಇಳಿಯುತ್ತಿರುವ ಸನ್ನಿವೇಶದಲ್ಲಿ, ಲಭ್ಯವಿರುವ ಕೃಷಿ ಭೂಮಿಯನ್ನು ರಫ್ತು ಬೆಳೆಗಳತ್ತ ತಿರುಗಿಸುವ ಕ್ರಮವು ನಮ್ಮನ್ನು ವಸಾಹತುಶಾಹಿ ಯುಗಕ್ಕೆ ಮರಳಿಸುತ್ತದೆ. ವಾಸ್ತವವಾಗಿ, ಅದು ಸಾಮ್ರಾಜ್ಯಶಾಹಿ ಕಾರ್ಯಸೂಚಿಯನ್ನು ಜಾರಿಗೊಳಿಸುತ್ತದೆ.

ಹೊಸ ಕೃಷಿ ಮಾರುಕಟ್ಟೆ ನೀತಿಯ ತಕ್ಷಣದ ಫಲಾನುಭವಿಗಳೆಂದರೆ, ಅಂಬಾನಿಗಳು ಮತ್ತು ಅದಾನಿಗಳು. ಗುತ್ತಿಗೆ ಕೃಷಿ ವ್ಯವಸ್ಥೆಗೆ ಅವರು ಕಾಲಿಡುತ್ತಿರುವುದು ಆಹಾರ ಧಾನ್ಯಗಳನ್ನು ಬೆಳೆಯಲಿಕ್ಕಲ್ಲ. ಹೂವು, ಹಣ್ಣು, ತರಕಾರಿ ಮುಂತಾದ ಬೆಳೆಗಳಿಗಾಗಿ. ಈ ಬೆಳೆಗಳನ್ನು ಸಂಸ್ಕರಿಸಿ ಅವುಗಳನ್ನು ದೇಶೀಯ ಮಾರುಕಟ್ಟೆಯಲ್ಲಿ ಮಾತ್ರವಲ್ಲದೆ, ಬೇರೆ ದೇಶಗಳಿಗೂ ರಫ್ತು ಮಾಡುತ್ತಾರೆ. ಗುತ್ತಿಗೆ ಕೃಷಿಯ ಒಂದು ನೇರ ಪರಿಣಾಮವೆಂದರೆ, ಆಹಾರ ಧಾನ್ಯಗಳ ಬದಲಿಗೆ ಹೆಚ್ಚು ಹಣ ಎಣಿಸುವ ಬೆಳೆಗಳನ್ನು

ಪುಟ 14 ನೋಡಿ



ಭೂಮಿಯು ಒಂದು ವಿರಳ ಸಂಪನ್ಮೂಲವಾಗಿರುವ ಕಾರಣದಿಂದಾಗಿ, ಭೂ ಬಳಕೆಯನ್ನು ಸಾಮಾಜಿಕ ನಿಯಂತ್ರಣಕ್ಕೆ ಒಳಪಡಿಸಬೇಕು., ಸಾಮಾಜಿಕ ನಿಯಂತ್ರಣಕ್ಕೆ ಒಳಪಡಿಸಿದ್ದರೂ ಸಹ, ಭೂಮಿಯು ರೈತರ ಕೈಯಲ್ಲಿರುವ ಕಾರಣದಿಂದಾಗಿ, ಅವರ ಹಿತಾಸಕ್ತಿಯನ್ನು ಕಾಪಾಡಬೇಕಾಗುತ್ತದೆ. ಆದ್ದರಿಂದ, ಅವರಿಗೆ ಲಾಭದಾಯಕ ಬೆಲೆ ಸಿಗಬೇಕು. ಅದನ್ನು ಈಗಿರುವ ಏರ್ಪಾಟು ಸಾಧಿಸಲು ಪ್ರಯತ್ನಿಸಿದೆ. ಈ ಪ್ರಯತ್ನವನ್ನು ಈಗಿನ ಸರ್ಕಾರವು ನಾಶಪಡಿಸಲು ಬಯಸುತ್ತದೆ. ಈಗಿರುವ ಏರ್ಪಾಟುಗಳಲ್ಲಿ ಏನೇ ಲೋಪ ದೋಷಗಳಿದ್ದರೂ ಅವುಗಳನ್ನು ಈ ಏರ್ಪಾಟಿನ ಪರಿಮಿತಿಯೊಳಗೇ ಸರಿಪಡಿಸಿಕೊಳ್ಳಬೇಕು. ಭೂ ಬಳಕೆಯನ್ನು ಸಾಮಾಜಿಕ ನಿಯಂತ್ರಣಕ್ಕೆ ಒಳಪಡಿಸಬೇಕು ಎಂಬುದರ ಅರಿವಿಲ್ಲದ ಮತ್ತು ಮೂರ್ಖತನದೊಂದಿಗೆ ನಂಟು ಬೆಳಸಿರುವ ಬಿಜೆಪಿ ಸರ್ಕಾರವು ಇಂತಹ ಒಂದು ಏರ್ಪಾಟನ್ನು ನಾಶಮಾಡಲು ಹೊರಟಿದೆ. ಸಾಮ್ರಾಜ್ಯಶಾಹಿಯು ಇಂತಹ ವಿನಾಶವನ್ನು ಬಯಸುತ್ತದೆ. ಬಿಜೆಪಿ ಸರ್ಕಾರವು ಅದನ್ನು ನಿರಾಯಾಸವಾಗಿ ಮಾಡುತ್ತಿದೆ.

ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಗೆ ಆಗ್ರಹಿಸಿ ಎಸ್‌ಎಫ್‌ಐ ನಿಂದ ಪ್ರತಿಭಟನೆ

ಉತ್ತರ ಪ್ರದೇಶದ ಹತ್ರಾಸ್ ಜಿಲ್ಲೆಯಲ್ಲಿ ನಡೆದ ಅತ್ಯಾಚಾರ ಮತ್ತು ಕೊಲೆ ಆರೋಪಗಳಿಗೆ ಸೂಕ್ತ ಶಿಕ್ಷೆಗೆ ಆಗ್ರಹಿಸಿ ಗಂಗಾವತಿ ಉಪಾತಹಶಿಲ್ದಾರ ಮಂಜುನಾಥ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಎಸ್‌ಎಫ್‌ಐ ರಾಜ್ಯ ಅಧ್ಯಕ್ಷರ ಅಮರೇಶ ಕಡಗದ ದೇಶದಾದ್ಯಂತ ವಿದ್ಯಾರ್ಥಿನಿಯರ ಮತ್ತು ಮಹಿಳೆಯರ ಮೇಲೆ ಅತ್ಯಾಚಾರ, ದೌರ್ಜನ್ಯ, ದಬ್ಬಾಳಿಕೆ ಹಾಗೂ ಕ್ರೌರ್ಯದ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿವೆ. ಇದನ್ನು ನಿಯಂತ್ರ ಮಾಡುವಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಸಂಬಂಧಿಸಿದ ಇಲಾಖೆಗಳು ಸಂಪೂರ್ಣ ವಿಫಲವಾಗಿವೆ, ದೇಶದಲ್ಲಿ ಪ್ರತಿದಿನ 87 ಅತ್ಯಾಚಾರ ಪ್ರಕರಣಗಳು ದಾಖಲಾಗುತ್ತವೆ 2019 ರಲ್ಲಿ ಮಹಿಳೆಯರ ವಿರುದ್ಧ ನಡೆಯುವ ಅಪರಾಧ ಪ್ರಕರಣಗಳಲ್ಲಿ ದೇಶದಲ್ಲಿ 405861 ಪ್ರಕರಣಗಳು ದಾಖಲಾಗಿವೆ ಎಂದು ನ್ಯಾಷನಲ್ ರೆಕಾರ್ಡ್ ಬ್ಯುರೋದ ವರದಿ ತಿಳಿಸಿದೆ ಅಲ್ಲದೆ ದೇಶದಲ್ಲಿ ಅತ್ಯಾಚಾರ ಪ್ರಕರಣ ವರದಿಯಲ್ಲಿ ಉತ್ತರ ಪ್ರದೇಶ



ರಾಜ್ಯ ಎರಡನೇ ಸ್ಥಾನದಲ್ಲಿದೆ ಎಂದರು.

ದೆಹಲಿ ನಿರ್ಭಯಾ ಪ್ರಕರಣ, ಆಶೀಫಾಳ ಕಥುವಾ ಪ್ರಕರಣ, ಉತ್ತರ ಪ್ರದೇಶದ ಉನ್ನಾವೋ ಮತ್ತು ಹೈದ್ರಾಬಾದಿನ ವೈದ್ಯಕೀಯ ವಿದ್ಯಾರ್ಥಿನಿಯ ಅತ್ಯಾಚಾರ ಮತ್ತು ಕೊಲೆ ಪ್ರಕರಣ ಮಾಸುವ ಮುನ್ನವೇ ಇಡೀ ನಾಗರಿಕ ಸಮಾಜವೆ ತಲೆ ತಗ್ಗಿಸುವಂತ ಅಮಾನವೀಯ ಮತ್ತು ಕ್ರೂರವಾದ ಅತ್ಯಾಚಾರ ಮಾಡಿ ಕೊಲೆ ಪ್ರಕರಣವು ಉತ್ತರ ಪ್ರದೇಶದ ಹತ್ರಾಸ್ ನಲ್ಲಿ ನಡೆದಿದೆ ದಲಿತ ಸಮುದಾಯಕ್ಕೆ ಸೇರಿದ ಮನೀಶಾ ಎಂಬ 19 ವಯಸ್ಸಿನ ವಿದ್ಯಾರ್ಥಿನಿಯ ಮೇಲೆ ನಾಲ್ವರು ದುಷ್ಕರ್ಮಿಗಳು ಸಾಮೂಹಿಕ ಅತ್ಯಾಚಾರ ಮಾಡಿ, ಚಿತ್ರ ಹಿಂಸೆ ನೀಡಿ ಸಾಕ್ಷಿ ನಾಶಕ್ಕಾಗಿ ನಾಲಿಗೆಯನ್ನು ಕತ್ತರಿಸಿ ಕೊಲೆಗೆ ಯತ್ನವನ್ನು ಮಾಡಿದ್ದಾರೆ.

ವಾರದ ಬಳಿಕ ನಿನ್ನೆ ಮನೀಶಾ ದೆಹಲಿಯ ಆಸ್ಪತ್ರೆ ಯಲ್ಲಿ ಸಾವನ್ನು ಅಪ್ಪಿದ್ದಾರೆ. ಇದು ಅತ್ಯಂತ ದುರಂತ ಮತ್ತು ಖಂಡನೀಯ. ಕೂಡಲೇ ಪ್ರಕರಣವನ್ನು ಕುರಿತಂತೆ ಸಮಗ್ರವಾದ ತನಿಖೆ ಯನ್ನು ನಡೆಸಿ ಆರೋಪಗಳಿಗೆ ಕಠಿಣ ಶಿಕ್ಷೆಗೆ ಒಳಪಡಿಸಿಬೇಕು. ಹಾಗೂ ಜಸ್ಟಿಸ್ ವರ್ಮಾ ಸಮಿತಿಯ ಶಿಫಾರಸುಗಳನ್ನು ಜಾರಿಗೆ ತರಬೇಕು. ರಾಜ್ಯದಲ್ಲಿ ವಿ.ಎಸ್ ಉಗ್ರಪ್ಪ ಸಮಿತಿ ಶಿಪಾರಸ್ಸುಗಳನ್ನ ಜಾರಿಗೊಳಿಸಬೇಕು, ಶಾಲಾ ಕಾಲೇಜುಗಳಲ್ಲಿ ಮತ್ತು ದುಡಿಯುವ ಸ್ಥಳದಲ್ಲಿ ಲೈಂಗೀಕ ವಿರೋಧಿ ಸಮಿತಿ ರಚಿಸಬೇಕು & ಇಡೀ ದೇಶ ವ್ಯಾಪಿ ವಿದ್ಯಾರ್ಥಿನಿಯರ ಮತ್ತು ಮಹಿಳೆಯರ ರಕ್ಷಣೆಯನ್ನು ಒದಗಿಸಲು ಮುಂದಾಗಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಎಸ್‌ಎಫ್‌ಐ ತಾಲೂಕ ಅಧ್ಯಕ್ಷ ಗ್ಯಾನೇಶ ಕಡಗದ ಕಾರ್ಯದರ್ಶಿ ಶಿವಕುಮಾರ ಪ್ರಮುಖರಾದ ಬಾಳಪ್ಪ ಹುಲಿಹೈದರ, ಮಂಜುನಾಥ ಡಗ್ಗಿ,ಹನುಮೇಶ ಆಗೋಲಿ, ಸೋಮುನಾಥ, ಶರೀಪ್, ಬಸಯ್ಯ ಹಿರೇಮಠ, ಮೋಹಿನ್ ಪಾಷ್ ಟಿಪ್ಪುಸುಲ್ತಾನ, ಅನೇಕರು ಉಪಸ್ಥಿತರಿದ್ದರು. ●



ಸೆಪ್ಟೆಂಬರ್ 23 ರಂದು, ಕರ್ನಾಟಕ ವಿಧಾನ ಸಭೆಯಲ್ಲಿ ದಲಿತ ಸಂಬಂದಿ ಸಮಸ್ಯೆಗಳನ್ನು ಚರ್ಚೆ ನಡೆಸಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿ ದಲಿತ ಹಕ್ಕುಗಳ ಸಮಿತಿಯ ವತಿಯಿಂದ, "ಧರಣಿ " ನಡೆಸಲಾಯಿತು. ಸುಮಾರು 120 ಕ್ಕಿಂತ ಹೆಚ್ಚು ಜನರು ಭಾಗವಹಿಸಿದ್ದ ಈ ಧರಣಿ ಯನ್ನು ಉದ್ದೇಶಿಸಿ, ಗೋಪಾಲಕೃಷ್ಣ ಹರಳಹಳ್ಳಿ, ನಾಗರಾಜ ನಂಜುಂಡಯ್ಯ, ಎನ್.ರಾಜಣ್ಣ, ಶರಣಪ್ಪ ರಾಜ್ಯ ಡಿಎಚ್ ಎಸ್ ಮುಂಖಡರು ಮಾತನಾಡಿದರು. ದಲಿತ ಸಂಘರ್ಷ ಸಮಿತಿ (ಭೀಮವಾದ), ರಾಜ್ಯ ಅದ್ಯಕ್ಷ ರಾದ ಆರ್. ಮೋಹನ್ ರಾಜು, ಕರ್ನಾಟಕ ರಾಜ್ಯ ಎಸ್ ಸಿ/ ಎಸ್.ಟಿ ಸಮನ್ವಯ ಸಮಿತಿಯಿಂದ ಡಿ.ಶಿವಶಂಕರ್, ಕೆನರಾಬ್ಯಾಂಕ್ ಎಸ್ಸಿ ಎಸ್ಟಿ ಅಖಿಲ ಭಾರತ ಮುಂಖಡರಾದ ಆರ್.ಗುರುಸ್ವಾಮಿ, ಕಾರ್ಪೊರೇಷನ್ ಬ್ಯಾಂಕ್ ಎಸ್ ಸಿ ಎಸ್ಟಿ ಮುಂಖಡರಾದ ಮಂಚಯ್ಯ, ಎಲ್.ಐ.ಸಿ ಎಸ್ಸಿ ಎಸ್ಟಿ ನಾಯಕರಾದ ಗೋಪಾಲ್, ಡಿಎಚ್‌ಎಸ್ ನ ರಾಜಶೇಖರ ಮೂರ್ತಿ, ಮಹಾದೇವ, ಇನ್ನಿತರರು ಭಾಗವಹಿಸಿದ್ದರು

ಧರಣಿಯನ್ನು ಉದ್ದೇಶಿಸಿ, ರೈತ ಮುಂಖಡರಾದ ಕೋಡಿ ಹಳ್ಳಿ ಚಂದ್ರಶೇಖರ ರವರು ಮಾತನಾಡಿ, ದಲಿತರ ಹೋರಾಟಗಳಿಗೆ ರೈತರು ಸದಾ ಬೆಂಬಲ ನೀಡುತ್ತಲೇ ಬಂದಿದ್ದಾರೆ. ಇನ್ನೂ ಮುಂದೆಯು ಬೆಂಬಲ ಮುಂದುವರಿಯುತ್ತದೆ. ಭೂ ಸುಧಾರಣಾ ಕಾಯ್ದೆಗೆ ತಂದಿರುವ ತಿದ್ದುಪಡಿಗಳನ್ನು ವಿರೋದ ಮಾಡುತ್ತಿರು ಈ ನಿಮ್ಮ ಹೋರಾಟಕ್ಕೆ ಶುಭವಾಗಲಿ ಎಂದು ಆರೈಸಿದರು. ■

ಸಾಮ್ರಾಜ್ಯಶಾಹಿಯ ಕಾರ್ಯಸೂಚಿಯ ಜಾರಿಗೆ ಮೋದಿಯ ಕೃಷಿ ಮಸೂದೆಗಳು

ಪುಟ 13 ರಿಂದ

ಬೆಳೆಯುವುದು ಮತ್ತು ಕ್ರಯಸ್ವಾಮ್ಯ ಶೋಷಣೆಗೆ ಒಳಗಾಗುವುದು. ವಸಾಹತುಶಾಹಿ ಕಾಲದ ಬಂಗಾಳ ಪ್ರಾಂತ್ಯದಲ್ಲಿ ಹೀಗೆಯೇ ಆಗಿತ್ತು. ಆಹಾರ ಧಾನ್ಯಗಳ ಬದಲಿಗೆ ಅಫೀಮು ಮತ್ತು ನೀಲಿ (ಇಂಡಿಗೋ) ಮುಂತಾದ ರಫ್ತು ಬೆಳೆಗಳನ್ನು ಗುತ್ತಿಗೆ ಕೃಷಿ ಪದ್ಧತಿಯ ಮೂಲಕ ಬೆಳೆದ ಫಸಲನ್ನು ಕ್ರಯಸ್ವಾಮ್ಯ ಶೋಷಣೆಗೆ ಒಳಪಡಿಸಲಾಗಿತ್ತು. ದೀನಬಂಧು ಮಿತ್ರ ಅವರ ಹತ್ತೊಂಬತ್ತನೆಯ ಶತಮಾನದ ನಾಟಕ 'ನೀಲ್ ದರ್ಪಣ'ದಲ್ಲಿ ಇಂಡಿಗೋ ವ್ಯಾಪಾರಿಗಳು ರೈತರನ್ನು ಹೇಗೆ ಶೋಷಣೆಗೆ ಒಳಪಡಿಸಿದ್ದರು ಎಂಬುದನ್ನು ಮನೋಜ್ಞವಾಗಿ ಚಿತ್ರಿಸಲಾಗಿದೆ. ಇಂತಹ ಶೋಷಣೆಯ ಅಪಾಯವು ರೈತರನ್ನು ದಿಗಿಲು ಬೀಳಿಸಿದೆ. ಅವರು ಇಂತಹ ಅಪಾಯದಿಂದ ತಪ್ಪಿಸಿಕೊಳ್ಳಲು ಬಯಸುತ್ತಾರೆ.

ಇದುವರೆಗೆ ರೂಢಿಯಲ್ಲಿದ್ದ ಕೃಷಿ ವ್ಯವಸ್ಥೆಯ ಬಗ್ಗೆ ಎದ್ದು ಕಾಣುವ ಒಂದು ಅಂಶವೆಂದರೆ, ರೈತರ ಹಿತಾಸಕ್ತಿಗಳನ್ನು ಸರ್ಕಾರವು ಎಷ್ಟೇ ಅಸಮರ್ಪಕವಾಗಿ ನೋಡಿಕೊಂಡಿದ್ದರೂ ಸಹ, ಭೂ ಬಳಕೆಯನ್ನು ರಫ್ತು ಬೆಳೆಗಳತ್ತ ದೊಡ್ಡ ಪ್ರಮಾಣದಲ್ಲಿ ವಾಲುವುದನ್ನು ತಡೆದಿದೆ. ಈ ವ್ಯವಸ್ಥೆಯನ್ನು ಕಳಚಿಹಾಕುವುದರಿಂದ ರೈತರ ಹಿತಕ್ಕೆ ಧಕ್ಕೆಯಾಗುವುದು ಮಾತ್ರವಲ್ಲ, ಆಹಾರ ಧಾನ್ಯಗಳ ಬದಲಿಗೆ ಲಭ್ಯ ಭೂ ಪ್ರದೇಶವು ರಫ್ತು ಬೆಳೆಗಳಿಗೆ ಬಳಕೆಯಾಗುವುದರಿಂದ ದೇಶದ ಆಹಾರ ಭದ್ರತೆಯು ದುರ್ಬಲಗೊಳ್ಳುತ್ತದೆ.

ವಿಷಯ ನಿಜಕ್ಕೂ ಸರಳವಾಗಿದೆ. ಭೂಮಿಯು ಒಂದು ವಿರಳ ಸಂಪನ್ಮೂಲವಾಗಿರುವ ಕಾರಣದಿಂದಾಗಿ, ಭೂ ಬಳಕೆಯನ್ನು ಸಾಮಾಜಿಕ ನಿಯಂತ್ರಣಕ್ಕೆ ಒಳಪಡಿಸಬೇಕು. ಖಾಸಗಿ ಲಾಭದ ನೆಲೆಯಲ್ಲಿ ಅದನ್ನು ಪರಿಗಣಿಸಲಾಗದು. ಭೂ ಬಳಕೆಯನ್ನು ಸಾಮಾಜಿಕ ನಿಯಂತ್ರಣಕ್ಕೆ ಒಳಪಡಿಸಿದ್ದರೂ ಸಹ, ಭೂಮಿಯು ರೈತರ ಕೈಯಲ್ಲಿರುವ ಕಾರಣದಿಂದಾಗಿ, ಅವರ ಹಿತಾಸಕ್ತಿಯನ್ನು ಕಾಪಾಡಬೇಕಾಗುತ್ತದೆ. ಆದ್ದರಿಂದ, ಅವರಿಗೆ ಲಾಭದಾಯಕ ಬೆಲೆ ಸಿಗಬೇಕು. ಅದನ್ನು ಈಗಿರುವ ಏರ್ಪಾಟು ಸಾಧಿಸಲು ಪ್ರಯತ್ನಿಸಿದೆ. ಈ ಪ್ರಯತ್ನವನ್ನು ಈಗಿನ ಸರ್ಕಾರವು ನಾಶಪಡಿಸಲು ಬಯಸುತ್ತದೆ. ಈಗಿರುವ ಏರ್ಪಾಟುಗಳಲ್ಲಿ ಏನೇ ಲೋಪ ದೋಷಗಳಿದ್ದರೂ ಅವುಗಳನ್ನು ಈ ಏರ್ಪಾಟಿನ ಪರಿಮಿತಿಯೊಳಗೇ ಸರಿಪಡಿಸಿಕೊಳ್ಳಬೇಕು. ಭೂ ಬಳಕೆಯನ್ನು ಸಾಮಾಜಿಕ ನಿಯಂತ್ರಣಕ್ಕೆ ಒಳಪಡಿಸಬೇಕು ಎಂಬುದರ ಅರಿವಿಲ್ಲದ ಮತ್ತು ಮೂರ್ಖತನದೊಂದಿಗೆ ನಂಟು ಬೆಳಸಿರುವ ಬಿಜೆಪಿ ಸರ್ಕಾರವು ಇಂತಹ ಒಂದು ಏರ್ಪಾಟನ್ನು ನಾಶಮಾಡಲು ಹೊರಟಿದೆ. ಸಾಮ್ರಾಜ್ಯಶಾಹಿಯು ಇಂತಹ ವಿನಾಶವನ್ನು ಬಯಸುತ್ತದೆ. ಬಿಜೆಪಿ ಸರ್ಕಾರವು ಅದನ್ನು ನಿರಾಯಾಸವಾಗಿ ಮಾಡುತ್ತಿದೆ.

ಭೂಮಿಯು ಒಂದು ವಿರಳ ಸಂಪನ್ಮೂಲವಾಗಿರುವ ಕಾರಣದಿಂದಾಗಿ, ಭೂ ಬಳಕೆಯ ಮೇಲೆ ಸಾಮಾಜಿಕ ನಿಯಂತ್ರಣವನ್ನು ಹೊಂದಬೇಕಾದ ಅಗತ್ಯದ ಬಗ್ಗೆ, ಇಡೀ ಸಮಾಜವಾದಿಯೇತರ ತೃತೀಯ ಜಗತ್ತಿನಲ್ಲಿ, ತೀವ್ರ ಕಾಳಜಿ ಮತ್ತು ಅರಿವು ಹೊಂದಿರುವ ಏಕೈಕ ಪ್ರದೇಶವೆಂದರೆ ಕೇರಳ. ಆ ರಾಜ್ಯವು ಭತ್ತ ಬೆಳೆಯುವ ಭೂಮಿಯಲ್ಲಿ ಬೇರೆ ಪೈರು ಬೆಳೆಯುವಂತಿಲ್ಲ ಎಂಬುದನ್ನು ಶಾಸನಬದ್ಧಗೊಳಿಸಿ ತನ್ನ ಛಲವನ್ನು ತೋರಿಸಿದೆ. ಬಿಜೆಪಿ ಸರಕಾರದ ಕೃಷಿ ಮಸೂದೆಗಳು ಅದಕ್ಕೆ ತದ್ವಿರುದ್ಧವಾಗಿವೆ.

ರೈತಾಪಿ ಜನರ ನಡುವಿನ ಕೆಲಸ ಕಾರ್ಯಗಳು

ಪುಟ 11 ರಿಂದ

ಮಾತ್ರವೇ ನಾವು ಕಾರ್ಮಿಕ ವರ್ಗ ಮತ್ತು ರೈತಾಪಿ ಜನಗಳ ನಡುವಿನ ಐಕ್ಯತೆಯನ್ನು ಸಾಧಿಸಬಹುದು, ಅದುವೇ ನಮ್ಮ ಅಂತಿಮ ಜಯಕ್ಕೆ ದಾರಿ.

"ರೈತ ಚಳುವಳಿಯನ್ನು ಬೆಳೆಸಲು ಕಾರ್ಮಿಕ ವರ್ಗದಲ್ಲಿನ ಪಕ್ಷದ ಕಾರ್ಯಕರ್ತರನ್ನು ಕೈಗಾರಿಕಾ ಕೇಂದ್ರಗಳಿಂದ ನೆರೆಹೊರೆಯ ರೈತರ ಪ್ರದೇಶಗಳಿಗೆ ಕಳಿಸಲು ಪಕ್ಷವು ದೃಢ ಸಂಕಲ್ಪ ಮಾಡಬೇಕು.

"ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿಗಳು ಮತ್ತವರ ಕಿರಿಯ ಪಾಲುದಾರ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಮೂರನೇ ವಿಶ್ವಯುದ್ಧ ಆರಂಭಿಸಲು ಮಾಡುತ್ತಿರುವ ಆ ಯುದ್ಧಕೋರರ ಕಾರ್ಯಾಚರಣೆಯ ವಿರುದ್ಧ ರೈತ ಸಮುದಾಯವನ್ನು ಪಕ್ಷ ಮತ್ತು ಕಿಸಾನ್ ಸಭಾ ಎಚ್ಚರಿಸಬೇಕು.

"ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮ ಮತ್ತು ನೀತಿಗಳು ಹೇಗೆ ಜನರ ಮುಖ್ಯವಾಗಿ ರೈತಾಪಿ ಜನರ ಸೇವೆಗಾಗಿ ಅಚಲವಾದ ನಿಲುವನ್ನು ಹೊಂದಿದೆ ಎಂಬುದನ್ನು ಜನಪ್ರಿಯಗೊಳಿಸುವುದು ಕೂಡ ಅಗತ್ಯವಿದೆ. ರೈತ ಹಾಗೂ ಕೃಷಿ ಕೂಲಿಕಾರರ ಸಮರಶೀಲರ ಕಾರ್ಯಕರ್ತರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲು ವ್ಯವಸ್ಥಿತ ಪ್ರಚಾರ ಮತ್ತು ಶಿಕ್ಷಣ ಒಂದು ಕಡೆಯಾದರೆ, ಮತ್ತೊಂದೆಡೆ ಮಧ್ಯಮ ವರ್ಗ ಮತ್ತು ಪ್ರಜ್ಞಾವಂತ ವಿಭಾಗದ ಪಕ್ಷದ ಕಾರ್ಯಕರ್ತರನ್ನು ರೈತ ಸಮುದಾಯದ ನಡುವೆ ಕಳಿಸುವ ಕಾರ್ಯವೂ ವ್ಯವಸ್ಥಿತವಾಗಿ ನಡೆಯಬೇಕು. ಹೀಗೆ ಮಾತ್ರವೇ ಪಕ್ಷದ ಸೈದ್ಧಾಂತಿಕ, ರಾಜಕೀಯ ಹಾಗೂ ಸಂಘಟನಾತ್ಮಕ ಸಂಬಂಧಗಳನ್ನು ಲಕ್ಷಾಂತರ ರೈತರು ಮತ್ತು ಕೃಷಿ ಕೂಲಿಕಾರರೊಂದಿಗೆ ಬಲಪಡಿಸಬಹುದು, ಅದು ನಮ್ಮ ತಕ್ಷಣದ ಮತ್ತು ತುರ್ತಿನ ಕೆಲಸವಾಗಿದೆ.

ರೈತ ಮಹಿಳೆಯರನ್ನು ಕಿಸಾನ್ ಸಭಾಕ್ಕೆ ಸೇರಿಸಲು ಮತ್ತು ಅದರ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡಲು ಪಕ್ಷ ಮತ್ತು ಕಿಸಾನ್ ಸಭಾವು ವಿಶೇಷ ಪ್ರಯತ್ನ ಮಾಡಬೇಕು. ಮಹಿಳೆಯರ ಬೇಡಿಕೆಗಳನ್ನು ಮುಖ್ಯವಾಗಿ ರೈತ ಮಹಿಳೆಯರನ್ನು ಬಾಧಿಸುವ ಬೇಡಿಕೆಗಳನ್ನು ರೂಪಿಸಲು ವಿಶೇಷ ಪ್ರಯತ್ನ ನಡೆಸಬೇಕು ಮತ್ತು ಅವುಗಳ ಪರವಾಗಿ ಹೋರಾಡಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು. ರೈತ ಮಹಿಳಾ ಕಾರ್ಯಕರ್ತರನ್ನು ತರಬೇತಿಗೊಳಿಸಲು ವಿಶೇಷ ಪ್ರಯತ್ನಗಳಾಗಬೇಕು.

"ಹಲವಾರು ಪ್ರಶ್ನೆಗಳ ಮೇಲೆ, ಚಳುವಳಿಯಲ್ಲಿ ನಾವು ಹಿಂದೆ ಬಿದ್ದಿದ್ದೇವೆ. ತಾತ್ವಿಕ ಸ್ಪಷ್ಟತೆಯ ಕೊರತೆ ಮತ್ತು ಗೊಂದಲಗಳು ಅದಕ್ಕೆ ಮುಖ್ಯ ಕಾರಣ. ರೈತರ ವರ್ಗೀಕರಣದ, ಭಾರತದ ಕಾರ್ಷಿಕ ಆರ್ಥಿಕತೆಯ ವಸಾಹತುಶಾಹೀ ಸಂರಚನೆ, ಕೃಷಿ ಬೆಳವಣಿಗೆಯಲ್ಲಿನ ಇತ್ತೀಚಿನ ಪ್ರವೃತ್ತಿಗಳು, ಕಾಂಗ್ರೆಸ್ಸಿನ ಕಾರ್ಷಿಕ ಶಾಸನಗಳ ಗುರಿ ಮುಂತಾದವುಗಳ ಪರಾಮರ್ಶೆಯನ್ನು ಪಕ್ಷದ ಕೇಂದ್ರ ಸಮಿತಿಯು ಎಐಕೆಎಸ್‌ನ ಪ್ರಧಾನ ಸಂಗಾತಿಗಳೊಂದಿಗೆ ಸಮಾಲೋಚನೆ ನಡೆಸಿ ಮಾಡಬೇಕು.

"ಕಿಸಾನ್ ಸಭಾ ಅಥವಾ ಗ್ರಾಮ ಘಟಕಗಳು ಜೀವಂತವಾಗಿರಬೇಕು ಮತ್ತು ನೈಜ ಕಾರ್ಯನಿರ್ವಹಣೆಯು ಕೇಂದ್ರವಾಗಬೇಕು, ದಿನನಿತ್ಯದ ಕೆಲಸ ಮತ್ತು ಹೋರಾಟಗಳನ್ನು ಅದು ನಡೆಸಬೇಕು. ಇಲ್ಲಿಯವರೆಗೆ ಅವು ಹೆಸರಿಗೆ ಮಾತ್ರ ದಾಖಲೆಗಳಲ್ಲಿ ಇವೆಯಷ್ಟೆ. ಅವುಗಳನ್ನು ಕಟ್ಟಿ ಕ್ರಿಯಾಶೀಲಗೊಳಿಸುವುದು ಬಹು ಮುಖ್ಯ ಕೆಲಸವಾಗಬೇಕು."

ಅರ್ಮೇನಿಯಾ ಮತ್ತು ಅಜೆರ್ಬೈಜಾನ್ ನಡುವಿನ ಘರ್ಷಣೆ; ಯುದ್ದಕ್ಕೆ ನಾಂದಿಯಾಗುವ ಸಾಧ್ಯತೆ?



ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಸುಮಾರು ನಾಲ್ಕು ದಶಕಗಳಿಂದ ಅರ್ಮೇನಿಯಾ ಮತ್ತು ಅಜೆರ್ಬೈಜಾನ್ ದಕ್ಷಿಣ ಕಾಕಸಸ್ ನ ಪರ್ವತ ಪ್ರದೇಶದಲ್ಲಿ ನೆಲೆಗೊಂಡಿರುವ ಒಂದು ತುಂಡು ಭೂಮಿ "ನಾಗೋರ್ನೋ ಕರಾಬಖ್" ವಿವಾದ ಕುರಿತಾಗಿ ಎರಡು ದೇಶಗಳು ಘರ್ಷಣೆಯಲ್ಲಿ ತೊಡಗಿವೆ. ವಿವಾದಿತ ನಾಗೋರ್ನೋ ಕರಾಬಖ್' ಪ್ರದೇಶದ ಬಗ್ಗೆ ಅರ್ಮೇನಿಯಾ ಮತ್ತು ಅಜೆರ್ಬೈಜಾನ್ ನಡುವೆ ಹೊಸ ಸುತ್ತಿನ ಘರ್ಷಣೆಗಳು ಇದೇ ಸೆಪ್ಟೆಂಬರ್ 27, ರಂದು ಮತ್ತೆ ಭುಗಿಲೆದ್ದವು. ಎರಡೂ ದೇಶಗಳ ನಡುವೆ ಪೂರ್ಣ ಪ್ರಮಾಣದ ಯುದ್ಧದ ಸಾಧ್ಯತೆಯ ಬಗ್ಗೆ ಕಳವಳ ವ್ಯಕ್ತವಾಗಿದೆ. ಗಡಿಯೊಳಗೆ ಸೆಪ್ಟೆಂಬರ್ 27, (ಭಾನುವಾರ) ಮತ್ತು ಸೆಪ್ಟೆಂಬರ್ 28, (ಸೋಮವಾರ), ತೀವ್ರ ಘರ್ಷಣೆಗಳು ನಡೆದಿರುವುದು ಗಾಬರಿ ಹುಟ್ಟಿಸಿವೆ. ಎಷ್ಟರ ಮಟ್ಟಿಗೆ ಎಂದರೆ, 2016 ರಲ್ಲಿ ನಡೆದ ಘರ್ಷಣೆಗಿಂತ ತೀವ್ರವಾಗಿದೆ ಎಂದು ವರದಿಯಾಗಿದೆ. ಇದರಲ್ಲಿ ಹಲವಾರು ಹೋರಟಗಾರರು ಮತ್ತು ನಾಗರಿಕರು ಸಾವನ್ನಪ್ಪಿದ್ದಾರೆ. ಸಾಂದರ್ಭಿಕವಾಗಿ ಉಭಯ ದೇಶಗಳ ಘರ್ಷಣೆ ಹೊಸತೇನಲ್ಲಾ ಆದರೆ, ಇದಕ್ಕೆ ಅಂತರಾಷ್ಟ್ರೀಯ ಸಮುದಾಯ ಹೇಗೆ ಪ್ರತಿ ಕ್ರಿಯಿಸುತ್ತದೆ ಎಂಬುದನ್ನು ನೋಡಬೇಕಾಗಿದೆ.

ನಾಗೋರ್ನೋ ಕರಾಬಖ್ ನಲ್ಲಿನ ನಾಗರಿಕ ವಸಾಹತುಗಳ ಮೇಲೆ ಅಜೆರ್ಬೈಜಾನ್ ದಾಳಿ ನಡೆಸಿದೆ ಎಂದು ಅರ್ಮೇನಿಯನ್ ಅಧಿಕಾರಿಗಳು ಆರೋಪಿಸಿದ್ದಾರೆ. ಈ ದಾಳಿಯಲ್ಲಿ 31 ಅರ್ಮೇನಿಯನ್ ಸೈನಿಕರು ಸಾವನ್ನಪ್ಪಿದ್ದಾರೆ ಮತ್ತು 100 ಕ್ಕೂ ಹೆಚ್ಚು ಸೈನಿಕರು ಗಾಯಗೊಂಡಿದ್ದಾರೆ. 19,000 ಕ್ಕೂ ಹೆಚ್ಚು ಜನಸಂಖ್ಯೆ ಯನ್ನು ಹೊಂದಿರುವ ಗಡಿ ಪಟ್ಟಣ ವಾದ ಟೆರ್ಟರ್ ಗೆ, ಶೆಲ್ ದಾಳಿ ನಡೆಸಲು ಅರ್ಮೇನಿಯನ್ ಸಶಸ್ತ್ರ ಪಡೆಗಳಿಗೆ ಆದೇಶಿಸಲಾಗಿದೆ. ಹೋರಾಟಗಾರರಲ್ಲದ, ಸಾಮನ್ಯ ನಾಗರಿಕರು ಅರ್ಮೇನಿಯನ್ ರ ಈ ದಾಳಿಯಲ್ಲಿ ಸಾವನ್ನಪ್ಪಿದ್ದಾರೆ ಎಂದು ಅಜೆರ್ಬೈಜಾನ್ ವರದಿ ಮಾಡಿದೆ. ಹೀಗೆ ಎರಡೂ ಕಡೆಗಳಿಂದ ದಾಳಿ ಪ್ರತಿ ದಾಳಿ ನಡೆಸುತ್ತಿರುವುದು ಈ ವಾರ ಹೆಚ್ಚಾಗಿದೆ.

ಅರ್ಮೇನಿಯಾ, ನಾಗೋರ್ನೋ–ಕರಾಬಖ್ ಮತ್ತು ಅಜೆರ್ಬೈಜಾನ್ – ಘರ್ಷಣೆ ಯಲ್ಲಿ ತೊಡಗಿರುವ ಮೂರು ಕಡೆಯ ಪಕ್ಷಗಳು, ಒಂದು ಸಣ್ಣ ಒಪ್ಪಂದಕ್ಕೆ ಬಂದು ಭಾನುವಾರ ಆಯಾ ಪ್ರದೇಶಗಳಲ್ಲಿ ಕಾನೂನು ಮತ್ತು ಪೂರ್ಣ ಸಮರ ನಿರ್ಬಂಧ ವನ್ನು ಘೋಷಿಸಿವೆ. ಆ ನಂತರವು, ಅರ್ಮೇನಿಯನ್ ವಿದೇಶಾಂಗ ಸಚಿವಾಲಯವು, ಅಜೆರ್ಬೈಜಾನ್ ಆಕ್ರಮಣಕಾರಿ ಎಂದು ಆರೋಪಿಸಿದ್ದಾರೆ. ಹಾಗೆಯೇ, ನಾವು " ನಾಗೋರ್ನೋ–ಕರಾಬಖ್" ಜನರ ಸ್ವಾತಂತ್ರ್ಯ" ವನ್ನು ಹೇಗಾದರೂ ರಕ್ಷಿಸುವುದಾಗಿ ಅರ್ಮೇನಿಯನ್ ರು ಪ್ರತಿಜ್ಞೆ ಮಾಡಿದ್ದಾರೆ.

ನಾಗೋರ್ನೋ–ಕರಾಬಖ್, ಅಜೆರ್ಬೈಜಾನ್ ನಿಂದ ಒಡೆದು ಹೋದ ಪ್ರದೇಶವಾಗಿದ್ದು, ಹೆಚ್ಚು ಅರ್ಮೇನಿಯನ್ ಜನಾಂಗದವರು ಬಹುಮತವನ್ನು ಹೊಂದಿರುವ ಪ್ರದೇಶವಾಗಿದೆ. 1991 ರಲ್ಲಿ ಸೋವಿಯತ್ ಒಕ್ಕೂಟದ ವಿಸರ್ಜನೆಯ ನಂತರ ಈ ಪ್ರದೇಶವು ಅಜೆರ್ಬೈಜಾನ್ ನಿಂದ ತನ್ನ ಸ್ವಾತಂತ್ರ್ಯವನ್ನು ಪ್ರತ್ಯೇಕವಾಗಿ ಘೋಷಿಸಿ ಕೊಂಡಿತು. ಇದು ವಿವಾದಿತವಾಗಿ, ಎರಡು ಟ್ರಾನ್ಸ್ ಕಾಕೇಶಿಯನ್ ದೇಶಗಳ ನಡುವಿನ ಯುದ್ಧಕ್ಕೆ ಕಾರಣವಾಯಿತು. ಇದಕ್ಕೆ ಕಾರಣ, ಹಲವಾರು ವರ್ಷಗಳಿಂದ ಟ್ರಾನ್ಸ್ ಕಾಕಸಸ್ ಇತಿಹಾಸದ ಮೇಲೆ ಪರಿಣಾಮ ಬೀರಿದ ಪ್ರಮುಖ ಪ್ರಾದೇಶಿಕ ಶಕ್ತಿ ಗಳಾದ ರಷ್ಯಾ, ಇರಾನ್ ಮತ್ತು ಟರ್ಕಿ ದೇಶಗಳ ನಡುವಿನ ಪೈಪೋಟಿ ಪುನರುಜ್ಜೀವನಗೊಂಡು ಘರ್ಷಣೆ ಗೆ ಹೊಸ ಸಂಕೀರ್ಣ ಗಳನ್ನು ತಂದೊಡ್ಡಿದವು. 70 ವರ್ಷಗಳ ಹಿಂದೆ ಅರ್ಮೇನಿಯಾ ಮತ್ತು ಅಜೆರ್ಬೈಜಾನ್ ನಡುವಣ ವೈರತ್ವವು ಯುಎಸ್ ಎಸ್ ಆರ್ ನ ಆಂತರಿಕ ವಿಷಯವಾಗಿರಲಿಲ್ಲ. ಏಕೆಂದರೆ, ಡಿಸೆಂಬರ್ 1991 ರಲ್ಲಿ ಸೋವಿಯತ್ ಒಕ್ಕೂಟ ಅಸ್ತಿತ್ವದಲ್ಲಿ ಇರಲಿಲ್ಲ. ಅದು ವಿಸರ್ಜನೆಯಾಗಿತ್ತು. ಅದಾದನಂತರ ಘರ್ಷಣೆ ಹೊಸ ಸ್ವರೂಪ ಪಡೆಯಿತು ಎನ್ನಲಾಗಿದೆ.

ಹೀಗಾಗಿ, ಮೇ 1994 ರಲ್ಲಿ ರಷ್ಯಾ ಉಭಯ ದೇಶಗಳ ನಡುವೆ ಕದನ ವಿರಾಮಕ್ಕೆ ಮಧ್ಯಸ್ತಿಕೆ ವಹಿಸಿತ್ತು. ಆದರೆ, ಸಂಘರ್ಷವನ್ನು ನಿಲ್ಲಿಸಲು ಅದು ಅನುವು ಮಾಡಿ ಕೊಡಲಿಲ್ಲ. ಆದರೆ, ಮುಂದಿನ ಮೂರು ದಶಕದವರೆಗೆ ಕದನ ವಿರಾಮ ಉಲಂಘನೆ ಮತ್ತು ಹಿಂಸಾಚಾರ ನಡೆಯದಂತೆ ಒಪ್ಪಿಸಲಾಯಿತು. ಅಜೆರ್ಬೈಜಾನ್ ಪ್ರದೇಶದ ಬಹುಪಾಲು ಭಾಗವು ಅರ್ಮೇನಿಯನ್ನ ನಿಯಂತ್ರಣದಲ್ಲಿದೆ. ಇದು ವಿವಾದಕ್ಕೆ ಮೂಲ ಕಾರಣ. ಇದಕ್ಕಾಗಿ, ಕಾಲಕಾಲಕ್ಕೆ ಘರ್ಷಣೆಗಳು ಭುಗಿಲೇಳುತ್ತವೆ. ಈ ವಿವಾದಕ್ಕೆ ಇನ್ನು ಅಂತಿಮ ಪರಿಹಾರ ಸಿಕ್ಕಿಲ್ಲ.

ಆದರೆ, ಈ ವರ್ಷ ಜುಲೈ ನಲ್ಲಿ ಹೊಸ ಹಿಂಸಾಚಾರ ಭುಗಿಲೆದ್ದಿತು. ಕಾರಣ ಎರಡು ದೇಶಗಳು 1994 ರ ಕದನ ವಿರಾಮವನ್ನು ಉಲಂಘನೆ ಮಾಡಿದ್ದು. ಇದರ ಪರಿಣಾಮ ಒಬ್ಬ ನಾಗರಿಕ ಸೇರಿದಂತೆ, 18 ಜನರು ಸಾವನ್ನಪ್ಪಿದರು. ಅರ್ಮೇನಿಯನ್ ಸೈನ್ನ ಪಡೆ ಅದರ ನಿಯಂತ್ರಣ ರೇಖೆಯನ್ನು ಮೀರಿ ಹೊಸ ಪೋಸ್ಟ್ ಅನ್ನು ಸ್ಥಾಪಿಸುವ ಕ್ರಮವು ಜುಲೈ ನ ಘರ್ಷಣೆಗಳಿಗೆ ಏಕಾಏಕಿ ಕಾರಣವಾಯಿತು.

ಎರಡೂ ದೇಶಗಳ ನಾಯಕರು ಪ್ರಸ್ತುತ ಕೋರೋನಾ ಸಾಂಕ್ರಾಮಿಕ ಪರಿಸ್ಥಿತಿ ಯನ್ನು ನಿಭಾಯಿಸುವ ಕಾರ್ಯದಲ್ಲಿ ತೊಡಗಿರುವುದರಿಂದ, ಘರ್ಷಣೆ ಯನ್ನು ನಿಭಾಯಿಸಲು ಸಾಧ್ಯವಾಗಿಲ್ಲ. ಆದರೆ, ಇದೀಗ ಮತ್ತೊಮ್ಮೆ ಈ ವಾರ ಘರ್ಷಣೆ ಭುಗಿಲೆದ್ದಿದೆ. ಬೆಳೆಯತ್ತಿರುವ ಅಜೆರ್ಬೈಜಾನ್ ಮತ್ತು ಅರ್ಮೇನಿಯನ್ ರಾಷ್ಟ್ರೀಯತೆಯೊಂದಿಗೆ, ಸ್ಥಳಾಂತರ , ರಕ್ತಪಾತ ಮತ್ತು ಜನಾಂಗೀಯ ಶುದ್ಧೀಕರಣದ ವರದಿಗಳು ಘರ್ಷಣೆಯ ಭಾಗವಾಗಿವೆ.

ಏತನ್ಮಧ್ಯೆ, ಅಂತರಾಷ್ಟ್ರೀಯ ಶಕ್ತಿಗಳ ಒಳಗೊಳ್ಳುವಿಕೆಯ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ. ಹಾಗಾಗಿ, ವ್ಯಾಪಕ ಪ್ರಾದೇಶಿಕ ಯುದ್ದದ ಕಾರ್ಮೋಡದ ಸೂಚನೆಗಳು ಪ್ರಸಕ್ತ ಘರ್ಷಣೆಗಳಲ್ಲಿ ಎದ್ದು ಕಾಣುತ್ತಿವೆ. ಇದು ಈ ಎರಡು ದೇಶಗಳ ನಡುವಿನ ಯುದ್ದಕ್ಕೆ ನಾಂದಿಯಾಗುವ ಅಪಾಯಕಾರಿ ಸಂಗತಿಗಳಾಗಿವೆ.





ಉತ್ತರ ಪ್ರದೇಶದಲ್ಲಿ ಸರಣಿಯ ರೀತಿ ನಡೆಯುತ್ತಿರುವ.......

ಪುಟ 5 ರಿಂದ

ಮೋಹನ್ರಾಜ್, ಎಸ್ಎಫ್ಐ ವಾಸುದೇವ ರೆಡ್ಡಿ, ಡಿಎಚ್ಎಸ್ ಎನ್. ರಾಜಣ್ಣ, ಎಚ್.ಜಿ. ನಾಗಣ್ಣ, ಸಿಐಟಿಯು ಮುಖಂಡರಾದ ಮಹಂತೇಶ್, ಕೆ.ಎಸ್. ಲಕ್ಷ್ಮಿ, ಎಲ್.ಐ.ಸಿ ಗೋಪಾಲ್, ಕಾರ್ಪ್ ಬ್ಯಾಂಕ್ ಮಂಚಯ್ಯ, ಡಿಡಿಕೆ ಶಯಂ ಸುಂದರ್, ಬಿಎಂಟಿಸಿ ಸುರೇಶ್, ಸಿಐಟಿಯು ನಾಯಕರು ಭಾಗವಹಿಸಿದ್ದರು. ಹಾಗೂ ಕೋಲಾರ, ಮಂಡ್ಯ, ಬಳ್ಳಾರಿಯ ಹೊಸಪೇಟೆ, ಕಲ್ಬುರ್ಗಿ, ರಾಯಚೂರು, ಉತ್ತರ ಕನ್ನಡಗಳಲ್ಲಿ ಪ್ರತಿಭಟನೆ ನಡೆದಿದೆ. ಯೋಗಿ ಆದಿತ್ಯನಾಥರ ಸಾರಥ್ಯದಲ್ಲಿ ನಡೆಯುತ್ತಿರುವ ಮನುವಾದದ ಅನುಷ್ಠಾನಕ್ಕೆ ಪ್ರತಿಭಟನಾಕಾರರು ಆಕ್ರೋಷ ವ್ಯಕ್ತಪಡಿಸಿದ್ದಾರೆ.

ಹಾವೇರಿ:

ಉತ್ತರ ಪ್ರದೇಶದ ಹತ್ರಾಸ್, ಬಲರಾಂಪುರ ಜಿಲ್ಲೆಯಲ್ಲಿ ನಡೆದ ಅತ್ಯಾಚಾರ ಮತ್ತು ಕೊಲೆ ಆರೋಪಿಗಳಿಗೆ ಕಠಿಣ ಶಿಕ್ಷೆಗೆ ಒತ್ತಾಯಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ) ಹಾಗೂ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್ಎಫ್ಐ) ಜಿಲ್ಲಾ ಸಮಿತಿಗಳ ನೇತೃತ್ವದಲ್ಲಿ ಶುಕ್ರವಾರ ನಗರದ ಗಾಂಧಿ ಪ್ರತಿಮೆ ಎದುರು ಪ್ರತಿಭಟನೆ ನಡೆಯಿತು.

ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ ಮಾತನಾಡಿ, ದೇಶದಾದ್ಯಂತ ವಿದ್ಯಾರ್ಥಿನಿಯರ ಮತ್ತು ಮಹಿಳೆಯರ ಮೇಲೆ ಅತ್ಯಾಚಾರ, ದೌರ್ಜನ್ಯ, ದಬ್ಬಾಳಿಕೆ ಹಾಗೂ ಕ್ರೌರ್ಯದ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿವೆ. ಇದನ್ನು ನಿಯಂತ್ರ ಮಾಡುವಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಸಂಬಂಧಿಸಿದ ಇಲಾಖೆಗಳು ಸಂಪೂರ್ಣ ವಿಫಲವಾಗಿವೆ ಎಂದರು.

ಇಡೀ ನಾಗರಿಕ ಸಮಾಜವೆ ತಲೆ ತಗ್ಗಿಸುವಂತ ಅಮಾನವೀಯ ಮತ್ತು ಕ್ರೂರ ವಾದ ಈ ಪ್ರಕರಣವನ್ನು ಉತ್ತರ ಪ್ರದೇಶ ಸರಕಾರ ಗಂಭೀರವಾಗಿ ಪರಿಗಣಿಸಿ, ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆ ನೀಡಬೇಕು ಇಲ್ಲವಾದಲ್ಲಿ ದೇಶವ್ಯಾಪಿ ತೀವ್ರತೆರನಾದ ಹೋರಾಟಕ್ಕೆ ವಿದ್ಯಾರ್ಥಿ ಯುವಜನರು ಮುಂದಾಗಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಬಸವರಾಜ ಭೋವಿ, ಸಚಿನ ಸೂರಣಗಿ, ರಹಮತ್ ಉಲ್ಲಾ, ಅರುಣ ಆರೇರ, ಪ್ರಸನ್ನ ಕಡಕೋಳ, ವಿನಾಯಕ ಕುರುಬರ, ನಾರಾಯಣ ಕಾಳೆ, ಹಸೀನಾ ಹೆಡಿಯಾಲ, ಉಡಚಪ್ಪ ಮಾಳಗಿ, ಕೆ.ಸಿ ಅಕ್ಷತಾ, ಮಹಮದ್ ನರೆಗಲ್, ಮಾಲತೇಶ ಯಲ್ಲಾಪೂರ, ಎಂ.ಎನ್ ನಾಯಕ್, ಫಕ್ಕಿರೇಶ ಕಾಳಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಡಿಹೆಚ್ಎಸ್:

ಉತ್ತರ ಪ್ರದೇಶದ ಹತ್ರಶ್ ಜಿಲ್ಲೆಯಲ್ಲಿ ಮನೂಷಿ ಎಂಬ 19 ವರ್ಷದ ದಲಿತ ಯುವತಿಯ ಮೇಲೆ ಸಾಮೂಹಿಕ ಅತ್ಯಾಚಾರ ವೆಸಗಿರುವುದನ್ನು ದಲಿತ ಹಕ್ಕುಗಳ ಸಮಿತಿ ರಾಜ್ಯ ಸಂಚಾಲಕರಾದ ಗೋಪಾಲ ಕೃಷ್ಣ ಹರಳಹಳ್ಳಿ ಅತ್ಯುಗ್ರವಾಗಿ ಖಂಡಿಸಿದ್ದಾರೆ.

ಬಿ.ಜೆ.ಪಿ. ಆದಿತ್ಯ ನಾಥ ಸರ್ಕಾರದ ಪೋಲಿಸ್ ರು ಅತ್ಯಾಚಾರದಿಂದ ಸತ್ತ ಶವವನ್ನು ಅವರ ಕುಟುಂಬಕ್ಕೂ ನೀಡದೆ ರಾತ್ರೊ ರಾತ್ರಿ ಸುಟ್ಟು ಹಾಕಿದ್ದಾರೆ. ಭಾರತ ಮಾತಾಕೀ ಜೈ ಎನ್ನುವವರು ಇಂತಹ ಕುಕೃತ್ಯವನ್ನು ಎಸಗಿರುವುದನ್ನು ದೇಶದ ಜನ ಧಿಕ್ಕಾರಿಸಲೇಬೇಕು.

ದಲಿತ ಹಕ್ಕುಗಳ ಸಮಿತಿಯಿಂದ ಅಕ್ಟೋಬರ್ 3, ರಂದು ರಾಜ್ಯದಲ್ಲಿ ಇತರೆ ಸಂಘಟನೆಗಳ ಕೂಡಿಸಿಕೊಂಡು ಪ್ರತಿಭಟನೆ ನಡೆಸಲು ಕರೆ ನೀಡಿದೆ.

ಉತ್ತರ ಪ್ರದೇಶದ ಸರ್ಕಾರವನ್ನು ವಜ ಮಾಡಬೇಕು ಮತ್ತು ದೌರ್ಜನ್ಯ ಕ್ಕೆ ಒಳಾಗದವರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಒತ್ತಾಯಿಸುತ್ತದೆ. ಗೋಪಾಲಕೃಷ್ಣ ಹರಳಹಳ್ಳಿ, ಸಂಚಾಲಕರು.



JANASHAKTHI KANNADA VARA PATRIKE October 5-11, 2020 Price: Rs. 10/- Date of Publication: 02 October 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ರಾಜ್ಯಾದಾದ್ಯಂತ ಸಪ್ಟೆಂಬರ 28 ರ ಪ್ರತಿಭಟನೆ





ಕೇಂದ್ರ ಹಾಗೂ ಕರ್ನಾಟಕ ರಾಜ್ಯ ಸರಕಾರವು ಭೂಸುಧಾರಣಾ ತಿದ್ದುಪಡಿ ಮೊದಲಾದ ರೈತ ವಿರೋಧಿ ಶಾಸನ ಅಂಗೀಕರಿಸುವುದರ ವಿರುದ್ಧ ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ ಹಾಗೂ ರಾಜ್ಯ ರೈತ ಕಾರ್ಮಿಕ ದಲಿತ ಐಕ್ಯ ವೇದಿಕೆಯ ಕರೆಯ ಮೇರೆಗೆ ಸಪ್ಟೆಂಬರ 28 ರಂದು ಕರ್ನಾಟಕ ಬಂದ್ ನಡೆಸಲು ಹೋರಾಟ ಸಮಿತಿಗಳು ಕರೆ ನೀಡಿದ ಮೇರೆಗೆ ರಾಜ್ಯಾದಾದ್ಯಂತ ಪ್ರತಿಭಟನಾ ಪ್ರದರ್ಶನಗಳು ನಡೆದವು.







ರಾಷ್ಟ್ರವ್ಯಾಪ್ತಿ ರೈತರ ಪ್ರತಿಭಟನಾ ಉಪವಾಸ ಸತ್ಯಾಗ್ರಹ

ಪುಟ 8 ರಿಂದ

ಉಪಾಧ್ಯಕ್ಷರಾದ ಎನ್. ವೆಂಕಟಚಲಯ್ಯ, AIKS ರಾಜ್ಯ ನಾಯಕರಾದ ಶ್ರೀ ಪಿ.ವಿ. ಲೋಕೇಶ್, RKS ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಹೆಚ್.ವಿ. ದಿವಾಕರ್, AIAWU ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಚಂದ್ರಪ್ಪ ಹೊಸ್ಕೇರಾ ಮತ್ತು ಕರ್ನಾಟಕ ಜನಶಕ್ತಿ ರಾಜ್ಯ ನಾಯಕರಾದ ಶ್ರೀ ಕುಮಾರ್ ಸಮತಲ ಮತ್ತು CITU ನ ರಾಜ್ಯ ಅಧ್ಯಕ್ಷರಾದ ವರಲಕ್ಷ್ಮಿ, ರೈತ ಮುಖಂಡ ವೀರ ಸಂಗಯ್ಯ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ್ದರು.



ಹಗರಿ ಬೊಮ್ಮನಹಳ್ಳಿ



ಮಂಡ್ಯ



ಹಾಸನ



ಬಳ್ಳಾರಿ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**